ಸಂಪುಟ 15
ಸಂಚಿಕೆ 20

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
23 ಮೇ 1993

ರಾಮಸ್ವಾಮಿ ಪ್ರಕರಣದಲ್ಲಿ ಕಾಂಗ್ರೈ ಹೇಡಿತನ

ಕಾಂಗ್ರೈನ ಅಧೋಗತಿಯ ಅಳತೆಗೋಲು

-- ಜಿ.ಎನ್. ನಾಗರಾಜ್

ಅಂದು ಸಿಪಿಐ(ಎಂ)ನ ಲೋಕಸಭಾ ನಾಯಕ ಕಾಂ.ಸೋಮನಾಥ ಚಟರ್ಜಿಯವರು ಲೋಕಸಭೆಯಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯವರ ಮೇಲೆ ನಿರ್ಣಯ ಮಂಡಿಸತೊಡಗಿದಾಗ ಭಾರತದ ಸಾರ್ವಜನಿಕ ಜೀವನದಲ್ಲಿಯೇ ಹೊಸತೊಂದು ಅಧ್ಯಾಯ ಆರಂಭವಾಗಬಹುದಿತ್ತು. ಅಧಿಕಾರ ನ್ಯಾಯಾಂಗ, ಕಾರ್‍ಯಾಂಗ, ಶಾಸಕಾಂಗದ ಉನ್ನತ ಸ್ಥಾನದಲ್ಲಿರುವವರಿಗೆಲ್ಲಾ ಒಂದು ಎಚ್ಚರಿಕೆಯ ಗಂಟೆ ಬಾರಿಸಬಹುದಿತ್ತು.

ಭಾರತದ ನ್ಯಾಯಾಂಗದ ಬಗ್ಗೆ ಇನ್ನೂ ಉಳಿದಿರುವ ಗೌರವವನ್ನು ಉಳಿಸಲು ಬೆಳೆಸಲು ದೊಡ್ಡ ಕಾಣಿಕೆಯಾಗಬಹುದಿತ್ತು. ದೇಶದಲ್ಲಿರುವ ಅಸಂಖ್ಯ ನ್ಯಾಯಾಧೀಶರುಗಳಿಗೆ "ನೀವು ಭ್ರಷ್ಟರಾದರೆ ನೋಡಿ ಏನಾಗುತ್ತದೆ" ಎಂಬ ಎಚ್ಚರಿಕೆ ಮೊಳಗಿ ಹಲವಾರು ಕಡೆ ಅವನತಿಯತ್ತ ಸಾಗಿರುವ ನ್ಯಾಯಾಂಗದ ಘನತೆ ಉಳಿಸುವ ಕೆಲಸ ಸಾಗಬಹುದಿತ್ತು.

ಲೋಕಸಭೆಯ ಎಲ್ಲ ಪ್ರಮುಖ ಪಕ್ಷಗಳೂ ಇದಕ್ಕೆ ಸಿದ್ಧವಾಗಿದ್ದವು. ರಾಷ್ಟ್ರೀಯ ರಂಗ ಮತ್ತು ಎಡಪಕ್ಷಗಳು ರಾಮಸ್ವಾಮಿಯವರ ವಿರುದ್ಧ ಅವರ ಪದವಿಯನ್ನು ಕಸಿದುಕೊಳ್ಳುವ ಸೂಚನೆ ನೀಡಿ ಈ ಕೆಲಸವನ್ನು ಸ್ವತಃ ಆರಂಭಿಸಿದ್ದುವು. ಆದರೆ ಕಾಂಗ್ರೈ-ದೇಶವನ್ನು ನವಲತ್ತು ವರ್ಷಗಳಿಗೂ ಹೆಚ್ಚು ಕಾಲ ಆಳಿರುವ ಕಾಂಗ್ರೈಗೆ ಆ ಧೈರ್ಯ ಬರಲಿಲ್ಲ. ಅಂತಹುದೊಂದು ಉನ್ನತ ಮೌಲ್ಯದ ರಕ್ಷಣೆ ಮಾಡುವ ನೈತಿಕ ಸ್ಥೈರ್ಯ ಇರಲಿಲ್ಲ. ಕಾಂಗ್ರೈನ ಪ್ರತಿಯೊಬ್ಬ ಮಂತ್ರಿ, ಸಂಸತ್ ಸದಸ್ಯನೂ ಈ ರಾಮಸ್ವಾಮಿಯವರಂತಹುದ ಕೆಲಸಗಳನ್ನು ದಿನನಿತ್ಯ ಮಾಡುವಾಗ ಅವರಿಗೆ ನೀನು ತಪ್ಪು ಮಾಡಿದ್ದೀಯ ಎಂದು ಘೋಷಿಸುವ ನೈತಿಕ ಸ್ಥೈರ್ಯವೆಲ್ಲಿ?

ದೋಫೋರ್ಸ್ ವ್ಯವಹಾರದಲ್ಲಿ ಕೋಟಿಗಟ್ಟಲೆ ಟೇಬಲ್ ಕೆಳಗಿನ ವ್ಯವಹಾರ ನಡೆಸಿದ ಈ ಕಾಂಗ್ರೈ ಅದನ್ನು ಸಮರ್ಥಿಸಿಕೊಳ್ಳಲು ಸಂಸತ್ತಿನ, ಸರಕಾರದ ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿದ ಈ ಕಾಂಗ್ರೈಗೆ ಆ ಧೈರ್ಯ ಬರಲಿಲ್ಲ.

ಗೋಲ್ಡ್ ಸ್ಟಾರ್ ಹಗರಣ, ಭೂ ಸುಧಾರಣಾ ಕಾನೂನು ವಂಚನೆಯಲ್ಲಿ ಮಸಿ ಬಳಿದುಕೊಂಡಿರುವ ನರಸಿಂಹರಾಯರಿಗೆ ರಾಮಸ್ವಾಮಿಯವರನ್ನು ತಪ್ಪೆನ್ನುವ ಧೈರ್ಯ ಇರಲಿಲ್ಲ. ಶೇರು ಮಾರ್ಕೆಟ್ ಹಗರಣದಲ್ಲಿ ದಿನ

ಪುಟ 8 ಕ್ಕೆ ....

"ನಾಚಿಕೆಗೇಡು" ಪಿ.ಬಿ. ಖಂಡನೆ

"ಆತ್ಮಸಾಕ್ಷಿ"ಯಂತೆ ಮತನೀಡಲು ಕಾಂಗ್ರೈ ಸದಸ್ಯರಿಗೆ ಹೇಳಿ ನಂತರ ಮತದಾನದಲ್ಲಿ ಭಾಗವಹಿಸಬೇಡಿ ಎಂದು ಹೇಳಿರುವುದು ಒಂದು ನಾಚಿಕೆಗೇಡಿನ ನಿರ್ಣಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ. ಜನ ಇದನ್ನು ಉನ್ನತ ಸ್ಥಾನದಲ್ಲಿ ಭ್ರಷ್ಟಾಚಾರವನ್ನು ಸಮರ್ಥಿಸುವ ಲಜ್ಜಾಹೀನ ವರ್ತನೆಯೆಂದೇ ಪರಿಗಣಿಸುತ್ತಾರೆ. ಇಲ್ಲಿ ದೋಷಾರೋಪಣೆಗೆ ಬಲವಾದ ಆಧಾರಗಳಿದ್ದವು. ಈ ಮೂಲಕ ಇದುವರೆಗೆ ಭ್ರಷ್ಟಾಚಾರದಿಂದ ದೂರವಿದ್ದ ನ್ಯಾಯಾಂಗದ ಖ್ಯಾತಿಯನ್ನು ಕಾಂಗ್ರೈ ದುರ್ಬಲಗೊಳಿಸಿದೆ. ಇದರ ಪರಿಣಾಮ ತೀವ್ರವಾಗಲಿದೆ ಎಂದು ಪಿ.ಬಿ. ಎಚ್ಚರಿಸಿದೆ. ಈಗಾಗಲೇ ಆ ಪಕ್ಷ ಜನತಂತ್ರದ ನೀತಿಗಳ, ವ್ಯವಸ್ಥೆಗಳ ಕುಸಿತಕ್ಕೆ ಸಾಕಷ್ಟು ಕಾಣಿಕೆ ನೀಡಿದೆ, ಈ ಪ್ರಸಂಗದ ಮೂಲಕ ಅದು ಭ್ರಷ್ಟಾಚಾರವನ್ನು ಬೆಂಬಲಿಸಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಈ ನ್ಯಾಯಮೂರ್ತಿಗೆ ಅರ್ಧಕೋಟಿ ರೂ.ನ ಆಸನಗಳು ಬೇಕಾಯಿತು

ಲೋಕಸಭೆಯಲ್ಲಿ ಸಿ.ಪಿ.ಐ.(ಎಂ) ಮುಖಂಡ ಸೋಮನಾಥ ಚಟರ್ಜೀ ಮತ್ತು ಹಾಗೂ ಇತರರು ಮಂಡಿಸಿದ ದೋಷಾರೋಪಣೆ ಠರಾವಿನಲ್ಲಿ ಪಟ್ಟಿಮಾಡಿದ ರಾಮಸ್ವಾಮಿಯವರ 11 ದುರ್ವರ್ತನೆಗಳು.

1. ಪಂಜಾಬ್-ಹರಿಯಾಣಾ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಕಾಲದಲ್ಲಿ ಸಾರ್ವಜನಿಕ ನಿಧಿಯಿಂದ ವಿಪರೀತ ಬೆಲೆ ತೆತ್ತು, ಬಹುಪಾಲು ಸುಳ್ಳು ಕೊಟೇಶನ್‌ಗಳ ಮೂಲಕ 50 ಲಕ್ಷ ರೂಪಾಯಿಗಳ ಜಮಖಾನೆ ಮತ್ತು ಪೀಠೋಪಕರಣಗಳನ್ನು ಖರೀದಿಸಿದರು.
2. ತನ್ನ ನಿವಾಸಕ್ಕೆಂದು ಖರೀದಿಸಿದ ಆದರೆ ಎಂದೂ ನಿವಾಸಕ್ಕೆ ತಲುಪಿರದ ಜಮಖಾನೆ ಹಾಗೂ ಪೀಠೋಪಕರಣಗಳಿಗೆಂದು ಹಣಪಾವತಿ ಕೊಡಿಸಿದರು.
3. ನ್ಯಾಯಾಲಯದ ಹಣದಿಂದ ತನ್ನ ಅಧಿಕೃತ ನಿವಾಸಕ್ಕೆ ಖರೀದಿಸಿದ ಪೀಠೋಪಕರಣಗಳಲ್ಲಿ 1.5 ಲಕ್ಷ ರೂ ಬೆಲೆಬಾಳುವ ಪೀಠೋಪಕರಣ ಹಾಗೂ ಜಮಖಾನೆಗಳನ್ನು ತಾವೇ ಇಟ್ಟುಕೊಂಡರು. ಅದರ ಲೆಕ್ಕ ಕೊಡಲಿಲ್ಲ.
4. ಅಧಿಕೃತ ನಿವಾಸಕ್ಕೆಂದು ಸಾರ್ವಜನಿಕ ಹಣತೆತ್ತು ಖರೀದಿಸಿದ ಹಲವಾರು ಸೂಟ್‌ಕೇಸ್‌ಗಳು, ಜಮಖಾನೆಗಳು, ಪೀಠೋಪಕರಣಗಳ ಬದಲಿಗೆ ಕಮ್ಮಿ ಬೆಲೆಯ, ಕಮ್ಮಿ ಗುಣಮಟ್ಟದ ವಸ್ತುಗಳನ್ನು ಇಟ್ಟರು.
5. ಅಧಿಕೃತ ನಿವಾಸಕ್ಕೆ ಪೀಠೋಪಕರಣಗಳು ಇತ್ಯಾದಿಗಳಿಗೆ ಅವರು ರೂ. 38,500 ಅರ್ಹರು. ಆದರೆ ಅವರು 13 ಲಕ್ಷ ರೂ ಖರ್ಚು ಮಾಡಿದರು. ಹೀಗೆ ಖರ್ಚು ಮಾಡುವಾಗ ಉದ್ದೇಶಪೂರ್ವಕವಾಗಿ ಹಲವು ನಿಯಮಗಳ ಉಲ್ಲಂಘನೆ ಮಾಡಿದರು.
6. ಅತೀ ಹೆಚ್ಚು ಬೆಲೆ ತೆತ್ತು ಸ್ವಸ್ಥಳ ಮದ್ರಾಸಿನಿಂದ 25 ಬೆಳ್ಳಿ ನ್ಯಾಯದಂಡಗಳನ್ನು ತರಿಸಿದರು. ಇದಕ್ಕೆ ಸಾರ್ವಜನಿಕ ನಿಧಿಯಿಂದ 3.6 ಲಕ್ಷರೂ ತೆರಲಾಯಿತು. ಇವೆಲ್ಲಾ ಅಸಗತ್ಯ ಬ್ರಿಟಿಷ್ ವಸಾಹತುಶಾಹಿಯ ಪಳೆಯುಳಿಕೆಗಳಂತೆ ಕಾಣುತ್ತವೆ ಎಂದು ಸಹಯೋಗಿ ನ್ಯಾಯಾಧೀಶರು ವಿರೋಧಿಸಿದ ಮೇಲೂ ಈ ಖರೀದಿ ನಡೆಸಲಾಯಿತು.
7. ಚಂಡೀಘಡದಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದ ಇಪ್ಪತ್ತೆರಡೂವರೆ ತಿಂಗಳಲ್ಲಿ ಅನಧಿಕೃತ ಫೋನ್‌ಕರೆಗಳಿಗಾಗಿ ನ್ಯಾಯಾಲಯ 9.1. ಲಕ್ಷ ರೂ ತೆರುವಂತೆ ಮಾಡಿ ಸಾರ್ವಜನಿಕ ಹಣದ ದುರುಪಯೋಗ ನಡೆಸಿದರು.
8. ಮದ್ರಾಸಿನಲ್ಲಿರುವ ತನ್ನ ನಿವಾಸದ ಟೆಲಿಫೋನ್‌ಗೂ ರೂ. 76.150 ಯನ್ನು ಪಂಜಾಬ್-ಹರಿಯಾಣ ಹೈಕೋರ್ಟ್ ತೆರುವಂತೆ ತನ್ನ ಮುಖ್ಯ ನ್ಯಾಯಾಧೀಶ ಸ್ಥಾನದ ದುರುಪಯೋಗ ಮಾಡಿದರು.
9. ತನಗೆ ನೀಡಿದ ಸಿಬ್ಬಂದಿ ಕಾರುಗಳ ದುರುಪಯೋಗ ನಡೆಸಿ ಗಿರಿಧಾಮಗಳಿಗೆ ಹೋಗಲು ಮಗನ ಮದುವೆ ಹೋಗಲು ಬಳಸಿ ಸಾರ್ವಜನಿಕ ನಿಧಿಯಿಂದ ಅವುಗಳ ಪೆಟ್ರೋಲ್ ಖರ್ಚಿಗೆ 1 ಲಕ್ಷರೂ ಬಳಸಿದರು. ಹುಸಿ ಪೆಟ್ರೋಲ್ ಬಿಲ್ ಮತ್ತು ರಿಪೇರಿ ಬಿಲ್‌ಗಳನ್ನು ಪಡೆದರು.
10. ಮದ್ರಾಸ್, ಮನಾಲಿ, ಮಸೂರಿಗಳಂತಹ ಕಡೆ ಯಾವುದೇ ಅಧಿಕೃತ ಕೆಲಸವಿಲ್ಲದಿದ್ದರೂ ತನ್ನ ಕೈ ಕೆಳಗಿನ ನೌಕರರನ್ನು ತನ್ನ ವೈಯುಕ್ತಿಕ ಕೆಲಸ ಮಾಡಿಕೊಳ್ಳಲು ಅವನ್ನು ಅಧಿಕೃತ ಕೆಲಸಗಳೆಂದು ಮಂಜೂರು ಮಾಡಿದರು.
11. ಹೈಕೋರ್ಟಿನ ಹಲವು ಸಿಬ್ಬಂದಿಗೆ 18 ತಿಂಗಳೊಳಗೆ ನಾಲ್ಕು ಅನ್ಯಾಯಪೂರ್ಣ ಬಡ್ತಿಗಳನ್ನು ನೀಡಿದರು. ಈ ಸಿಬ್ಬಂದಿಯನ್ನು ತನ್ನ ವೈಯುಕ್ತಿಕ ಲಾಭಕ್ಕಾಗಿ ಮೇಲೆ ಹೇಳಿದ ದುರ್ವರ್ತನೆಗಳನ್ನು ನಡೆಸಲು ಬಳಸಿಕೊಂಡರು.

. ರಾಮಸ್ವಾಮಿಯವರ ವಕೀಲ ಕಪಿಲ್ ಸಿಬಾಲ್ ಪ್ರಕಾರ ಇವೆಲ್ಲಾ ಅಲ್ಪ ಆಪಾದನೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರೊಬ್ಬರ ಮೇಲೆ ಇಂತಹ ಅಲ್ಪ ಆಪಾದನೆ ಹಾಕಿ ಕಿರಿಕಿರಿಮಾಡಿ ಅವರ ಘನತೆಗೆ ಧಕ್ಕೆ ತರಬೇಡಿ ಎಂದು ಕೇಳಿಕೊಂಡರಂತೆ. ಹೌದಲ್ಲಾ ಎಂದನಿಸಿತಂತೆ ಇದನ್ನೆಲ್ಲಾ ಕೇಳಿದ ಕಾಂಗ್ರೈ ಸದಸ್ಯರಿಗೆ. ಇಷ್ಟೆಲ್ಲಾ ಅಲ್ಪತನ ತೋರಿ ರಾಮಸ್ವಾಮಿಯವರು ನ್ಯಾಯಾಂಗ ಘನತೆಗೆ ಕುಂದು ತಂದರಲ್ಲಾ ಎಂಬ ಸತ್ಯಾಂಶ ಮಾತ್ರ ಅವರಿಗೆ ಹೊಳೆಯಲೇ ಇಲ್ಲವಂತೆ. ಏಕೆಂದು ಈಗ ಈ ದೇಶದ ಜನಸಾಮಾನ್ಯರಿಗೆಲ್ಲಾ ತಿಳಿದಿದೆ. ರಾಮಸ್ವಾಮಿಯವರು ರಾಜೀನಾಮೆ ನೀಡಿದ ಮೇಲಾದರೂ ಕಾಂಗ್ರೈನವರಿಗೆ ಹೊಳೆದಿದೆಯೋ ಗೊತ್ತಿಲ್ಲ.

ಇವೆಲ್ಲಾ ಪಂಜಾಬ್-ಹರಿಯಾಣ ಹೈಕೋರ್ಟಿನ ಲೆಕ್ಕಪರಿಶೋಧನೆ ಕಾಲದಲ್ಲಿ ಬೆಳಕಿಗೆ ಬಂತು. ಈ ಬಗ್ಗೆ ಎತ್ತಿದ ಪ್ರಶ್ನೆಗಳಿಗೆ ರಾಮಸ್ವಾಮಿಯವರು ತೃಪ್ತಿಕರ ಉತ್ತರ ಕೊಡಲಿಲ್ಲ. ಇದರಿಂದ ಸಂಸತ್ತಿನ ನೂರಕ್ಕೂ ಹೆಚ್ಚು ಸದಸ್ಯರು ದೋಷಾರೋಪಣೆ ಈತನನ್ನು ಲೋಕಸಭೆಯಲ್ಲಿ ಮಂಡಿಸಿದರು ಲೋಕಸ

ಪುಟ 8ಕ್ಕೆ

ಪೆನ್ಷನ್ ಬಗ್ಗೆ ಸಿಐಟಿಯು ರಾಜ್ಯ ಸಮಾವೇಶ: ಬನ್ನಿ, ನಮ್ಮ ದೇಶವನ್ನು ಜನರನ್ನು ಕೊಳ್ಳೆ ಹೊಡೆಯಿರಿ ಎಂದು ಆಹ್ವಾನಿಸುವ ಮೂರ್ಖ ಸರ್ಕಾರ

-ಕಾಂ. ಸಮರ್ ಮುಖರ್ಜಿ ಎಚ್ಚರಿಕೆ

ಈ ಸರಕಾರ ತನ್ನ ಸ್ವಾತಂತ್ರ್ಯವನ್ನೇ ಕಳಕೊಂಡಿದೆ. ನಮ್ಮ ದೇಶದಲ್ಲಿ ಶ್ರಮಶಕ್ತಿ ಅಗ್ಗ, ಸಂಪನ್ಮೂಲ ಅಗ್ಗ, ಬನ್ನಿ ಎಂದು ವಿದೇಶಿ ಬಂಡವಾಳಗಾರರಿಗೆ ಆಹ್ವಾನ ಕೊಡುವ ಮೂಲಕ ಹೆಚ್ಚು ಕೂಲಿ ಕೇಳದಂತೆ ಕಾರ್ಮಿಕರನ್ನು ದಮನ ಮಾಡಲು ತಾನು ಬದ್ಧ ಎಂದು ವಿದೇಶೀಯರಿಗೆ, ಐ.ಎಂ.ಎಫ್. ವಿಶ್ವಬ್ಯಾಂಕುಗಳಿಗೆ ಹೇಳುತ್ತಿದೆ. ಈ ಸರಕಾರ. ಎಕ್ಸಿಟ್ ಪಾಲಿಸಿ ಕೈಗಾರಿಕಾ ಸಂಬಂಧಗಳ ಮಸೂದೆ ಹೊಸ ಪೆನ್ಶನ್ ಯೋಜನೆ ಇವೆಲ್ಲಾ ಇದೇ ನೀತಿಯ ಸ್ವರೂಪಗಳು ಎಂದು ಹಿರಿಯ ಸಿಪಿಐ(ಎಂ) ಮುಖಂಡ ಹಾಗೂ ಸಂಸತ್ ಸದಸ್ಯ ಕಾಂ. ಸಮರ್ ಮುಖರ್ಜೀ ಹೇಳಿದ್ದಾರೆ. ಹೊಸ ಸರಕಾರದ ವರ್ತನೆ ಮುಂದುವರಿಯಲು ಅವಕಾಶಕೊಟ್ಟರೆ ಕೋಟಿಗಟ್ಟಲೆ ಜನಗಳ ಭವಿಷ್ಯ ಅಂಧಕಾರಮಯವಾಗುತ್ತದೆ. ಆದ್ದರಿಂದ ಜನಸಮೂಹಗಳ ಗಂಭೀರ ಮಧ್ಯಪ್ರವೇಶ ಈಗ ಅಗತ್ಯ ಎಂದು ಅವರು ಹೇಳಿದರು. ಅವರು ಬೆಂಗಳೂರಿನಲ್ಲಿ ಮೇ 9 ರಂದು "ಮೂರನೇ ನಿವೃತ್ತಿ ಸೌಲಭ್ಯವಾಗಿ ಪೆನ್ಶನ್" ಎಂಬ ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಳೆದ ವರ್ಷ ಬಜೆಟ್ ಕೊರತೆ 6.5 ಶೇ.ಕ್ಕೆ ಮೀರಬಾರದೆಂಬ ಐ.ಎಂ.ಎಫ್. ಅಣತಿ ಪಾಲಿಸಲು ಜೂನ್ ತಿಂಗಳವರೆಗೆ ಎನ್.ಟಿ.ಸಿ. ಕಾರ್ಮಿಕರಿಗೆ ಸಂಬಳವನ್ನು ಕೂಡಾ ಕೊಡದೆ ಕಸರತ್ತು ಮಾಡಿದ ಸರಕಾರ ಈ ಬಾರಿ ಅದು 5ಶೇ. ಮೀರಬಾರದೆಂಬ ಆಜ್ಞೆ ಪಾಲಿಸಲು ದುಡಿಯುವ ಜನರ ಹೊಟ್ಟೆ ಬಡಿಯಲು ಮುಂದಾಗಿದೆ.

ಪಂಜಾಬಿನ ರೈತರಿಗೆ 226 ರೂ ಬೆಲೆಯ ಕೊಡುವ ಸರಕಾರ ಅಮೇರಿಕಾದಿಂದ 552 ರೂ. ಕೊಟ್ಟು ಗೋಧಿ ತರಿಸಲು ಸಿದ್ಧವಾಗಿದೆ. ಪಂಜಾಬಿನ ರೈತರು ಇದನ್ನು ಬಲವಾಗಿ ಪ್ರತಿಭಟಿಸಿದರು. ಇವೆಲ್ಲಾ ಪರಸ್ಪರ ಸಂಬಂಧಪಟ್ಟ ಸಂಗತಿಗಳು. ಈ ಸರಕಾರ ತನ್ನ ಸ್ವಾತಂತ್ರ್ಯವನ್ನು ಕಳಕೊಂಡು ದುಡಿಯುವ ಜನಗಳನ್ನು ಬಗ್ಗು ಬಡಿಯಲು ತನ್ನನ್ನು ಬದ್ಧಗೊಳಿಸಿಕೊಂಡಿದೆ ಎನ್ನುವುದರ ಉದಾಹರಣೆಗಳು ಎಂದ ಕಾಂ. ಸಮರ್ ಮುಖರ್ಜೀ ಕಾರ್ಮಿಕ ಮಂತ್ರಿ ಸಂಗ್ಮಾ ಎಷ್ಟೇ ಸುಳ್ಳು ಹೇಳಿದರೂ ಸಿ.ಐ.ಟಿ.ಯು ಪೆನ್ಶನ್ ಅನ್ನು ಎರಡನೇ ಸೌಲಭ್ಯವಾಗಿ ಭವಿಷ್ಯ ನಿಧಿ (ಪಿ.ಎಫ್.) ಬದಲಾಗಿ ಒಪ್ಪುವುದಿಲ್ಲ ಎಂದರು. ಇದಕ್ಕಾಗಿ ಹೋರಾಟ ಮುಂದುವರಿಸಬೇಕು. ಇಂತಹ ಮೋಸದ ಆಟಗಳನ್ನು ನಡೆಸುವ ಸರಕಾರವನ್ನು ಬಯಲಿಗೆಳೆಯಬೇಕು. ಈ ಹೋರಾಟ ಈಗ ಎಲ್ಲಾ ದುಡಿಯುವ ಜನಗಳ ಸಂಘಟನೆಗಳು, ಸಾಮಾಜಿಕ ಸಂಘಟನೆಗಳು ಸೇರಿಕೊಂಡು ವ್ಯಾಪಕಗೊಂಡಿದೆ. ಅದೀಗ ರಾಷ್ಟ್ರೀಯ ಸ್ವರೂಪ ಪಡೆದ ಹೋರಾಟವಾಗಿದೆ. ಸಂಸತ್ತಿನ ಒಳಗೆ ಹಾಗೂ ಹೊರಗೆ ಹೋರಾಟ ಮುಂದುವರಿಯಬೇಕು ಎಂದ ಕಾಂ. ಸಮರ್‌ಮುಖರ್ಜೀ ಸೆಪ್ಟೆಂಬರ್ 9 "ಭಾರತ್‌ಬಂದ್" ಹಾಗೂ ಕೈಗಾರಿಕಾ ಮುಷ್ಕರವನ್ನು ಈ ಹಿನ್ನೆಲೆಯಲ್ಲಿ ಯಶಸ್ವಿಗೊಳಿಸಬೇಕು ಎಂದರು.

ಎಂತಹ ವೈದ್ಯ ಈತ?

ಭಾರತದ ಆರ್ಥಿಕ ರೋಗಗ್ರಸ್ತವಾಗಿದೆ. ಈ ರೋಗಕ್ಕೆ ಕಾರಣ ಸಾಲ. ಅದಕ್ಕೆ ಪರಿಹಾರ ಕೂಡಾ ಸಾಲ ಎನ್ನುತ್ತಾರೆ. ಈ ಸರಕಾರದ ವೈದ್ಯ ಮನಮೋಹನ್‌ಸಿಂಗ್.

ಪೆನ್ಶನ್ ಸೌಲಭ್ಯಕ್ಕೆ "ಇಲ್ಲ" ಎಂದು ಹೇಳಲು ಕಾರಣ ದುಡಿಯುವ ಜನಗಳ ಬಗ್ಗೆ ಈ ಸರಕಾರಕ್ಕಿರುವ ಪೂರ್ವಗ್ರಹವಲ್ಲದೆ ಬೇರೆನೂ ಅಲ್ಲ. (ಮಾಜಿ ಐ.ಎ.ಎಸ್. ಅಧಿಕಾರಿಯಾಗಿ, ಮಾಜಿ ಐ.ಎಂ.ಎಫ್. ನೌಕರನಾಗಿ ಈಗ ಸಂಸತ್ ಸದಸ್ಯ ಹಾಗೂ ಮಂತ್ರಿಯಾಗಿ ಕನಿಷ್ಟ ನಾಲ್ಕು ನಿವೃತ್ತಿ ಸೌಲಭ್ಯ ಗಿಟ್ಟಿಸಿರುವ ಈ ಹಣಕಾಸು ಮಂತ್ರಿಗೆ ನೌಕರರಿಗೆ, ಕಾರ್ಮಿಕರಿಗೆ ಪೆನ್ಶನ್ ಇನ್ನೊಂದು ಸೌಲಭ್ಯವಾಗಿ ನೀಡುವ ಬಗ್ಗೆ ಪರೀಶೀಲಿಸಲೂ ಕೂಡಾ ಅದೇಕೋ ಹಿಂಜರಿಕೆ

ಪುಟ 8ಕ್ಕೆ

ಮಾಜಿ ಐ.ಎ.ಎಸ್. ಅಧಿಕಾರಿಯಾಗಿ, ಮಾಜಿ ಐ.ಎಂ.ಎಫ್. ನೌಕರನಾಗಿ ಈಗ ಸಂಸತ್ ಸದಸ್ಯ ಹಾಗೂ ಮಂತ್ರಿಯಾಗಿ ಕನಿಷ್ಟ ನಾಲ್ಕು ನಿವೃತ್ತಿ ಸೌಲಭ್ಯ ಗಿಟ್ಟಿಸಿರುವ ಈ ಹಣಕಾಸು ಮಂತ್ರಿಗೆ ನೌಕರರಿಗೆ, ಕಾರ್ಮಿಕರಿಗೆ ಪೆನ್ಶನ್ ಇನ್ನೊಂದು ಸೌಲಭ್ಯವಾಗಿ ನೀಡುವ ಬಗ್ಗೆ ಪರೀಶೀಲಿಸಲೂ ಕೂಡಾ ಅದೇಕೋ ಹಿಂಜರಿಕೆ ಎಂದು ಗೇಲಿ ಮಾಡಿದರು. ಅಖಿಲಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹಾಗೂ ಹಣಕಾಸು ಸಂಸ್ಥೆಗಳ ನೌಕರರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪ್ರಮುಖ ಮುಖಂಡರಾದ ಆರ್.ಎನ್. ಗೋಡ್‌ಬೋಲೆ

ಮೈ ಜುಂ ಎನ್ನಿಸುವ ವೀರಗಾಥೆ:

ಶೌರ್ಯ ಚಕ್ರ ಪ್ರಶಸ್ತಿ ಪಡೆದ ಮಾರ್ಕ್ಸ್‌ವಾದಿಗಳು

ಇತ್ತೀಚೆಗೆ ರಾಷ್ಟ್ರಪತಿಗಳಿಂದ 'ಶೌರ್ಯಚಕ್ರ' ಪ್ರಶಸ್ತಿ ಪಡೆದ ಬಲ್ವಿಂದರ್ ಸಿಂಗ್ ಅವರ ಕುಟುಂಬದ ಇತರ ಮೂವರ ಸಾಹಸ ಗಾಥೆಗೆ ಸ್ಫೂರ್ತಿ ಕಮ್ಯುನಿಸ್ಟ್ ಸಿದ್ಧಾಂತ ಎಂದು ನಮ್ಮ ಪತ್ರಿಕೆಗಳು ಹೇಳುತ್ತಿಲ್ಲ.

ಅವರು ಬಂದಿದ್ದರು- ಒಂದು ಬಾರಿಯಲ್ಲ, ಎರಡು ಬಾರಿಯಲ್ಲ, 16ಬಾರಿ. ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ ಅಥವಾ ಮೂರು ಮಂದಿ ಬರಲಿಲ್ಲ, 20,30 ಕಲವೊಮ್ಮೆ 200 ಮಂದಿಯ ಗುಂಪಾಗಿ ಬಂದಿದ್ದರು. ಲಾಠಿ, ರೈಫಲ್, ಕಂತ್ರಿ ಆಯುಧಗಳನ್ನು ಹಿಡಿದು ಬಂದಿರಲಿಲ್ಲ. ಅವರು ಎ.ಕೆ. 47, ಕೈ ಬಾಂಬು, ರಾಕೆಟ್ ಲಾಂಚರ್‌ಗಳನ್ನು ಹಿಡಿದು ಬಂದಿದ್ದರು. ಆದರೆ ಪ್ರತಿ ಬಾರಿಯೂ ಪಲಾಯನ ಮಾಡಬೇಕಾಯಿತು. ಪ್ರತಿ ಬಾರಿಯೂ ನಾಲ್ಕು ವೀರ ಸಂಗಾತಿಗಳು ಹಾಗೂ ಅವರ ಗೆಳೆಯರ ಪ್ರತಿರೋಧವನ್ನು ಮುರಿಯಲು ಅವರು ವಿಫಲರಾದರು. 'ಅವರು' ಎಂದರೆ ಖಾಲಿಸ್ತಾನೀ ಭಯೋತ್ಪಾದಕರು. ಧೀರ ಹೋರಾಟಗಾರರು ನಾಲ್ವರು ಸಂಧುಗಳು- ಬಲ್ವಿಂದರ್ ಸಿಂಗ್ ಸಂಧೂ, ಆತನ ಪತ್ನಿ ಜಗದೀರ್ ಸಂಧೂ, ತಮ್ಮ ರಣಜಿತ್ ಸಂಧೂ, ಆತನ ಪತ್ನಿ ಬಲ್ರಾಜ್ ಸಂಧೂ, ಪಂಜಾಬಿನಲ್ಲೆಲ್ಲಾ 'ಧೀರ ಸಂಧೂಗಳು' ಎಂದು ಹೆಸರಾದ ಈ ನಾಲ್ವರಿಗೆ ಎಪ್ರಿಲ್ 13 ರಂದು ರಾಷ್ಟ್ರಪತಿಗಳು 'ಶೌರ್ಯಚಕ್ರ' ಪ್ರಶಸ್ತಿಯನ್ನು ನೀಡಿದರು.

ಅಮೃತ್‌ಸರ ಜಿಲ್ಲೆಯ ಭಿಕಿವಿಂಡ್ ತಾಲೂಕಿನ ಸಂಧೂಗಳ ಧೈರ್ಯ, ದೃಢನಿರ್ಧಾರದ ಗಾಥೆ- ಇಡೀ ಪಂಜಾಬಿನಲ್ಲಿ ಈಗ ಜನಜನಿತ- ಹಲವಾರು ಮ್ಯಾಗಝೀನ್‌ಗಳು, ಪತ್ರಿಕೆಗಳು ವಿಡಿಯೋ ಫಿಲ್ಮ್‌ಗಳಲ್ಲಿ ದಾಖಲಾಗಿರುವ ಗಾಥೆ. ಆದರೆ ಈ ಎಲ್ಲಾ ಮಾಧ್ಯಮಗಳು ಒಂದು ಅಂಶವನ್ನು ತಿಳಿಸಿಲ್ಲ. ಬಹುಶಃ ಉದ್ದೇಶಪೂರ್ವಕವಾಗಿಯೇ ಮರೆಮಾಚಿವೆ. ಆ ಸಂಗತಿಯೇನು ಗೊತ್ತೆ? ಇವರು ನಾಲ್ವರೂ ಸಿಪಿಐ(ಎಂ)ನ ಸಕ್ರಿಯ ಕಾರ್ಯಕರ್ತರು. ಅವರ ಧೈರ್ಯ, ದೃಢತೆಗೆ ಸ್ಫೂರ್ತಿ ಅವರು ನಂಬಿದ ಕಮ್ಯುನಿಸ್ಟ್ ಸಿದ್ಧಾಂತ. ಬಲ್ವಿಂದರ್ ಡಿವೈಎಫ್‌ಐನ ರಾಜ್ಯ ಸಮಿತಿಯ ಸದಸ್ಯರು ಕೂಡಾ. ಆತನ ಪತ್ನಿ ಕೂಡಾ ಡಿ.ವೈ.ಎಫ್.ಐ. ಕಾರ್ಯಕರ್ತೆ. ರಣಜೀತ್ ಸಿಂಗ್ ಸಿ.ಐ.ಟಿ.ಯುಗೆ ಸೇರಿದ ರೋಡ್‌ವೇಸ್ ಎಂಪ್ಲಾಯಿಸ್ ಯೂನಿಯನ್‌ನ ರಾಜ್ಯಸಮಿತಿಯ ಸದಸ್ಯ. ತಮ್ಮ ಗ್ರಾಮದಲ್ಲಿ ಒಂದು ಶಕ್ತಿಶಾಲೀ ಕಮ್ಯುನಿಸ್ಟ್ ನೆಲೆ ನಿರ್ಮಿಸಲು ಅವರು ನೆರವಾದರು. ಈ ನೆಲೆ ದೊಡ್ಡ ಖಾಲಿಸ್ತಾನಿ ಗುಂಪುಗಳು ಎಷ್ಟೇ ಪ್ರಯತ್ನಪಟ್ಟರೂ ನಾಶವಾಗಲಿಲ್ಲ. ಬದಲಿಗೆ ಬೆಳೆಯಿತು.

ಮತ್ತೆ ಬರುವುದಾಗಿಹೇಳಿ ಹೋದರು ಭಯೋತ್ಪಾದಕರು

'ಶೌರ್ಯ ಚಕ್ರ' ಪಡೆಯಲು ಸಂಧೂಗಳು ದಿಲ್ಲಿಗೆ ಬಂದಿದ್ದಾಗ ಐ.ಎನ್.ಎಸ್‌ಗೆ ನೀಡಿದ ಸಂದರ್ಶನವೊಂದರಲ್ಲಿ ಬಲ್ವಿಂದರ್ ಸಿಂಗ್ ಸಂಧೂ 1990 ರಾದ್ಯಂತ ಭಯೋತ್ಪಾದಕರೊಂದಿಗೆ 16 ಹಣಾಹಣಿಯ ವಿವರಗಳನ್ನು ನೀಡಿದರು. "ಮೊದಲು ಹಲ್ಲೆ ನಡೆದದ್ದು ಜನರಿ 31,1990 ರ ರಾತ್ರಿ ಸುಮಾರು 10-30 ಕ್ಕೆ ಮೂರು ಬಸ್ಸುಗಳಲ್ಲಿ ಬಂದು ಮನೆಯವರನ್ನು ಸುತ್ತುವರಿದರು. ಒಳಗಿದ್ದದ್ದು ನಾವು ನಾಲ್ಕೇ ಮಂದಿ. ಅವರು ಗುಂಡು ಹಾರಿಸಿದರು. ನಾವು ಹಾರಿಸಿದೆವು. ಸ್ವಲ್ಪ ಸಮಯದ ನಂತರ ಹೊರಟು ಹೋದರು. ಮತ್ತೆ ಫೆಬ್ರವರಿ 3 ರಂದು ಬಂದರು. ಈ ಬಾರಿ ಅವರ ಕೈಯಲ್ಲಿ ಎಕೆ-47 ಬಂದೂಕಗಳಿದ್ದವು. ನಮ್ಮಲ್ಲಿದ್ದುದು ಬರೀ 303 ರೈಫಲ್‌ಗಳು. ಗೋಡೆಗಳ ಮೇಲಿಂದ ಪ್ರತಿ ಗುಂಡು ಹಾರಿಸಿದೆವು. ಮೂರು ಗಂಟೆಗಳ ಈ ಸೆಣಸಾಟ ನಡೆಯಿತು. ಮತ್ತೆ ಬರುವುದಾಗಿ ಬೆದರಿಸಿ ಅವರು ಹಿಂದುರುಗಿದರು.

ಸಿಂಹಸ್ವಪ್ನದಂತಿದ್ದ ಪರಮ್‌ಜಿತ್ ಪನ್ವಾರ್ ನೇತೃತ್ವದ ಖಾಲಿಸ್ತಾನೀ ಕಮಾಂಡೋ ಪಡೆಯ ಒಂದು ಗುಂಪಿನ ಸದಸ್ಯರಿದ್ದರು ಈ ನಾಲ್ವರು ಎದುರಿಸಿದ ಭಯೋತ್ಪಾದಕರಲ್ಲಿ ಸಂಧೂ ಕುಟುಂಬದ ಸದಸ್ಯರಿಂದ ಅವಮಾನಿತನಾದ ಪರಮ್‌ಜಿತ್ ಪನ್ವಾರ್ "ಬಲ್ವಿಂದರ್ ತನ್ನ ಚಟ್ಟ ತಾನೇ ತಯಾರಿಸಿಕೊಂಡಿದ್ದಾನೆ. ನನ್ನ ಮಂದಿ ಅವನನ್ನು ಮುಗಿಸಿಬಿಡುತ್ತಾರೆ. ಅವನನ್ನು ಉಳಿಸಲು ಯಾರೂ ಬರಲಾರರು ಪೋಲೀಸ್ ಇಲ್ಲ, ಸಿ.ಆರ್.ಪಿಎಫ್ ಇಲ್ಲಿ ಏನೂ ಇಲ್ಲಿಲ್ಲ" ಎಂದು ಹೇಳುತ್ತಿದ್ದನಂತೆ.

ಫೆಬ್ರವರಿ 4 ರಂದು ಅವರು ಮತ್ತೆ ಬಂದರು. ಈ ಬಾರಿಯಾದರೂ ಅತ್ಯಂತ ಆಧುನಿಕ ಶಸ್ತ್ರಾಸ್ತ್ರಗಳು, ರಾಕೆಟ್ ಲಾಂಚರ್‌ಗಳು ಕೂಡಾ. ಸಂಧೂಗಳು ಬಳಿಯಿದ್ದದ್ದು 303 ರೈಫಲ್‌ಗಳು ಒಂಟಿ ನಳಿಕೆ, ಜೋಡುನಳಿಕೆಯ ಗನ್ನುಗಳಷ್ಟೆ ಆದರೂ ಎಲ್ಲಕ್ಕೂ ಮಿಗಿಲಾಗಿ ಅವರಲ್ಲಿ ಧೈರ್ಯವಿತ್ತು. "ಅವರು ಮುನ್ನುಗ್ಗಿದ್ದರು. ನಾವು ಅಂಗಳಕ್ಕೆ ಬಂದೆವು. ನಮ್ಮ ಮನೆಯನ್ನು ಸುತ್ತುವರಿದ ಗೋಡೆಗಳ ಹಿಂದೆ ನಿಂತು ಗುಂಡು ಹಾರಿಸಿದೆವು. ಅವರ ಒಬ್ಬ ಲೆಫ್ಟಿನೆಂಟ್ (ಸೇನಾಧಿಕಾರಿ) ಗಾಯಗೊಂಡ. ಅವರ ಗುಂಡು ಹಾರಾಟ ನಿಂತಿತು. ನಾವು ಘೋಷಣೆ ಕೂಗಿದೆವು- ಸಿಪಿಐ(ಎಂ) ಜಿಂದಾಬಾದ್, ಹಿಂದೂ-ಸಿಖ್ ಏಕತಾ ಜಿಂದಾಬಾದ್, ಖಾಲಿಸ್ತಾನ್ ಮುರ್ದಾಬಾದ್" ಎಂದರು ಬಲ್ವಿಂದರ್ ಸಿಂಗ್ ಈ ಸಂದರ್ಶನದಲ್ಲಿ.

"ಕಮ್ಯುನಿಸ್ಟ್ ನೆಲೆ" ಅಲ್ಲಾಡಲಿಲ್ಲ

ಮೂರನೇ ಪ್ರಯತ್ನ ವಿಫಲವಾದಾಗ ಅವರಿಗೆ ಇನ್ನಷ್ಟು ಸಿಟ್ಟು ಬಂತು. ಫೆಬ್ರವರಿ 4 ಹಾಗೂ 20 ರ ನಡುವೆ ಅವರು ಮತ್ತೆ 7 ಬಾರಿ ಆಕ್ರಮಣ ಮಾಡಿದರು. ಪ್ರತಿಬಾರಿಯೂ ನಾವದನ್ನು ಹಿಮ್ಮೆಟ್ಟಿಸಿದೆವು. ಕೆಲವು ತಿಂಗಳು ಸುಮ್ಮನಾದರೂ ಮತ್ತೆ ಜೂನ್ 26 ರಂದು ಬಂದರು. ಇಷ್ಟೆಲ್ಲಾ ನಡೆಯುವಾಗಲೂ ಪೋಲೀಸರು ಏನೂ ಮಾಡಲಿಲ್ಲ. ಆಗ ಇಡೀ ಗ್ರಾಮೀಣ ಪಂಜಾಬಿನ ಮೇಲೆ ಭಯೋತ್ಪಾದಕರದ್ದೇ ಆಟೋಟೋಪ. ಯಾವಾಗ ಬೇಕಾದರೂ ಪೋಲೀಸ್ ಠಾಣೆಗಳ ಮೇಲೆಯೇ ಆಕ್ರಮಣ ಮಾಡುತ್ತಿದ್ದರು. ಆದ್ದರಿಂದ ಸಂಧೂ ಕುಟುಂಬ ಪೋಲೀಸರನ್ನು ಅವಲಂಬಿಸುವುದು ಸಾಧ್ಯವಿಲ್ಲ. ಆತ್ಮ ರಕ್ಷಣೆ ಮಾಡಿಕೊಳ್ಳಬೇಕು ಎಂದು ನಿರ್ಧರಿಸಿದರು. ಕೆಲವು ಆಯುಧಗಳನ್ನು ಸಂಗ್ರಹಿಸಿ ತಮ್ಮದೇ ರೀತಿಯಲ್ಲಿ ಸನ್ನದ್ಧರಾದರು. ಏನೇ ಆಗಲಿ ಇಲ್ಲೇ ಉಳಿಯುತ್ತೇವೆ ನಾವು ಇಲ್ಲಿಂದ ಕದಲುವುದಿಲ್ಲ. ಕೊನೆಯ ಉಸಿರಿನವರೆಗೂ ಹೋರಾಡುತ್ತೇವೆ ಎಂಬ ಪಣತೊಟ್ಟರು.

ಜೂನ್ 24,1990 ರಂದು ಪರಮ್‌ಜಿತ್ ಪನ್ವಾರ್ ಸಂಧೂಗಳಿಗೆ ನಿಕಟವಿದ್ದ ಒಬ್ಬ ಪತ್ರಿಕಾ ವರದಿಕಾರನಿಗೆ ಹೇಳಿದ- "ನಾವು ಏರಿಯಾ ಕಮಾಂಡರುಗಳಿಗೆ ಸಂಧೂ ಕುಟುಂಬವನ್ನು ಮುಗಿಸಿಬಿಡುವ ಕೆಲಸ ಒಪ್ಪಿಸಿದ್ದೇವೆ" ಮುಂದಿನ ರಾತ್ರಿ ಸಂಧೂಗಳ ಮನೆಯ ಮೇಲೆ ಎಕೆ-47 ಬಂದೂಕುಗಳಿಂದ ಧಾಳಿ, ಕೈ ಬಾಂಬುಗಳನ್ನು ಎಸೆದರು. ಅವು ಹೊರಗೋಡೆಗೆ ಅಪ್ಪಳಿಸಿದವು. ಆದರೆ ಆ ವೇಳೆಗಾಗಲೇ ಮೂರು ಡಿ.ವೈ.ಎಫ್.ಐ ಸಂಗಾತಿಗಳು ಸಂಧೂ ಕುಟುಂಬದ ಬೆಂಬಲಕ್ಕೆ ಬಂದಿದ್ದರು. ತಮ್ಮಲ್ಲಿದ್ದ ಸೀಮಿತ ಶಸ್ತ್ರಾಸ್ತ್ರಗಳನ್ನು ಬಹಳ ಜಾಗರೂಕತೆಯಿಂದ ಬಳಸಿ ಭಯೋತ್ಪಾದಕರನ್ನು ಸುಸ್ತುಗೊಳಿಸಿ ಮತ್ತೆ ಪಲಾಯನ ಮಾಡುವಂತೆ ಮಾಡಿದರು. ನಂತರವೂ ಸುಮಾರು ಎರಡು ವಾರಕ್ಕೊಮ್ಮೆಯಂತೆ ಆಕ್ರಮಣಗಳು ಮುಂದುವರಿದವು. ಕೆಲವು ಸಮಯದ ನಂತರ ಎಲ್ಲವೂ ತಣ್ಣಗಾದಂತೆ ಕಂಡಿತು. ಆದರೆ ವಿವಿಧ ಭಯೋತ್ಪಾದಕರ ಗುಂಪುಗಳ ಮುಖಂಡರು ತನ್ನೆಲ್ಲಾ ಶಕ್ತಿ- ಸಂಪನ್ಮೂಲಗಳನ್ನು ಕ್ರೋಢೀಕರಿಸಿ "ಕಮ್ಯುನಿಸ್ಟ್ ನೆಲೆಯನ್ನು ಸಂಪೂರ್ಣ ಮುಗಿಸಿ ಬಿಡಲು ಜಂಟಿ ಕಾರ್ಯಾಚರಣೆ ನಡೆಸಲು ನಿರ್ಧರಿಸಿದರು."

"ಸಿಪಿಐ(ಎಂ) ಜಿಂದಾಬಾದ್" "ಖಾಲಿಸ್ತಾನ್................."

ಸೆಪ್ಟಂಬರ್ 30,1990 ರಂದು 12 ನೇ ಆಕ್ರಮಣ ನಡೆಯಿತು. ರಾತ್ರಿ 8-30 ಕ್ಕೆ ಬಂದರು. ವಿದ್ಯುತ್ ತಂತಿಗಳನ್ನು ಕಿತ್ತು ಇಡೀ ಹಳ್ಳಿಯನ್ನು ಗಾಢಾಂಧಕಾರದಲ್ಲಿ ಮುಳುಗಿಸಿದರು. ಸಂಧೂಗಳ ಮನೆಗೆ ಹೋಗುವ ದಾರಿ, ಓಣಿಗಳನ್ನು ವಶಪಡಿಸಿಕೊಂಡರು. ಹಳ್ಳಿಗರನ್ನೆಲ್ಲಾ ಮನೆ ಬಿಟ್ಟು ಹೋಗುವಂತೆ ಎಚ್ಚರಿಸಿದರು. ಲೈಟ್ ಮೆಶಿನ್ ಗನ್‌ಗಳು, ರೈಫಲ್‌ಗಳು, ಕೈ ಬಾಂಬುಗಳು, ರಾಕೆಟ್ ಲಾಂಚರುಗಳಿಂದ ಅವರು ಸಜ್ಜಿತರಾಗಿದ್ದರು.

"ನಾವೂ ನಮ್ಮ ಮೋರ್ಚಾ ಬಲಪಡಿಸಿದ್ದೆವು. ಎರಡು ಸೆಲ್ಫ್ ಲೋಡಿಂಗ್ ರೈಫಲ್, ಐದು 303 ಗನ್‌ಗಳು, 3 ಬುಲೆಟ್ ಆಕ್ಷನ್ ಗನ್‌ಗಳು, ಒಂದು ಸ್ಟೆನ್‌ಗನ್ ಮತ್ತು ಮೂರು 12 ಬೋರ್ ರೈಫಲ್‌ಗಳನ್ನಿಟ್ಟುಕೊಂಡಿದ್ದೆವು. ಅವರು ಗುಂಡುಹಾರಿಸಿದಾಗ ಕಿಡಿಗಳ ಸ್ಥಾನ ಗುರುತಿಸಿ ಅಲ್ಲಿಗೆ ನಮ್ಮ ಬುಲೆಟ್‌ಗಳನ್ನು ಹಾರಿಸಿದೆವು ನಮ್ಮ ಒಂದು ಬುಲೆಟ್‌ಗೆ ಅವರು ನೂರು ಬುಲೆಟ್‌ಗಳು, ಐದು ಗಂಟೆಗೆ ಹೀಗೆ ಸಮರ ಸಾಗಿತು. ಅವರು 'ಖಾಲಿಸ್ತಾನ್ ಜಿಂದಾಬಾದ್" ಎಂದು ಬೊಬ್ಬೆ ಹಾಕಿದರೆ ನಾವು 'ಸಿಪಿಐ(ಎಂ) ಜಿಂದಾಬಾದ್" ಎನ್ನುತ್ತಿದ್ದೆವು. ಅಂದು ನಾವು ಎಂಟು ಜನ ಇದ್ದೆವು" ಎನ್ನುತ್ತಾರೆ ಆ ದಿನದ ಸಮರವನ್ನು ನೆನಪಿಸಿಕೊಳ್ಳುತ್ತಾ ಬಲ್ವಿಂದರ್ ಸಿಂಗ್. ಕೊನೆಗೆ ನಮ್ಮ ಸಂಗಾತಿಗಳ ಕೈ ಮೇಲಾಯಿತು. ನಂತರವೂ ಒಂದರ ಮೇಲೊಂದರಂತೆ ಮೂರು ಆಕ್ರಮಣಗಳು ನಡೆದವು. ಎಲ್ಲವೂ ನಿಷ್ಪ್ರಯೋಜಕ. ಡಿಸೆಂಬರ್ 28,1990 ರಂದು ಕೊನೆಯ ಪ್ರಯತ್ನ ನಡೆಸಿದರು. ಅವರ ಹದಿನಾರನೇ ಪ್ರಯತ್ನವೂ ವಿಫಲಗೊಂಡಿತು. ನಂತರ ಅವರು ಬರಲೇ ಇಲ್ಲ.

"ಪಕ್ಷ ನೀಡಿದ ಸ್ಫೂರ್ತಿ"

" ಅದೊಂದು ಭಯಾನಕ ವರ್ಷ- 1990ರ ವರ್ಷವಿಡೀ ನಾವು ಮಲಗಲೇ ಇಲ್ಲ. ಸದಾ ಜಾಗೃತರಾಗಿರುತ್ತಿದ್ದೆವು. ಹಲವು ರೀತಿಯಲ್ಲಿ ನಮ್ಮ ಚೈತನ್ಯವನ್ನು ಉಡುಗಿಸಲು ಪ್ರಯತ್ನಿಸಿದರು. ನಾವು ಜಗ್ಗಲಿಲ್ಲ. ಹಳ್ಳಿ ಜನ ನಮ್ಮಿಂದ ಮುಖ ತಪ್ಪಿಸಿಕೊಳ್ಳುತ್ತಿದ್ದರು. ಅದೇ ಜನ ಈಗ ಎಲ್ಲದಕ್ಕೂ ನೆರವು ಕೇಳಲು ಬರುತ್ತಾರೆ. ನಿಜಸಂಗತಿಯೆಂದರೆ ನಾವು ಅವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕಾಗಿ ಬಂದಿದೆ. 1990 ಪೋಲೀಸರು ಕೂಡಾ ಭಯೋತ್ಪಾದಕರ ಎದುರು ಏನೂ ಮಾಡಲಾಗದ ವರ್ಷವಾಗಿತ್ತು. 1991ರಲ್ಲಿ, 1992 ರಲ್ಲಿ ಪೋಲೀಸರು ಭಯೋತ್ಪಾದಕರನ್ನು ಎದುರಿಸಲಾರಂಭಿಸಿದರು. ಹಲವು ಉಗ್ರಗಾಮಿಗಳು ಸತ್ತರು, ಹಲವರು ಶರಣಾಗತರಾದರು. ಈಗಲೂ ಹಲ್ಲೆಗಳು ನಡೆಯುತ್ತಿದ್ದರೂ 1990 ರಂತೆ ಅವರು ತಲೆ ಎತ್ತಿಕೊಂಡು ತಿರುಗಲು ಈಗ ಅವಕಾಶವಿಲ್ಲ" ಎನ್ನುತ್ತಾರೆ ಬಲ್ವಿಂದರ್‌ಸಿಂಗ್.

ಬಲ್ವಿಂದರ್ ಮತ್ತು ಅವರ ಕುಟುಂಬವನ್ನು ಈಗ ಧೀರ ಪಂಜಾಬೀ ಯುವಜನತೆಯ ಪ್ರತಿನಿಧಿಗಳು, ಭಗತ್‌ಸಿಂಗ್‌ರ ಪರಂಪರೆಯವರು ಎಂದು ಹೊಗಳಲಾಗುತ್ತದೆ. ಈ ಧೈರ್ಯ ಬಂದದ್ದು ಪಕ್ಷದಿಂದಾಗಿ, ಅದರ ಸಿದ್ಧಾಂತದಿಂದಾಗಿ ಎನ್ನುತ್ತಾರೆ ಬಲ್ವಿಂದರ್‌ಸಿಂಗ್. "ರಾಷ್ಟ್ರೀಯ ಐಕ್ಯತೆಗಾಗಿ ಹೋರಾಡಬೇಕು ಎಂದು ನಮಗೆಗೊತ್ತಿತ್ತು. ನಮ್ಮ ಪಕ್ಷ ಆಗಲೇ ಇದಕ್ಕಾಗಿ ಹಲವಾರು ಹುತಾತ್ಮರ ಬಲಿ ನೀಡಿದೆ ಎಂಬುದೂ ಗೊತ್ತಿತ್ತು. ಈ ಹೋರಾಟವನ್ನು ಮುಂದುವರೆಸಲು ನಮಗೆ ಹೆಮ್ಮೆಯೆನಿಸುತ್ತಿತ್ತು. ನಾನು ಏನೇ ಮಾಡಿದ್ದರೂ, ಸಾಧಿಸಿದ್ದರೂ ಅದು ಪಕ್ಷದಿಂದಾಗಿ. ಈ ಪಕ್ಷದಲ್ಲಿರದಿದ್ದರೆ ನಾನು ಬೇರೆಯೇ ವ್ಯಕ್ತಿಯಾಗುತ್ತಿದ್ದೆ. ಪಕ್ಷದಲ್ಲಿನ ನಂಬಿಕೆಯಿಂದಾಗಿ ನಾವು ಹೀಗೆ ಹೋರಾಡಲು ಸಾಧ್ಯವಾಯಿತು" ಎನ್ನುತ್ತಾರೆ ಪಂಜಾಬೀ ಶೂರ ಯುವಕ.

ಭಾರತೀಯ ತತ್ವಶಾಸ್ತ್ರದ ಜೀವಂತಿಕೆಯನ್ನು ಎತ್ತಿ ತೋರಿದ ಮಹಾನ್ ತತ್ವಶಾಸ್ತ್ರಜ್ಞ ಪ್ರೊ. ದೇವಿ ಪ್ರಸಾದ್ ಚಟ್ಟೋಪಾಧ್ಯಾಯ

ಖ್ಯಾತ ತತ್ವಶಾಸ್ತ್ರಜ್ಞ, ಭಾರತೀಯ ತತ್ವಶಾಸ್ತ್ರವನ್ನು ಜನವರ ದೃಷ್ಟಿಕೋಣದಿಂದ ಆಳವಾದ ಅಧ್ಯಯನ ಮಾಡಿ ನಮ್ಮ ಆಳುವ ಮಂದಿ ಹಬ್ಬಿಸಿರುವ ಕಪೋಲಕಲ್ಪನೆಗಳನ್ನು ಬಯಲಿಗೆಳೆದ, ತತ್ವಶಾಸ್ತ್ರವೆಂದರೆ ಭಾರತದಲ್ಲಿ ಕೇವಲ ಮೋಕ್ಷ, ಸ್ವರ್ಗದ ಪ್ರಶ್ನೆಯಲ್ಲ ಎಂದು ತೋರಿಸಿದ ಮಾರ್ಕ್ಸ್‌ವಾದಿ ಚಿಂತಕ ಪ್ರೊ. ದೇವಿಪ್ರಸಾದ್, ಚಟ್ಟೋಪಾಧ್ಯಾಯ ಅವರು ಮೇ 8 ರಂದು ಕಲ್ಕತ್ತದಲ್ಲಿ ನಿಧನರಾದರು. ಅವರಿಗೆ 75 ವಯಸ್ಸಾಗಿತ್ತು.

ಯುರೋಪಿನಲ್ಲಿ ವಿಜ್ಞಾನದ ಬೆಳವಣಿಗೆಯ ಅಧ್ಯಯನದ ಹಿನ್ನೆಲೆಯಲ್ಲಿ ಭಾರತದಲ್ಲಿ ವಿಜ್ಞಾನದ ಬೆಳವಣಿಗೆ ಕುಂಠಿತಗೊಂಡಿದ್ದೇಕೆ ಎಂಬುದನ್ನು ಅಧ್ಯಯನ ಮಾಡಿದ, ಆ ದಿನಗಳಲ್ಲಿನ ಅಂಧಾಭಿಮಾನ, ಕಂದಾಚಾರ, ಭ್ರಮೆಗಳನ್ನು ಬಯಲುಗೊಳಿಸಿ ಭಾರತದಲ್ಲಿ ತತ್ವಶಾಸ್ತ್ರದ ದಿಕ್ಕನ್ನು ಜನತೆಯತ್ತ ತಿರುಗಿಸಿದ ಮೊದಲನೇ ತತ್ವಶಾಸ್ತ್ರಜ್ಞ ಎಂದು ಸಿಪಿಐ(ಎಂ) ಮುಖಂಡ ಕಾಂ. ಇ.ಎಂ.ಎಸ್. ನಂಬೂದರಿಪ್ಪಾಡ್ ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ತತ್ವಶಾಸ್ತ್ರದ ಕ್ಷೇತ್ರದಲ್ಲಿ ಅವರ ಕೊಡುಗೆಗಳನ್ನು ಅವರ ವಿರೋಧಿಗಳೂ ಅಪಾರ ಗೌರವದಿಂದ ಕಾಣುತ್ತಾರೆ ಎಂದು ಇ.ಎಂ.ಎಸ್ ಹೇಳಿದ್ದಾರೆ.

ಭಾರತದ ಪ್ರಾಚೀನ ತತ್ವಶಾಸ್ತ್ರಜ್ಞರು, ಭೌತಿಕವಾದಿಗಳು ನಡೆಸಿದ ತಾತ್ವಿಕ ಕೆಲಸಗಳ ನಿಜವಾದ ಚಿತ್ರವನ್ನು, ಅದರ ಮಹತ್ವವನ್ನು ಜನಗಳ ಮುಂದಿಡುವಲ್ಲಿ ಪ್ರೊ ಚಟ್ಟೋಪಾಧ್ಯಾಯರದ್ದು ಮಹಾನ್ ಕೊಡುಗೆ ಎಂದಿರುವ ಇ.ಎಂ.ಎಸ್. ಅವರ ಕುಟುಂಬದ ಸದಸ್ಯರಿಗೆ, ಅವರ ಅಭಿಮಾನಿಗಳ ದೊಡ್ಡ ಬಳಗಕ್ಕೆ ಹಾರ್ದಿಕ ಸಂತಾಪ ಸೂಚಿಸಿದ್ದಾರೆ.

ನವಂಬರ್ 19, 1918ರಂದು ಜನಿಸಿದ ಇವರು ತತ್ವಶಾಸ್ತ್ರದಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಿಂದ 1939 ರಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನ ಗಳಿಸಿದರು. ದಿವಂಗತ ಪ್ರೊ. ಎಸ್‌ಎನ್ ದಾಸ್‌ಗುಪ್ತಾ ರವರ ಮಾರ್ಗದರ್ಶನದಲ್ಲಿ ಸ್ನಾತಕೋತ್ತರ ಅಧ್ಯಯನ ನಡೆಸಿದರು. ಕಲ್ಕತ್ತಾ ಮುಂಬೈಯ ಹಲವು ಕಾಲೇಜುಗಳಲ್ಲಿ ಎರಡು ದಶಕಗಳಿಗೂ ಹೆಚ್ಚು ಕಾಲ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ದುಡಿದರು. ದೇಶಾದ್ಯಂತ ಹಲವು ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಅಧ್ಯಾಪನ ಮಾಡಿದರು. ಭಾರತದಲ್ಲಿ ಜ್ಞಾನ-ವಿಜ್ಞಾನದ ಅಭಿವೃದ್ಧಿಯ ಸಂಕೀರ್ಣ ಬೆಳವಣಿಗೆಗಳನ್ನು ಅರಿಯಬೇಕೆನ್ನುವ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಬರ್ಲಿನ್, ಮಾಸ್ಕೋ ಪ್ರಸಿದ್ಧ ವಿದ್ಯಾಲಯಗಳಲ್ಲಿ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ, ಸಿಮ್ಲಾದ ಮುಂದುವರಿದ ಅಧ್ಯಯನ ಸಂಸ್ಥೆ ಮುಂತಾದೆಡೆ ತತ್ವಶಾಸ್ತ್ರದ ಮೇಲೆ ಭಾಷಣ ಮಾಡಿದರು. ದೇಶ ವಿದೇಶಗಳಲ್ಲಿ ಹಲವು ಸಂಶೋಧನಾ- ಅಧ್ಯಯನ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿದ್ದ ಇವರು ಮಾಸ್ಕೋದ ವಿಜ್ಞಾನ ಅಕಾಡೆಮಿಯಿಂದ ವಿಜ್ಞಾನ ಡಾಕ್ಟರೇಟ್ ಪಡೆದ ಮೊದಲ ಭಾರತೀಯ. ಜರ್ಮನ್ ವಿಜ್ಞಾನದ ಡಾಕ್ಟರೇಟ್ ಪಡೆದ ಮೊದಲ ಭಾರತೀಯ. ಜರ್ಮನ್ ವಿಜ್ಞಾನ ಅಕಾಡೆಮಿಯ ಸದಸ್ಯರಾಗಿದ್ದರು. 1987 ರಲ್ಲಿ ಭಾರತೀಯ ತತ್ವಶಾಸ್ತ್ರ ಸಂಶೋಧನಾ ಸಂಸ್ಥೆಯ "ರಾಷ್ಟ್ರೀಯ ಫೆಲೋ" ಗೌರವ ಪಡೆದರು.

"ಅವರ ಸಂದೇಶ"

ಪ್ರೊ. ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಇತ್ತೀಚಿನ ಕೃತಿ "ಪ್ರಾಚೀನ ಭಾರತದಲ್ಲಿ ವಿಜ್ಞಾನ-ತಂತ್ರಜ್ಞಾನದ ಇತಿಹಾಸ"ದ ಎರಡನೇ ಸಂಪುಟದ ವಿಮರ್ಶೆ ಮಾಡುತ್ತಾ ರಾಬರ್ಟ್ ಟೆಂಪಲ್ ಎಂಬ ವಿಮರ್ಶಕ ಹೇಳಿದ ಈ ಕೆಳಗಿನ ಮಾತುಗಳು ಪ್ರೊ ಚಟ್ಟೋಪಾಧ್ಯಾಯರ ಅಧ್ಯಯನದ ಮಹತ್ವವನ್ನು ತಿಳಿಸುತ್ತೇವೆ.

"ವಿಜ್ಞಾನದ ಇತಿಹಾಸದ ಬಗ್ಗೆ ಅತೀ ವಿಷಾದಮಯ ಪುಸ್ತಕವಿದು. ಈ ಬೇಸರಕ್ಕೆ ಕಾರಣ ಹಿಂದೂ ಸಂಸ್ಕೃತಿಯಷ್ಟು ತೃಪ್ತಿಕರವಾಗಿ ಬೇರೆ ಯಾವುದೇ ಸಂಸ್ಕೃತಿಯೂ ವೈಜ್ಞಾನಿಕ ಪ್ರಗತಿಯ ಕುತ್ತಿಗೆ ಹಿಸುಕಿಲ್ಲ. ಭಕ್ತನ ಆತ್ಮಸಂತೃಪ್ತಿ ಮೇಧಾವಿ ವಿಜ್ಞಾನಿಗಳ ಹಲವು ಪೀಳಿಗೆಗಳ ಮೇಲೆ ತಣ್ಣೀರೆರೆಚಿತು. (ಈ ಭಕ್ತರು ಇತ್ತೀಚೆಗೆ ಸುಮಾರಾಗಿ ಚುನಾವಣೆ ಗೆದ್ದೇ ಬಿಟ್ಟಿದ್ದರು) ...... ಭಾರತ ವಿಜ್ಞಾನದ ಮೇಲೆ ಧರ್ಮದ ಕೈ ಮೇಲಾಗಲು ಇನ್ನು ಮುಂದೆಯೂ ಅವಕಾಶ ಕೊಡುತ್ತಲೇ ಇದ್ದರೆ ಚಟ್ಟೋಪಾಧ್ಯಾಯ ಹೇಳಿದ ಕಥೆಗಳು ಮುಂದುವರಿಯುತ್ತವೆ. ಭಾರತ ಮತ್ತೆ ಶಿಲಾಯುಗದತ್ತ ಹೋಗುತ್ತದೆ. ಇದೇ ಅವರ ಸಂದೇಶ."

ಅವರ ಪ್ರಮುಖ ಕೃತಿಗಳು:

- ಲೋಕಾಯುತ: ಭಾರತೀಯ ಭೌತವಾದದ ಒಂದು ಅಧ್ಯಯನ (1959)
- ಭಾರತೀಯ ತತ್ವಶಾಸ್ತ್ರ: ಒಂದು ಸರಳ ಅಧ್ಯಯನ (1964)
- ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ಸಮಾಜ (1977)
- ಭಾರತೀಯ ತತ್ವಶಾಸ್ತ್ರದಲ್ಲಿನ ಜೀವಂತ ಅಂಶಗಳೇನು ಮೃತ ಅಂಶಗಳೇನು (1976)
- ಭಾರತೀಯ ನಾಸ್ತಿಕವಾದ (1980)
- ಪ್ರಾಚೀನ ಭಾರತದಲ್ಲಿ ವಿಜ್ಞಾನ-ತಂತ್ರಜ್ಞಾನದ ಇತಿಹಾಸ


(ಮೊದಲ ಸಂಪುಟ 1986 ರಲ್ಲಿ ಎರಡನೇ ಸಂಪುಟ 1991)

ಅಯೋಧ್ಯಾ ಕಾಂಡ



ವಿಷವುಯಾರಿಗೋ ಅಮೃತವ್ಯಾರಿಗೋ?


'ಅಯೋಧ್ಯಾ ಕಾಂಡ'ದ ಅನಾಥ ಮಕ್ಕಳ ಕರುಳುಬಿರಿಯುವ ಕಥೆ



6 ವರ್ಷದ ಸೋನಿಯಾ

ಡಿಸೆಂಬರ್ 6 ನಮ್ಮ ಸಮಾಜದಲ್ಲಿ 'ಅಮೃತಮಥನ' ನಡೆಸಿತು ಎಂದು ಹೆಮ್ಮೆಯಿಂದ ಹೇಳಿಕೊಂಡಿದೆ ಇತ್ತೀಚೆಗೆ ನಡೆದ ಬಿಜೆಪಿ ಅಧಿವೇಶನ. ಅದರ ಪರಿವಾರದ 'ವೈದ್ಯರು'ಗಳು ನಮ್ಮ ಸಮಾಜದ ಕಾಯಿಲೆಗೆ ನೀಡಿದ "ಹೋಮಿಯೋಪಥಿಕ್ ಡೋಸ್' 'ಅಂತೆ ಆ ಕೃತ್ಯ. ಎಂತಹ ಅಮೃತಸಿಂಚನವದು! ರಾತ್ರಿ ಬೆಳಗಾಗುವಷ್ಟರಲ್ಲಿ ನೂರಾರು ಮಕ್ಕಳನ್ನು ಅನಾಥರಾಗಿಸಿತು! ಆ ಅಲ್ಪ 'ಡೋಸ್' ಪ್ರಯೋಜನವಾಗದಿದ್ದರೆ 'ಸಂಘಪರಿವಾರ'ದ ಇನ್ಯಾವ 'ಮಹೌಷಧಿ' ಇನ್ನೆಷ್ಟು ಮಕ್ಕಳ ಮೇಲೆ ಇಂತಹ 'ಅಮೃತ ಸಿಂಚನ ಮಾಡಬೇಕೋ! ತಂದೆ-ತಾಯಿ, ಬಂಧು ಬಳಗವನ್ನು ಕಳಕೊಳ್ಳಬೇಕೋ!'

- ಮನೆಗೆ ಬೆಂಕಿ ಬೀಳುತ್ತಿದ್ದಂತೆ ಪ್ಲೋಟದಲ್ಲಿರುವ ಈ ಹನ್ನೆರೆಡು ವರ್ಷದ ಬಾಲಕಿ, ಆಕೆಯ ತಂದೆ, ತಾಯಿ, ಚಿಕ್ಕಪ್ಪ ಹೊರಗೋಡಿ ಬಂದರು. ಬೆಂಕಿ ಹಚ್ಚಿದ ಮಂದಿ ತಂದೆ, ತಾಯಿ, ಚಿಕ್ಕಪ್ಪನನ್ನು ಸುತ್ತುವರಿದರು. ಅವರ ಹೊಟ್ಟೆಗೆ ಖಡ್ಗಗಳಿಂದ ತಿವಿದರು. ಕ್ಷಣಾರ್ಧದಲ್ಲಿ 12 ವರ್ಷದ ಈ ಬಾಲಕಿ ತನ್ನ ತಂಗಿ ತಮ್ಮಂದಿರ ಹಾಗೂ ಅಣ್ಣನ ಜೊತೆ ಅನಾಥಳಿವಳು- ಆದರೆ ತಂಗಿ ತಮ್ಮಂದಿರನ್ನು ಸಾಕುವ ಭಾರ ಈ ಪುಟ್ಟ ಹುಡುಗಿಯದು ಹಾಗೂ ಅವಳ ಅಣ್ಣನ ಹೆಗಲ ಮೇಲೆ ಬಿತ್ತು. ಈಕೆಯ ಹೆಸರು ತಸ್ಲೀಂ ಬಾನು.



12 ವರ್ಷದ ತಸ್ಲೀಂಬಾನು

- ಮುಂಬೈಯ ಒಂದು ಟೈಲರ್ ಅಂಗಡಿ ಬಾಗಿಲ ಬಳಿ ಸದ್ದು ಕೇಳಿದಾಗಲೆಲ್ಲಾ ಹೌಹಾರಿ ಬೀಳುವ 15 ವರ್ಷದ ಬಾಲಕ. ಸೂರತ್‌ನಲ್ಲಿ ಶಾಲೆ ಬಿಟ್ಟು ಹಗಲು-ರಾತ್ರಿ ರೇಡಿಯೋ ರಿಪೇರಿ ಮೂಲಕ ತಮ್ಮ ಕುಟುಂಬದ ಆದಾಯ ಹೆಚ್ಚುಸುತ್ತಿದ್ದ ಹುಡುಗ. ಆ ರಾತ್ರಿ ಅವನ ಜಗತ್ತೇ ಕುಸಿಯಿತು. ಗಲಭೆ ಕೋರರ ದೊಣ್ಣೆಗಳಿಗೆ ಅವನ ಇಡೀ ಕುಟುಂಬ ಬಲಿಯಾಯಿತು. ಇವನೊಬ್ಬ ಬದುಕುಳಿದು ಒಬ್ಬ ಮಾನಸಿಕ ರೋಗಿಯಾ. ರಾತ್ರಿಯಾಯಿತೆಂದರೆ ದುಸ್ವಪ್ನಗಳು. ಹಗಲಿನಲ್ಲಿ ಭಯದ ಕಂಗಳು. ಮುಂಬೈಗೆ ಬಂದು ಕ್ರಮೇಣ ಸುಧಾರಿಸಿಕೊಳ್ಳುತ್ತಿದ್ದಾನೆ- 'ಸಿಟ್ಟಿಗೆದ್ದೇನು ಪ್ರಯೋಜನ ನನ್ನ ಕುಟುಂಬದ ಜನ ವಾಪಸು ಬರುತ್ತಾರೆಯೇ? ದ್ವೇಷ ನಮ್ಮನ್ನೇ ಸಾಯಿಸುತ್ತದೆ. ಕೊಲೆಗಡುಕರನ್ನು ನಾನು ಕ್ಷಮಿಸಿ ಬಿಟ್ಟಿದ್ದೇನೆ" - ಎನ್ನುತ್ತಾನೆ ವಯಸ್ಸಾದ ಹಿರಿಯನಂತೆ ಈ 15 ವರ್ಷ ಬಾಲಕ. ಅವನ ಹೆಸರು ರಾಜು ನೂರುದ್ದೀನ್.
- ಕಾನ್ಪುರದಿಂದ 45 ಕಿ.ಮೀ. ದೂರದ ಹಳ್ಳಿ ಇಟ್ವಾರಾ. ಡಿಸೆಂಬರ್ 11 ರ ರಾತ್ರಿ ಈ ಇಬ್ಬರು ಮಕ್ಕಳ ಕಣ್ಣೆದುರೇ ಅವರ ತಂದೆಯನ್ನು ಸಾಯುವವರೆಗೆ ಲಾಠಿಗಳಿಂದ ಬಡಿದರು. ನಂತರ ಅವರ ತಾಯಿಯ ಶಿರವನ್ನು ಗರಗಸದಿಂದ ಕುಂಡರಿಸಿದರು. ತಂದೆ-ತಾಯಿಂದಿರನ್ನು ನೆನಸಿಕೊಳ್ಳಲಿಕ್ಕೆ ಈಗ ಅವರಿಗೆ ಭಯ. ತಂದೆತಾಯಿಯ ರಕ್ಷಣೆಯಿಂದ ವಂಚಿತರಾದ ಇವರು ಈಗ ಸದಾ ಒಬ್ಬರಿಗೊಬ್ಬರಿಗೆ ಅಂಟಿಕೊಂಡೇ ಇರುತ್ತಾರೆ. ಇನ್ನಷ್ಟು ಆಕ್ರಮಣ ಒಳದಿರಲೋ ಎಂಬಗಾಗಿತ್ತೆ. ಅಕ್ಕ ಶಬಾನಾಗೆ 8 ವರ್ಷ, ತಂಗಿ ಶಹಾನಾಗೆ 6 ವರ್ಷ.
- ನಾಲ್ಕು ತಿಂಗಳಲ್ಲಿ ಆತ ಮೊತ್ತ ಮೊದಲ ಬಾರಿಗೆ ನಕ್ಕ- ಹತ್ತುವರ್ಷದ ಬಾಲಕ. ಸೂರತ್‌ನ ನೇಯ್ಗೆ ವ್ಯಾಪಾರಿಯೊಬ್ಬನ ಮಗ. ಡಿಸೆಂಬರ್ 7 ರಂದು ಜನಜಂಗುಳಿ ಅವನ ತಂದೆಯನ್ನು ಬಲಿ ತೆಗೆದುಕೊಂಡಿತು. ಮನೆಯಿಗ ಕಲ್ಲು ಮಣ್ಣಿನ ಗುಡ್ಡೆ. ಈ ಹುಡುಗನ ಹೆಸರು ಆಸಿಫ್.
- ಶಹಾದಾರ, ದಿಲ್ಲಿ, ಡಿಸೆಂಬರ್ ಆ ಕರಾಳ ರಾತ್ರಿ ಅವರು ಬಾಡಿಗೆಗಿದ್ದ ಮನೆಗೆ ನುಗ್ಗಿದ ರಕ್ತಪಿಪಾಸುಗಳು ಮಕ್ಕಳ ತಂದೆ-ತಾಯಿಯನ್ನು ಚಾಕುಗಳಿಂದ ತಿವಿದು ತಿವಿದು ಕೊಂದರು. "ಯಾಕೆ ಯಾರೂ ನಮ್ಮ ಸಹಾಯಕ್ಕೆ ಬರಲಿಲ್ಲ? ಏಕೆ ಒಮ್ಮೆಲೇ ಜನಗಳಲ್ಲಿ ಇಷ್ಟೊಂದು ಹಗೆತನ ತುಂಬಿಬಿಟ್ಟಿತು?" ಎಂದು ಪ್ರಶ್ನಿಸುತ್ತಾಳೆ 12 ವರ್ಷದ ನಸ್ರೀನ್- ಆಕೆಯ ತೊಡೆಯ ಮೇಲೆ ಒಬ್ಬ ತಮ್ಮ ಪಕ್ಕದಲ್ಲಿ ತಂಗಿ. ಇವರಿಬ್ಬರನ್ನು ನೋಡಿಕೊಳ್ಳಲು ಆಕೆ ಶಾಲೆ ಬಿಡಬೇಕಾಯಿತು.
- ಮುಂಬೈಯ ಜನಬಿಡ ಓಣಿ. ಎಂಟು ವರ್ಷದ ಹಸುಳೆ ನಿನ್ನೆಯವರೆಗೆ ಓಣಿಯ ಇತರ ಹಸುಳೆಗಳೊಂದಿಗೆ ಕೇಕೆ ಹಾಕುತ್ತಾ ಆಡುತ್ತಿದ್ದ ಹುಡುಗ. ಬಂತು ಡಿಸೆಂಬರ್ 7. ಬಂದವು ರಕ್ತಪಿಪಾಸು ಕಣ್ಣುಗಳನ್ನು ಹೊತ್ತ ಹತ್ತಾರು ಕಾಲುಗಳು. ತಾಯಿ ತಾತ ಕೊಲೆಗಡುಕರಿಗೆ ಬಲಿಯಾಗುವುದನ್ನು ಮೂಲೆಯಲ್ಲಿ ನಡುಗುತ್ತಾ ಕಂಡ ಹಸುಳೆ ಕ್ಷಣಾರ್ಧದಲ್ಲಿ ಚರಂಡಿಯುಲ್ಲಿತ್ತು. ಹತ್ತಾರು ಕತ್ತರಿಸಿ ಹಾಕಿದ ಹೆಣಗಳ ನಡುವೆ ಜೀವಂತವಾಗಿತ್ತು. ಆದರೆ ಅನಾಥವಾಗಿಬಿಟ್ಟಿತು. ಮಗುವಿನ ಹೆಸರು ಸದ್ದಾಂ.
- ಈತನೂ ತನ್ನ ಕಣ್ಣೆದುರೇ ತನ್ನ ತಂದೆ-ತಾಯಿ ಕೊಲೆಗಡುಕರಿಗೆ ಬಲಿಯಾಗಿ ಪ್ರಾಣ ಬಿಡುವುದನ್ನು ಕಂಡಾತ. ಆದರೆ ಉಳಿದವರಿಗಿಂತ ಹಿರಿಯ-ವಯುಸ್ಸು 18 ವರ್ಷ "ನಾನೀಗ ನನ್ನ ತಂಗಿಯರಿಗಾಗಿ ಹೊಸ ಮನೆಯೊಂದನ್ನು ಕಟ್ಟಬೇಕಾಗಿದೆ" ಎನ್ನುತ್ತಾನೆ ಅಲ್ತಾಫ್. ಆದರೆ ಅವನಿಗೇ ಒಂದು ಸಂಗಾತಿ ಇನ್ನೂ ಮರೆಯಲಾಗುತ್ತಿಲ್ಲ. ತನ್ನೊಡನೆ ಕ್ರಿಕೆಟ್ ಆಡುತ್ತಿದ್ದ ಗೆಳೆಯರು ತನ್ನ ತಂದೆತಾಯಿಯರನ್ನು ಹೊರಗೆಳೆದು ಹಾಕಿ ಕೊಲ್ಲುತ್ತಿದ್ದಾಗ ಸುಮ್ಮನೇ ನೋಡುತ್ತಾ ನಿಂತರೇಕೆ? ಈ ಕೊಲೆನಡೆಯಲು ಬಿಟ್ಟರಾದರೂ ಏಕೆ?
- "ಸೂರತ್‌ನ ಕೆಲವು ಕೆಟ್ಟ ಮಂದಿಯಿಂದಾಗಿ ನಾವೀಗ ಅನಾಥರು ಎಂದು ನನ್ನಕ್ಕ ಹೇಳ್ತಾಳೆ. ಆ ವಿಷಯ ಮಾತಾಡ್ಬಾರ್ದಂತೆ- ಗುಟ್ಟಾಗಿರಬೇಕಂತೆ' ' ಎನ್ನುತ್ತಾಳೆ ಈಗ ಮುಂಬೈಯ ಒಂದು ಅನಾಥಾಲಯದಲ್ಲಿರುವ ಈ ಹುಡುಗಿ- 6 ವರ್ಷದ ಸೋನಿಯಾ. ಇನ್ನೊಮ್ಮೆ ಅದೇ ಬಾಲಕಿ ಹೇಳ್ತಾಳೆ- ನೋಡಿ ನನ್ನ ಅಪ್ಪ- ಅಮ್ಮ ಹತ್ರ ಬರ್ತಾರೆ. ನನ್ನನ್ನು ಕರಕೊಂಡು ಹೋಗ್ತಾರೆ!
- ಈ ಮಕ್ಕಳನ್ನು ಅವುಗಳ ತಂದೆ-ತಾಯಿಯರಂತೆ ಇನ್ನಾರು ಸಾಕಬಲ್ಲರು ಎಂದು ಮರುಗುತ್ತಾಳೆ 65 ವರ್ಷದ ಮುದುಕಿ. ರಾಮಜನ್ಮಭೂಮಿ- ಬಾಬ್ರಿ ಮಸೀದಿಯ ಪ್ರಶ್ನೆ ಆಕೆಯ ಇಬ್ಬರು ಗಂಡು ಮಕ್ಕಳು ಇಬ್ಬರು ಸೊಸೆಯರು, ಇಬ್ಬರು ಮೊಮ್ಮಕ್ಕಳ ಆಹುತಿಯಾಗಿದ್ದಾರೆ. ಎಂಟು ಮೊಮ್ಮಕ್ಕಳು ಅನಾಥರಾಗಿದ್ದಾರೆ. ಇವರ ಭವಿಷ್ಯವೇನು? ಅದೇ ಆಕೆಯ ಚಿಂತೆ.

ಕೃಪೆ: ಇಂಡಿಯಾ ಟುಡೇ
ಮತ್ತು ಟೈಂಸ್ ಆಫ್ ಇಂಡಿಯಾ

ಭಾರತದಲ್ಲಿ ಖೋಮಿನಿಗಳ ಅವತಾರ

(ಪಿ.ಡಿ. ಸಂಪಾದಕೀಯ)

ಭಾರತದಲ್ಲಿ ಚಲನಚಿತ್ರಗಳು ಹೇಗಿರಬೇಕೆಂಬ ಬಗ್ಗೆ ಸೆನ್ಸಾರ್‌ಶಿಪ್ ಹಕ್ಕುಗಳನ್ನು ಈಗ 'ಹಿಂದೂರಾಷ್ಟ್ರ'ದ ಭಕ್ತರು ಕಿತ್ತುಕೊಂಡಿದ್ದಾರೆ. ಮುಂಬೈಯಲ್ಲಿ ಇತ್ತೀಚೆಗೆ ದೊಡ್ಡ ಚಿತ್ರ ನಿರ್ಮಾಪಕರು ಹಾಗೂ ಬಿಜೆಪಿ ನಡುವೆ ಈ ಬಗ್ಗೆ ಒಂದು "ಒಪ್ಪಂದ"ವಾಗಿದೆಯಂತೆ. 'ಫಿಲ್ಮ್‌ಮೇಕರ್ಸ್, ಕಂಬೈನ್' ಎಂಬ ಈ ಚಿತ್ರ ನಿರ್ಮಾಪಕರ ಸಂಘಟನೆ ಹತ್ತಂಶಗಳ ಮಾರ್ಗದರ್ಶಕ ಸೂತ್ರಗಳನ್ನು ಒಪ್ಪಿಕೊಂಡಿದೆಯಂತೆ. "ಯಾವುದೇ ಚಲನಚಿತ್ರದಲ್ಲಿ ಹಿಂದೂ ಭಾವನೆಗಳನ್ನು ಅಥವಾ ಇತರ ಧರ್ಮದ ಭಾವನೆಗಳನ್ನು ಹೀಯಾಳಿಸಬಾರದು :-" ಇದು ಒಂದು ಸೂತ್ರ. "ಹಿಂದೂ ಜೀವನ ಶೈಲಿ, ಸಂಸ್ಕೃತಿ, ಮೌಲ್ಯಗಳನ್ನು ಕಾದುಕೊಳ್ಳುವುದು ಚಿತ್ರೋದ್ಯಮದ ಜವಾಬ್ದಾರಿ" ಇದು ಮತ್ತೊಂದು ಮಾರ್ಗದರ್ಶನ ! ಇನ್ನೊಂದು ನಿರ್ದೇಶನ ನೋಡಿ- "ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗಿರದ ಚಿತ್ರೋದ್ಯಮದ ಯಾವುದೇ ವ್ಯಕ್ತಿ ಅಯೋಧ್ಯಾ ಆಂದೋಲನದಲ್ಲಿ, ಮಹಾ ಆರತಿಗಳಲ್ಲಿ ತೊಡಗಿರುವ ವ್ಯಕ್ತಿಗಳನ್ನು ಟೀಕಿಸಬಾರದು ಅಥವಾ ಖಂಡಿಸಬಾರದು,- ಉದಾಹರಣೆಗೆ ಕುಮಾರಿ ಶಬಾನಾ ಆಜ್ಮೀಯಂತೆ"! ಇದೊಂದು ಕೋಮುವಾದಿ ಸೆನ್ಸಾರ್‌ಶಿಪ್ ಅಲ್ಲದೆ, ಇನ್ನೇನು? ಈ ಪ್ರಮುಖ ಮಾಧ್ಯಮದ ಸಾಂಸ್ಕೃತಿಕ ಹಕ್ಕುಗಳಲ್ಲಿ ನಗ್ನ ಹಸ್ತಕ್ಷೇಪ ಇದು.

"ಹಿಂದೂ ರಾಷ್ಟ್ರ"ದ ಸಾಂಸ್ಕೃತಿಕ ಮೌಲ್ಯಗಳೆಂದು ಏನು ಈ ಮಂದಿ ಹೇಳಿಕೊಳ್ಳುತ್ತಾರೋ ಅವನ್ನು ಒಪ್ಪದ ಎಲ್ಲರ ಮೇಲೂ ಗುರಿಯಿಟ್ಟ ಆರ್.ಎಸ್. ಎಸ್.-ಬಿಜೆಪಿ ಶಿವಸೇನಾ ಕೂಟ ಹೇರಿರುವ ಶರತ್ತುಗಳಿವು. ಶಿವಸೇನೆಯ ಪ್ರತಿಭಟನೆಗೆ ಹೆದರಿ ಒಂದು ಹಿಂದೀ ಚಿತ್ರದಲ್ಲಿ ಚಿತ್ರನಟ ಎ.ಕೆ. ಹಾನಗಲ್ ರವರ ಪಾತ್ರದ ಅಂಶಗಳನ್ನು ಕತ್ತರಿಸಿ ಹಾಕಿದ ನಾಚಿಕೆಗೇಡಿನ ಘಟನೆಯ ಹಿನ್ನಲೆಯಲ್ಲಿ ಈ 'ಒಪ್ಪಂದ'ವಾಗಿದೆ ಬಾಳ್ ಠಾಕ್ರೆ ಮತ್ತವರ ಬಾಲಬಡುಕರು ನಡೆಸಿರುವ ಜಾತ್ಯಾತೀತ-ವಿರೋಧಿ ನಗ್ನ ಅಪಪ್ರಚಾರ ಭಾಗವಾಗಿ ಎ.ಕೆ. ಹಾನಗಲ್ ದಿಲೀಪ್ ಕುಮಾರ್, ಶಬಾನಾ ಆಜ್ಮೀಯವರ ಮೇಲೆ ರಾಷ್ಟ್ರ-ವಿರೋಧಿ ಚಟುವಟಿಕೆಗಳ ಆಪಾದನೆ ಹಾಕಲಾಗಿದೆ. ಶಿವಸೇನೆಯ ಫ್ಯಾಸಿಸ್ಟ್ ಗೂಂಡಾ ತಂತ್ರಗಳನ್ನು ಬಿಜೆಪಿ ಜಾತ್ಯತೀತತೆಯಿಂದ ಬಳಸಿಕೊಳ್ಳುತ್ತಿದೆ. ಇವೆಲ್ಲದರ ಎದುರು ಪ್ರಮುಖ ಚಿತ್ರ ನಿರ್ಮಾಪಕರು ತಲೆಬಾಗಿಸಿರುವುದು ನಾಚಿಕೆಗೇಡಿನ ಸಂಗತಿ.

ಭಾರತದ ಪ್ರಮುಖ ನಗರ ಮುಂಬೈಯಲ್ಲಿ ಚಿತ್ರ ಕಲಾವಿದರ ಹಕ್ಕುಗಳ ಮೇಲೆ, ಸಂಸ್ಕೃತಿಯ ಮೇಲೆ ಇಂತಹ ದುಷ್ಟ ಗಂಭೀರ ಹಲ್ಲೆ ನಡೆಯುತ್ತಿರುವಾಗ ಶರದ್‌ಪವಾರ್ ಸರಕಾರ ಅದರ ಗೊಡವೆಯೇ ಇಲ್ಲದಂತೆ ಸುಮ್ಮನಿದೆ. ಕಾಂಗ್ರೆಸ್(ಐ) ನ ರಾಜ್ಯ ಸರಕಾರ ಇಂತಹ ನಿರ್ವೀರ್ಯ, ಉಪೃಪಕ್ಷಿತರದ ನಿಲುವು ಶಿವಸೇನೆ-ಬಿಜೆಪಿ ಅಯತೊಲ್ಲಾಗಳು ಇನ್ನಷ್ಟು ನಿರ್ದೇಶನಗಳನ್ನು ನೀಡನಂತೆ, ಅದನ್ನು ಭುಜಬಲ ಪ್ರಯೋಗಿಸಿ ಜಾರಿಗೆ ತರುವಂತೆ ಪ್ರೋತ್ಸಾಹಿಸುತ್ತಿದೆ. ಮುಂಬೈ ಚಿತ್ರೋದ್ಯಮ ತನ್ನ ಸಮ್ಮಿಶ್ರ ಸಂಸ್ಕೃತಿಗೆ, ಸಾಮೂಹಿಕ, ಮನರಂಜನೆಯ ಉದ್ಯಮವಾಗಿ ಹೆಸರು ಪಡೆದಿದೆ. ಈ ಶಕ್ತಿಶಾಲೀ ಮಾಧ್ಯಮ ತನ್ನ ಸಂಕುಚಿತ- ಮೂಲಭೂತವಾದಿ ದೃಷ್ಟಿಕೋಣವನ್ನು ಅಂಗೀಕರಿಸುವಂತೆ ದೆದರಿಸಲು ಬಿಜೆಪಿ- ಶಿವಸೇನೆ ಪ್ರಯತ್ನಿಸುತ್ತಿವೆ. ಈ ಸವಾಲನ್ನು ಸ್ವೀಕರಿಸದಿರಲು ಸಾಧ್ಯವೆ. ಇಲ್ಲ. ಎಲ್ಲಾ ದೇಶಪ್ರೇಮ, ಪ್ರಜಾಪ್ರಭುತ್ವವಾದಿ ಶಕ್ತಿಗಳು, ದೇಶದ ಸಾಂಸ್ಕೃತಿಕ ಐಕ್ಯತೆಯನ್ನು, ಭಾರತೀಯ ಸಂಸ್ಕೃತಿಯ ಜನಪ್ರಿಯ ಆಧಾರವನ್ನು ರಕ್ಷಿಸಬಯಸುವವರೆಲ್ಲಾ ಈ ದುಷ್ಟ ಆಟವನ್ನು ಸೋಲಿಸಲು ಮುಂದೈ ಬರಬೇಕು. ಪ್ರಮುಖವಾದ ಮುಂಬೈ ಚಿತ್ರೋದ್ಯಮವನ್ನು ದುಷ್ಟ ಕೋಮುವಾದೀ ವಿಚ್ಛಿದ್ರಕಾರಿ ಸಕ್ತಿಗಳಿಂದ ರಕ್ಷಿಸಲು ಸಾಧ್ಯವಿಲ್ಲವಾದರೆ ಭಾರತದ ಸಾಂಸ್ಕೃತಿಕ ವೈವಿಧ್ಯಮ ಐಕ್ಯತೆಯನ್ನು ಆಧಾರವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ.

ಅಸ್ಸಾಮಿನಿಂದಾಚೆಗೂ ಚಾಚಿದ ಕೋಮುಜ್ವಾಲೆ

ಮಣಿಪುರದ ಇಂಫಾಲ್ ಕಣಿವೆಯಲ್ಲಿನ ಕೋಮುಹಿಂಸಾಚಾರದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸುತ್ತಾ ಈ ಹಿಂಸಾಚಾರಗಳನ್ನು ಬಲವಾಗಿ ಖಂಡಿಸಿದೆ.

ಈ ಹಿಂಸಾಚಾರಗಳಿಗೆ ಕನಿಷ್ಟ ನೂರು ಜನ ಬಲಿಯಾಗಿದ್ದಾರೆ. ಈ ವ್ಯಾಪಕ ಹಿಂಸಾಚಾರಗಳ ಕೋಮು ಸ್ವರೂಪ ಅತ್ಯಂತ ಆತಂಕಕಾರಿ ಏಕೆಂದರೆ ಕೋಮು ಸೌಲಹಾರ್ದಕ್ಕೆ ಹೆಸರಾದ ಮಣಿಪುರದಲ್ಲಿ ಇಂತಹ ಹಿಂಚಾರದ ಹಿಂದೆಂದೂ ಕಂಡು ಬಂದಿರಲಿಲ್ಲ. ಕಳೆದ ಒಂದು ವರ್ಷದಿಂದ ಧಾರ್ಮಿಕ ಸಂಕುಚಿತವಾದಿ ಸಂಘಟನೆಗಳು ಇತರ ಧರ್ಮಗಳ ಜನಗಳ ವಿರುದ್ಧ ಉದ್ರೇಕಿಸುವಲ್ಲಿ ಸಕ್ರಿಯವಾಗಿದ್ದವು. ಹಿಂದೂ-ಮುಸ್ಲಿಂ ದಂಗೆಗಳು ಈ ಈಶಾನ್ಯ ರಾಜ್ಯದಲ್ಲಿಯೂ ಆರಂಭವಾಗಿರುವುದು ಕೋಮುವಿಷ ಹೇಗೆ ದೇಶವಿಡೀ ಹರಡುತ್ತಿದೆ ಎಂಬುವಕ್ಕೆ ಅಪಾಯಕಾರಿ ಸೂಚನೆ ಎಂದು ಪಿ.ಬಿ. ಖೇದ ವ್ಯಕ್ತಪಡಿಸಿದೆ.

ಮಣಿಪುರ ಸರಕಾರ ಪರಿಸ್ಥಿತಿ ಎದುರಿಸುವಲ್ಲಿ ತನ್ನ ತೀವ್ರ ಅಸಮರ್ಥತೆಯನ್ನು ಎತ್ತಿ ತೋರಿದೆ. ಕೇಂದ್ರ ಸರಕಾರ ತಕ್ಷಣ ಪರಿಸ್ಥಿತಿಯನ್ನು ಹತೋಟಿಗೆ ತಂದು, ಅದರ ಪುನರಾವರ್ತನೆಯಾಗದಂತೆ ಕ್ರಮಕ್ಕೆಗೊಳ್ಳಬೇಕೆಂದು ಪಿ.ಬಿ. ಒತ್ತಾಯಿಸಿದೆ. ನೂರಾರು ಜನ ಗಾಯಗೊಂಡಿದ್ದಾರೆ. ಆದ್ದರಿಂದ ಸಾಕಷ್ಟು ವೈದ್ಯಕೀಯ ಸಿಬ್ಬಂದಿಯನ್ನು ನಿಧಿಗಳನ್ನು ಇಲ್ಲಿ ಪೂರೈಸಬೇಕು. ತಾಳ್ಮೆಯಿಂದಿರಿ, ಉನ್ಮತ್ತ ಕೋಮುವಾದಿ ಶಕ್ತಿಗಳನ್ನು ಮೂಲೆಗುಂಪು ಮಾಡಿ ಎಂದು ಪೊಲಿಟ್ ಬ್ಯೂರೋ ಮಣಿಪುರದ ಜನತೆಗೆ ಮನವಿ ಮಾಡಿದೆ.

ಕಳ್ಳನಿಗೆ ಸುಳ್ಳನ ಉಪದೇಶ

"ಧರ್ಮವನ್ನು ರಾಜಕೀಯದೊಂದಿಗೆ ಬೆರೆಸಲಾಗುತ್ತಿದೆ"- ಇದು ಯಾರ ಯಾರ ಕುರಿತು ಮಾಡಿದ ಟೀಕೆ. ಯಲಹಂಕ ಉಪಚುನಾವಣಾ ಸಂದರ್ಭದಲ್ಲಿ ಪ್ರಚಾರ ಸಭೆಯಲ್ಲಿ ಬಿಜೆಪಿ ಅಧ್ಯಕ್ಷ ಮುರಳಿಮನೋಹರ ಜೋಷಿಯವರು ಕಾಂಗ್ರೆ ಬಗ್ಗೆ ಹೇಳಿದ ಮಾತು. ಅವರ ಈ ಚುನಾವಣಾ ಭಾಷಣದ ಮೊದಲು ಧ್ವನಿವರ್ಧಕ ಡಾ. ರಾಜ್‌ಕುಮಾರ್ ಹಾಡಿದ ಅವರ ಈ ಚುನಾವಣಾ ಭಾಷಣದ ಮೊದಲು ಧ್ವನಿವರ್ಧಕ ಡಾ. ರಾಜ್‌ಕುಮಾರ್ ಹಾಡಿನ "ಬುಮ್ಮ- ಶ್ರೀ ರಾಮಭಕ್ತಿ ಗೀತೆಯೊಂದಿಗೆ ಅಮಿತಾಬ್ ಬಚ್ಚನ್‌ರ ಜನಪ್ರಿಯ ಹಾಡು "ಚುಮ್ಮ ಚುಮ್ಮ ದೇದೇ " ರಾಗದಲ್ಲಿ "ರಾಮ ರಾಮ ಜೈಜೈ, ಸೀತಾ ಸೀತಾ ಜೈಜೈ" ಎಂದು ಕಿರಿಚಿಕೊಳ್ಳುತ್ತಿತ್ತಂತೆ. ಇದು ಧರ್ಮದ ಅವಹೇಳನ ಎಂದ ನೈಜ ಧಾರ್ಮಿಕರಿಗೆ ಬಿಜೆಪಿ ಕಾರ್ಯಕರ್ತರು ಏನನ್ನುತ್ತಾರೆ? ಧರ್ಮ ಎಂದರೆ ಏನೆಂದು ತಿಳಿಯದೆಂದೋ ಅಥವಾ ರಾಜಕೀಯ ಎಂದರೇನು ಎಂದು ತಿಳಿಯದೆಂದೋ

ಡಂಕೆಲ್ ಮಾರಿ ಲೇಖನ ಮಾಲೆ - 6

ದೇಶ ಮಾರಿ ಡಂಕೆಲ್

ಇವೆಲ್ಲಾ ಡಂಕೆಲ್ ಪ್ರಸ್ತಾವಗಳ ಬಗ್ಗೆ ಓದುವಾಗ ಬಹಳಷ್ಟು ಜನಕ್ಕೆ ಇದರಲ್ಲೇನಿದೆ ಹೊಸತು, ಈಗಾಗಲೇ ಐಎಂಎಫ್ ಸಾಲದ ಶರತ್ತುಗಳಿಗೆ ತಲೆಬಾಗಿ ನಮ್ಮ ಸರಕಾರ ಇಂತಹುದನ್ನೆಲ್ಲಾ ಈಗಾಗಲೇ ಮಾಡುತ್ತಿಲ್ಲವೇ? ಆಹಾರದ ಸಹಾಯಧನ ತೆಗೆದು ಹಾಕಿ ರೇಷನ್ ಬೆಲೆಯೇರಿಸಿ, ರಸಗೊಬ್ಬರದ ಸಹಾಯ ಧನ ತೆಗೆದು ಹಾಕಿ ರಸಗೊಬ್ಬರದ ಬೆಲೆ ಏರಿಸಿದೆ; ಕಾರ್ಲ್ ಹಿಲ್ಸ್ ಎಂಬ ಮಹಿಳೆ ತಿಂಗಳಿಗೊಂದು ಬಾರಿ ಎಂಬಂತೆ ಅಮೇರಿಕದ ರಾಜಧಾನಿ ವಾಷಿಂಗ್‌ಟನ್ನಿನಿಂದ ಸೂಪರ್ 301, ಸ್ಪೆಶಲ್ 301 ಎಂದು ಎದ್ದೆದ್ದು ಕೂಗಿ ಭಾರತದ ಮೇಲೆ ಪ್ರಯೋಗಿಸುತ್ತಿರುವುದು ಯಾಕಾಗಿ, ನಿನ್ನೆ ಮೊನ್ನೆ ಕೂಡ ಅಮೇರಿಕಾದ ಹಳೆಯ ಸರಕಾರದ ಜೊತೆಗೆ ಈ ದೆದರಿಕೆಯೂ ಹಳೆಯ ಮಾತಾಗಿಲ್ಲ ಎಂದು ನೆನಪಿಸುವಂತೆ ಕ್ಲಿಂಟನ್ ಹೊಸ ಸರಕಾರವೂ ಮತ್ತೆ ನಮ್ಮ ದೇಶವನ್ನು ಈ ಸೂಪರ್ 301 ದೆದರಿಕೆಯ ಪಟ್ಟಿಯಲ್ಲಿಟ್ಟಿರುವುದು ಯಾಕಾಗಿ? ಇದೇ ಬೌದ್ಧಿಕ ಹಕ್ಕುಗಳು ಪೇಟೆಂಟ್‌ಗಳ ಬಗ್ಗೆ ಭಾರತ ಒತ್ತಡ ಹೇರುವುದಕ್ಕಾಗಿಯೇ ಅಲ್ಲವೇ? ಎನ್ನಬಹುದು.

ಐಎಂಎಫ್, ವಿಶ್ವಬ್ಯಾಂಕ್, ಯಾರ ಹಿತ ಸಂರಕ್ಷಣೆಗಾಗಿ ಕೆಲಸ ಮಾಡುತ್ತವೆಯೋ ಗ್ಯಾಟ್ ಕೂಡ ಅದೇ ಹಿತಗಳ ಸಂರಕ್ಷಣೆಗಾಗಿ ಕೆಲಸ ಮಾಡುತ್ತದೆ. ಆದುದರಿಂದ ಐಎಂಎಫ್ ಶರತ್ತುಗಳು, ಅಮೇರಿಕ, ಜಪಾನ್ ಮತ್ತಿತರ ದೇಶಗಳ ನೇರ ಒತ್ತಡಗಳ ಜೊತೆಗೆ ಡಂಕೆಲ್ ಪ್ರಸ್ತಾವಗಳೂ ಸೇರಿದರೆ ಭಾರತದಂತಹ ಮೂರನೇ ಜಗತ್ತಿನ ರಾಷ್ಟ್ರಗಳ ಜನರು ಇನ್ನಿಲ್ಲದ ಸಂಕಟವನ್ನು ಅನುಭವಿಸಬೇಕಾಗುತ್ತದೆ. ತಪ್ಪಿಸಿಕೊಳ್ಳಲಾಗದ ಇರುಕಿನಲ್ಲಿ ಸಿಕ್ಕಿ ಬೀಳುವಂತಾಗುತ್ತದೆ.

ಅದನ್ನೂ ಮೀರಿದ ಗಂಡಾಂತರ

ಆದರೆ ಐ.ಎಂ.ಎಫ್ ಶರತ್ತುಗಳೆಂದರೆ ಭಾರತ ದೇಶ ಐ.ಎಂ.ಎಫ್‌ನಿಂದ ಸಾಲ ತೆಗೆದುಕೊಂಡಿದ್ದರ ಫಲವಾಗಿ ಭಾರತ ದೇಶದ ಮೇಲೆ ಹೇರಿದ ಅವರು ಹೇರಿದ ಶರತ್ತುಗಳು. ಈಗ ದಿಲ್ಲಿಯನ್ನಾಳುತ್ತಿರುವ ಕೇಂದ್ರ ಸರ್ಕಾರ ಈ ಸಾಲವನ್ನು ಮತ್ತೆ ಮತ್ತೆ ತೆಗೆದುಕೊಳ್ಳುತ್ತಿರುವಷ್ಟು ದಿನ ಈ ಶರತ್ತುಗಳು ಮುಂದುವರಿಯುತ್ತಿರುತ್ತವೆ. ಮುಂದೆ ಆಯ್ಕೆಯಾಗಬಹುದಾದ ಯಾವುದೇ ಸರ್ಕಾರ ನಿಮ್ಮ ಸಾಲವೂ ಬೇಡ, ನಿಮ್ಮ ಶರತ್ತುಗಳೂ ಬೇಡ ಎಂದರೆ, ಆಗ ಐ.ಎಂ.ಎಫ್. ಏನೂ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಹಿಂದೆ ಇಂದಿರಾಗಾಂಧಿಯವರ ಸರ್ಕಾರ 1980 ರಲ್ಲಿ ಮರಳಿ ಅಧಿಕಾರಕ್ಕೆ ಬಂದಾಗ ಐ.ಎಂ.ಎಫ್. ಸಾಲ ತೆಗೆದುಕೊಂಡಿದ್ದರು. ಅವರ ಶರತ್ತುಗಳೂ ಬಹಿರಂಗವಾಗಿ ಭಾರತದಲ್ಲಿ ಪ್ರತಿಭಟನೆಯ ಅಲೆ ಎದ್ದಾಗ ಐ.ಎಂ.ಎಫ್. ಸಾಲದ ಮುಂದಿನ ಕಂತುಗಳನ್ನು ನಾವು ತೆಗೆದುಕೊಳ್ಳುವುದಿಲ್ಲ ಎಂದು ಘೋಷಿಸಿದರು. ಐಂ.ಎಂ.ಎಫ್. ಶರತ್ತುಗಳ ಕತೆಯೂ ಅದರೊಂದಿಗೆ ಮುಗಿಯಿತು.

ಆದರೆ ಗ್ಯಾಟ್‌ನ ಒಡಂಬಡಿಕೆ ಅಥವಾ ಒಪ್ಪಂದ ಇಂದು ಡಂಕೆಲ್ ಪ್ರಸ್ತಾವಗಳ ಮೂಲಕ ಬಂದಿರುವುದು ಹಾಗಲ್ಲ. ಅದು ಭಾರತ ಸರಕಾರ ಇತರ 108 ದೇಶಗಳೊಡನೆ ಈ ಅಂತರರಾಷ್ಟ್ರೀಯ ವ್ಯಾಪಾರದ ನಿಯಮಾವಳಿಗಳನ್ನು ನಾವು ಒಪ್ಪಿದ್ದೇವೆ ಎಂದು ಮನಃಪೂರ್ವಕವಾಗಿ ಒಪ್ಪಿ ಸಹಿ ಹಾಕಬೇಕು. ಹಾಗೆ ಸಹಿ ಹಾಕಿದರೆ ಮುಂದೆ ಆ ಒಪ್ಪಂದ ಜಾರಿಯಲ್ಲಿರುವವರೆಗೂ ಅದನ್ನು ಒಪ್ಪಿದ ಎಲ್ಲಾ ದೇಶಗಳೂ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರ್ಥ. ಇಂತಹ ಒಂದು ಒಪ್ಪಂದಕ್ಕೆ ಯಾವ ಸರ್ಕಾರ ಸಹಿ ಹಾಕಿದರೂ ಅದನ್ನು ಮುಂದಿನ ಯಾವ ಸರ್ಕಾರವೂ ನಿರಾಕರಿಸಲಾಗದ ಒಪ್ಪಂದ. ಅಂದರೆ ಇಂದಿನ ಕಾಂಗ್ರೆಸ್ ಸರ್ಕಾರದ ಹೊಸ ಆರ್ಥಿಕ ನೀತಿಗಳು ಮತ್ತು ಐ.ಎಂ.ಎಫ್. ಡಂಕೆಲ್ ಪ್ರಸ್ತಾವಗಳ ವಿಷಯದಲ್ಲಿ ಅನುಸರಿಸುತ್ತಿರುವ ಗುಲಾಮಗಿರಿಯ ನೀತಿಯ ಬಗ್ಗೆ ಭಾರತದ ಜನತೆ ಸಿಡಿದೆದ್ದು ಸರ್ಕಾರವನ್ನು ಸೋಲಿಸಿದರೂ ನಂತರ ಬಂದ ಸರ್ಕಾರ ಐ.ಎಂ.ಎಫ್. ಶರತ್ತುಗಳನ್ನು ಪಾಲಿಸಲು ಒಪ್ಪದಿದ್ದರೂ ಅದೇ ಶರತ್ತುಗಳನ್ನು ಅದೇ ನೀತಿಯನ್ನು ಗ್ಯಾಟ್ ಒಪ್ಪಂದದ ಮೂಲಕ ಡಂಕೆಲ್ ಪ್ರಸ್ತಾವಗಳ ಮೂಲಕ ದೇಶದ ಮೇಲೆ ಹೇರುವುದು ತಪ್ಪುವುದಿಲ್ಲ.

ಅಂದರೆ ಭಾರತದ ಜನತೆ ಚುನಾವಣೆಯಲ್ಲಿ ನೀಡಿದ ಮತಾಭಿಪ್ರಾಯವನ್ನು ಅದು ಡಂಕೆಲ್‌ಗೆ ತೀವ್ರ ವಿರುದ್ಧವಾಗಿದ್ದರೂ ಪಾಲಿಸಲಾಗದಂತೆ ಭಾರತದ ಸರ್ಕಾರದ ಕೈ ಕಟ್ಟಿ ಹಾಕಲ್ಪಟ್ಟಿರುತ್ತದೆ.

ಹೀಗಾಗಿ ಡಂಕೆಲ್ ಪ್ರಸ್ತಾವಗಳು ಗ್ಯಾಟ್ ಒಪ್ಪಂದವಾಗಿ ಪರಿಣಮಿಸಿದರೆ ಐ.ಎಂ.ಎಫ್. ಅನ್ನು ಮೀರಿದ ಗಂಡಾಂತರವಾಗಿದೆ.

ಆರ್ಥಿಕ ಯುದ್ಧ (ಡಂಕೆಲ್‌ನಲ್ಲಿ ಅಡಗಿರುವ ಪ್ರತಿಕಾರ ಕ್ರಮಗಳು)

ಹೀಗೆ ಕೈ ಕಟ್ಟಿ ಹಾಕಲ್ಪಟ್ಟಿರುವುದರ ಮೂಲವೂ ಗ್ಯಾಟ್‌ನಲ್ಲಿಯೇ-ಅದರಲ್ಲಿಯೂ 8ನೇ ಸುತ್ತಿನಲ್ಲಿ ಬಂದಿರುವ ಡಂಕೆಲ್ ಪ್ರಸ್ತಾವಗಳಲ್ಲಿ ಅಡಗಿದೆ. ಗ್ಯಾಟ್ ಇಲ್ಲಿಯವರಿಗೆ ಏಳು ಸುತ್ತುಗಳನ್ನು ಮುಗಿಸಿದೆ. ಉರುಗ್ವೆ ಸುತ್ತು ಎಂಟನೇ ಸುತ್ತು ಎಂಬುದನ್ನು ನೀವು ಈ ಹಿಂದೆ "ಐಕ್ಯರಂಗ"ದಲ್ಲಿ ಓದಿರುತ್ತೀರಿ.

ಹಿಂದಿನ ಏಳು ಸುತ್ತುಗಳಲ್ಲಿ ಇದು ಗ್ಯಾಟ್‌ಗೆ ಸಂಬಂಧಪಡುವ ವಿಷಯ ಎಂದು ಕೂಡ ಅನ್ನಿಸಿಕೊಳ್ಳದ ಅನೇಕ ವಿಷಯಗಳನ್ನು ಈ ಬಾರಿ ಗ್ಯಾಟ್‌ಗೆ ಹೊಸದಾಗಿ ಸೇರಿಸಲಾಗಿದೆ.(ಪಕ್ಕದಲ್ಲಿರುವ ಬಾಕ್ಸ್ ನೋಡಿ)

ಇಲ್ಲಿಯವರೆಗೆ ಗ್ಯಾಟ್‌ನಲ್ಲಿ ಒಂದು ಯಾವುದೋ ಒಂದು ದೇಶ ಯಾವುದೋ ಒಂದು ವಿಭಾಗದಲ್ಲಿ ಲೋಪ ಎಸಗಿದರೆ ಉಳಿದ ದೇಶಗಳು ಆ ವಿಭಾಗದಲ್ಲಿ ಪ್ರತಿಕಾರ ಕ್ರಮ ತೆಗೆದುಕೊಳ್ಳುವ ರಿಟಾಲಿಯೇಷನ್ (ಏಟಿಗೆ ಪ್ರತಿ ಏಟು ಹಾಕುವ) ನಿಯಮಗಳಿದ್ದವು. ಆದರೆ ಈಗ ಗ್ಯಾಟ್‌ನ ಅಂತರರಾಷ್ಟ್ರೀಯ ವಾಣಿಜ್ಯದ ಅಸಂಖ್ಯ ವ್ಯವಹಾರಗಳಲ್ಲಿ ಎಲ್ಲಿ ಹೆಚ್ಚು ಕಡಿಮೆಯಾದರೂ ಆ ದೇಶದ ಮೇಲೆ ಎಲ್ಲ ರಂಗದಲ್ಲಿಯೂ ಪ್ರತಿ ಏಟುಹಾಕಬಹುದು ಎಂಬ ಕ್ರಾಸ್ ರಿಟಾಲಿಯೇಷನ್ ನಿಯಮಗಳನ್ನು ಸೇರಿಸಿದೆ. ಅಂದರೆ ಒಂದು ದೇಶ ಅದರಲ್ಲಿಯೂ ಭಾರತದಂತಹ ಬಡ ದೇಶ ತನ್ನ ಬಡತನದ ಕಾರಣಗಳಿಗಾಗಿಯೇ ಒಂದು ನಿಯಮವನ್ನು ಸರಿಯಾದ ಕಾಲಕ್ಕೆ ಪಾಲಿಸಲಾಗದಿದ್ದರೆ ಎಲ್ಲರಂಗಗಳಲ್ಲಿಯೂ ಅದಕ್ಕೆ ಇನ್ನಿತರ ದೇಶಗಳು ಪ್ರತಿಏಟು ಹಾಕುವುದೆಂದರೆ - ಔಷಧಿಗಳ ವಿಷಯದಲ್ಲಿಯೂ, ಬೀಜದ ವಿಷಯದಲ್ಲಿಯೋ ಕಬ್ಬಿಣದ ಅದುರಿನ ವಿಷಯದಲ್ಲಿಯೊ, ಹೆಚ್ಚು ಕಡಿಮೆಯಾದರೆ ತಂತ್ರಜ್ಞಾನ ಆಮದು, ಯಂತ್ರೋಪಕರಣಗಳ, ಕಂಪ್ಯೂಟರ್‌ಗಳು, ಬಿಡಿಭಾಗಗಳು ಇತ್ಯಾದಿ ಅನೇಕ ವಿಷಯಗಳಲ್ಲಿ ಪ್ರತಿಏಟು ಹಾಕುವುದೆಂದರೆ- ಆ ದೇಶದ ಮೇಲೆ ಒಂದು ಆರ್ಥಿಕ ಯುದ್ಧವನ್ನೇ ಸಾರಿದಂತೆ. ಅವರು ನಮ್ಮ ಬಟ್ಟೆಗಳ ಆಮದಿನ ಮೇಲೆ ಸುಂಕ ಏರಿಸಿದರು ನಾವು ಅವರ ಉಕ್ಕಿನ ಮೇಲೆ ಸುಂಕ ವಿಧಿಸೋಣ, ಇದರಿಂದ ರೇಗಿ ಅವರು ನಮ್ಮ ಇತರ ಆಮದಿನ ಬಹಿಷ್ಕಾರ ಮಾಡಿದರು. ನಾವು ಅವರ ದೇಶದಿಂದ ತರಿಸಿಕೊಳ್ಳುವ ವಸ್ತುಗಳ ಬಹಿಷ್ಕಾರ ಮಾಡೋಣ ಇತ್ಯಾದಿ ಹೀಗೆಯೇ ಸರಪಳಿ ಕ್ರಿಯೆ ಮುಂದುವರೆಯುತ್ತದೆ - ಆರ್ಥಿಕ ಯುದ್ಧವೇ ಆಗಿಬಿಡುತ್ತದೆ. ಇಂತಹ ಆರ್ಥಿಕ ಯುದ್ಧಕ್ಕೆ ದೇಶವನ್ನು ದೂಡಲಾಗದೆ ಮುಂದೆ ಆಡಳಿತಕ್ಕೆ ಬರುವ ಸರ್ಕಾರಗಳೂ ಮಣಿಯುವ ಸ್ಥಿತಿಯನ್ನು ಡಂಕೆಲ್ ಪ್ರಸ್ತಾವಗಳು ಉಂಟುಮಾಡುತ್ತವೆ. ಆದ್ದರಿಂದಲೇ ಇದು ಐ.ಎಂ.ಎಫ್. ಸಾಲದ ಶರತ್ತುಗಳಿಗಿಂತಲೂ ಹೆಚ್ಚು ಹಾನಿಕಾರಕವಾಗುತ್ತದೆ.

ಹೀಗಾಗಿ ಮುಂದೆಯೂ ಕೂಡ ಭಾರತ ಎಲ್ಲಾ ಜನತೆ ಬಯಸಿದರೂ ಯಾವ ಸರ್ಕಾರವೂ ಕೂಡ ಈ ಒಪ್ಪಂದ ನಿಯಮಾವಳಿಗಳಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ಬಿಡಿಸಿಕೊಳ್ಳಲೆತ್ನಿಸುವುದೆಂದರೆ ಒಂದು ಆರ್ಥಿಕ ಯುದ್ಧಕ್ಕೆ ಸಜ್ಜಾಗಬೇಕಾಗುತ್ತದೆ.

ಸಾರ್ವಭೌಮತೆಯ ಮೇಲಿನ ಧಾಳಿ

ಇದು ನಮ್ಮ ದೇಶದ ಸಾರ್ವಭೌಮತೆ ಎಂದರೆ ನಮ್ಮನ್ನೇ ನಾವೇ ಆಳಿಕೊಳ್ಳುವ ನಮ್ಮ ದೇಶ ಹೇಗಿರಬೇಕು, ನಾವು ಹೇಗೆ ಬದುಕಬೇಕು ಎನ್ನುವುದರಲ್ಲಿ ಭಾರತದ ಜನರೆಲ್ಲರ ಒಟ್ಟು ತೀರ್ಮಾನವೇ ಅಂತಿಮ ಎನ್ನುವ ನಮ್ಮ ದೇಶಗಳ ಸೌರ್ವಭೌಮತೆಯ ಮೇಲಿನ ಧಾಳಿಯಾಗಿದೆ.

ನಾವು ಇತರ ಲೇಖನಗಳಲ್ಲಿ ಚರ್ಚಿಸಿರುವಂತೆ- ನಮ್ಮ ದೇಶದ ರೈತರಿಗೆ ನಮ್ಮ ಸರ್ಕಾರ ಸಹಾಯ ಮಾಡಬೇಕೋ ಬೇಡವೋ, ನಮ್ಮ ದೇಶದ ಬಡಜನರಿಗೆ, ಇತರ ದುಡಿಯುವ ಜನರಿಗೆ ಯಾವ ಬೆಲೆಯಲ್ಲಿ ಅಕ್ಕಿ ಸಿಗಬೇಕು ಎನ್ನುವುದು ನಮ್ಮ ದೇಶ, ದೇಶದ ಸಂಸತ್ತು (ಲೋಕಸಭೆ-ರಾಜ್ಯಸಭೆ) ತೀರ್ಮಾನಿಸುವಂತಿಲ್ಲ.

ಜೊತೆಗೆ ಈ ಡಂಕೆಲ್ ಸೂತ್ರಗಳನ್ನು ಒಪ್ಪಿ ನಮ್ಮ ದೇಶ ಸಹಿ ಹಾಕಿದರೆ ನಮ್ಮ ಸಂಸತ್ತು ಜಾರಿಗೆ ತಂದಿರುವ ಅನೇಕ ಕಾನೂನುಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ, ಕೆಲವನ್ನು ಪೂರ್ತಿಯಾಗಿ ಬದಲಾಯಿಸಬೇಕಾಗುತ್ತದೆ. ನಮ್ಮ ಜನರಿಂದ ಆಯ್ಕೆಯಾದ ಸಂಸತ್ತು ಇಂತಹ ಕಾನೂನುಗಳನ್ನು ಜನರಿಗೆ ಮಾರಕವಾದ ಕಾನೂನುಗಳನ್ನು ತರಲು ನಿರಾಕರಿಸಿದರೂ ಕೂಡಾ ಡಂಕೆಲ್-ಗ್ಯಾಟ್ ಒಪ್ಪಂದ ಉಲ್ಲಂಘನೆಯಾಗುತ್ತದೆ. "ಮಾಡದಿದ್ದರೆ ನೋಡಿ ಏನಾಗುತ್ತದೆ" ಎಂಬಂತಹ ದೆದರಿಕೆಗಳಿಗೆ ಮಣಿದು ಮಾಡಬೇಕಾಗುತ್ತದೆ ನಮ್ಮ ಸಂಸತ್ತಿಗೆ ಅಧಿಕಾರವನ್ನು ಕಳಚಿಕೊಂಡಂತೆ ಆಗುತ್ತದೆ.

ಕೇಂದ್ರ-ರಾಜ್ಯ ಸಂಬಂಧಗಳು ನಮ್ಮ ಸಂವಿಧಾನದಲ್ಲಿ ಇಂತಹ ವಿಷಯಗಳಲ್ಲಿ ಕೇಂದ್ರದ ಇಂತಹ ವಿಷಯಗಳಲ್ಲಿ ರಾಜ್ಯ ಸರ್ಕಾರಗಳ ಪರಮ ಅಧಿಕಾರ ಎಂದು ವಿಭಾಗಿಸಲಾಗಿದೆ. ಕಾಂಗ್ರೆಸ್ ಪ್ರಭುತ್ವ ರಾಜ್ಯಗಳ ಅಧಿಕಾರವನ್ನು ಕಿತ್ತುಕೊಂಡು ಅವುಗಳನ್ನು ಮುನಿಸಿಪಾಲಿಟಿಗಳ ಸಮಕ್ಕೆ ಇಳಿಸುತ್ತಿದೆ ಎಂಬುದನ್ನು ಕಾಣುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಆದರೆ ಡಂಕೆಲ್ ಪ್ರಸ್ತಾವಗಳಿಗೆ ಕೇಂದ್ರ ಒಪ್ಪಿಕೊಂಡರೆ ಕೃಷಿ ಮೊದಲಾದ ಅನೇಕ ವಿಷಯಗಳ ಬಗ್ಗೆ ರಾಜ್ಯಗಳ ಅಧಿಕಾರ ಕಿತ್ತುಕೊಂಡಂತೆ ಆಗುತ್ತದೆ.

ಹೀಗೆ ದೇಶ ಸಂವಿಧಾನ, ಸಂಸತ್ತಿನ ಅಧಿಕಾರ ಕೇಂದ್ರ ರಾಜ್ಯ ಅಧಿಕಾರಗಳು ಜನತೆಯ ಅಭಿಮತ ಎಲ್ಲಕ್ಕೂ ಡಂಕೆಲ್ ಪ್ರಸ್ತಾವಗಳು ಬಾಧಕವಾಗುತ್ತವೆ.

ಇದೇ ಮೊದಲ ಬಾರಿಗೆ

ಇದೇ ಮೊದಲ ಬಾರಿಗೆ ಏಳು ಸುತ್ತಿನ ಗ್ಯಾಟ್ ಮಾತುಕತೆಗಳಲ್ಲಿಲ್ಲದ ಎಂಟನೇ ಸುತ್ತಿಗೆ ನುಸುಳಿದ ಅಂಗಳು.

ಇದೇ ಮೊದಲ ಬಾರಿಗೆ ದೇಶದ ಗಡಿಗಳಾಚೆಗಿನ ವ್ಯಾಪಾರಕ್ಕೆ ಸೀಮಿತವಾಗಿದ್ದ ಗ್ಯಾಟ್ ದೇಶಗಳ ಗಡಿಯೊಳಕ್ಕೆ ನುಗ್ಗಿ ಅವಾಂತರ

ಇದೇ ಮೊದಲ ಬಾರಿಗೆ ಕೃಷಿಯ ಉತ್ಪಾದನೆಗಳ ವ್ಯಾಪಾರ, ದೇಶದೊಳಗಿನ ಆಹಾರ ಸಾಗಣೆಕೆ ಮಾರಾಟ ರೇಷನ್ ವಿತರಣೆ

ಇದೇ ಮೊದಲ ಬಾರಿ ಬುದ್ಧಿ ಜನ್ಯ ಸಂಶೋಧನೆಗಳು ಅವುಗಳ ಮೇಲಿನ ಪೇಟೆಂಟ್ ಕಾನುನುಗಳು, ಗಿಡ ಮರ ಬಳ್ಳಿ, ಪ್ರಾಣಿ ಪಕ್ಷಿಗಳು ಪೇಟೆಂಟ್ ಕಾನೂನಿನ ಹಿಡಿಗೆ

ಇದೇ ಮೊದಲ ಬಾರಿಗೆ ದೇಶದೊಳಗೆ ವಿದೇಶದ ಬಂಡವಾಳ ಹೂಡಿಕೆ ಕ್ರಮಗಳು, ಅವುಗಳ ಮೇಲಿನ ನಿರ್ಬಂಧಗಳ ಸಮಾಚಾರ

ಇದೇ ಮೊದಲ ಬಾರಿಗೆ ಕಂಪ್ಯೂಟರ್ ಸೇವೆ, ಸಾರಿಗೆ, ಸಂಶೋಧನೆ ಆರೋಗ್ಯ ಸೇವೆ, ಹೋಟೆಲ್, ಸಿನಿಮಾ, ವಿಡಿಯೋ ಪ್ರವಾಸೋದ್ಯಮ ಮೊದಲಾದವೆಲ್ಲಾ ಸೇವೆಗಳಲ್ಲಿನ ವ್ಯಾಪಾರ ವ್ಯವಹಾರಗಳು

ಇದೇ ಮೊದಲ ಬಾರಿಗೆ ನಿಮಗೆ ಬೇಕಾದರೆ ಎಲ್ಲ ಶರತ್ತುಗಳಿಗೂ ಒಪ್ಪಬೇಕು ಬೇಡವಾದರೆ ಎಲ್ಲವನ್ನು ಬಿಡಬೇಕು ಎಂಬ ಮಾರಕ ಶರತ್ತು.

ಇದೇ ಮೊದಲ ಬಾರಿಗೆ ಕ್ರಾಸ್ ರಿಟಾಲಿಯೇಶನ್ (Cross retaliation) ಎಂಬ ಸೇಡಿಗೆ ಪ್ರತಿಸೇಡು ತೀರಿಸುವ ಕ್ರಮ. ನಮ್ಮ ದೇಶದಲ್ಲಿ ಆಹಾರ, ಬೀಜಗಳ ವಿಷಯದಲ್ಲಿ ಹೆಚ್ಚು ಕಡಿಮೆಯಾದರೆ ಯಂತ್ರೋಪಕರಣಗಳು ಕಂಪ್ಯೂಟರ್‌ಗಳು ಇಂತಹ ವಿಷಯದಲ್ಲಿ ಪ್ರತಿಕಾರ ಕ್ರಮ ತೆಗೆದುಕೊಳ್ಳುವ ಕ್ರಮ. ಅಂತರರಾಷ್ಟ್ರೀಯ ಕಾನೂನು ಇಲ್ಲಿಯವರೆವಿಗೆ ಕಾಣದ ಅನ್ಯಾಯ.

ಮೇ ದಿನದ ನೆನಪಿನಲ್ಲಿ

ಮುಕ್ತ ವ್ಯಾಪಾರದ ನಾಡಿನಲ್ಲಿ

ಮೇ ದಿನದ ನೆನಪಿನಲ್ಲಿ ಹಿಂದೆ ಸಮಾಜವಾದಿಯಾಗಿದ್ದ ದೇಶಗಳಲ್ಲಿ ಇಂದೇನಾಗುತ್ತಿದೆ ಎಂದು 'ಐಕ್ಯರಂಗ' ವಿವರಿಸಿತ್ತು. ಸಮಾಜವಾದವನ್ನು ಇನ್ನು ಮುಂದೆಲ್ಲಾ ಮುಕ್ತ ವ್ಯಾಪಾರವೇ ಎಂದು ಕುಣಿದಾಡಿದ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ದೇಶಗಳಲ್ಲಿನ ಮುಕ್ತ ವಾಣಿಜ್ಯದ ಕಥೆಯನ್ನು ಮುಂದೆ ಓದಿ:

80ರ ದಶಕದ ಕೊನೆಯಲ್ಲಿ "ಗ್ಲಾಸ್‌ನೋಸ್ತ್", "ಪೆರಸ್ತ್ರೋಯಿಕ" ಮಂತ್ರವಾಗಿದ್ದರೆ, ಇಂದು 'ಜಾಗತೀಕರಣ', 'ಖಾಸಗೀಕರಣ' ಹೊಸ ಮಂತ್ರವಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ, ಖಾಸಗಿ ಕಂಪನಿಗಳ ಮೇಲೆ ಯಾವುದೇ ನಿಯಂತ್ರಣ ಸರ್ಕಾರಿ ಹಸ್ತಕ್ಷೇಪವಿಲ್ಲದೆ ಅವು ಭಾರಿ ಬೆಳವಣಿಗೆ ಸಾಧಿಸುತ್ತವೆ. ಎಲ್ಲಾ ದೇಶಗಳ ನಡುವೆ ಸರಕುಗಳ ಹಾಗೂ ಸೇವೆಗಳ ಮುಕ್ತ ವ್ಯಾಪಾರಕ್ಕೆ ಯಾವುದೇ ಪ್ರತಿಬಂಧವಿರಬಾರದು. ಅಂದರೆ ಮಾತ್ರ ಆರ್ಥಿಕ ಬೆಳವಣಿಗೆ ಸಾಧ್ಯ. ಅನುತ್ಪಾದಕ ಕ್ಷೇತ್ರಗಳಿಗೆ ಸಬ್ಸಿಡಿ ಕಡಿತಮಾಡಬೇಕು. ಇದು ಈ ಮಂತ್ರ ಜಪಿಸುತ್ತಿರುವವರ ವಾದ.

'ಜಾಗತೀಕರಣ' 'ಖಾಸಗೀಕರಣ' 'ಮಾರುಕಟ್ಟೆ ಆರ್ಥಿಕ'ದ ಮಂತ್ರ ಜಪಿಸುತ್ತಿದ್ದ ರಶ್ಯ, ಮಾಜಿ ಸೋವಿಯೆತ್ ಒಕ್ಕೂಟ, ಪೂರ್ವ ಯುರೋಪಿನ ದೇಶಗಳ ಆರ್ಥಿಕದ ಗತಿ ಏನಾಗಿದೆ ಎಂದು ಎಲ್ಲರಿಗೂ ಗೊತ್ತು. ಇದೀಗ 'ಮಾರುಕಟ್ಟೆ ಆರ್ಥಿಕದ ಸ್ವರ್ಗವಾದ ವಿಕಸಿತ ದೇಶಗಳಲ್ಲಿ ಏನಾಗುತ್ತಿದೆ ಎಂದು ನೋಡೋಣ.'

ಆರ್ಥಿಕ ಹಿಂಜರಿತ

ಜಿ-7 ಎಂದು ಕರೆಯಲಾಗುವ 7 ವಿಕಸಿತ ಬಂಡವಾಳ ಶಾಹಿ ದೇಶಗಳಲ್ಲಿ ಹಿಂದೆಂದೂ ಕಾಣದ ತೀವ್ರ ಆರ್ಥಿಕ ಹಿಂಜರಿತ ಕಂಡುಬರುತ್ತಿದೆ. ತೀವ್ರತೆ ದೇಶದಿಂದ ದೇಶಕ್ಕೆ ಬದಲಾದರೂ ಹಿಂದೆಂದಿಗಿಂತಲೂ ಹೆಚ್ಚಿದೆ.

ತೀವ್ರ ಆರ್ಥಿಕ ಹಿಂಜರಿತದಿಂದಾಗಿ ನಿರುದ್ಯೋಗ ವಿಪರೀತ ಹೆಚ್ಚಿದ್ದು, ದೊಡ್ಡ ಟ್ರೇಡ್‌ಯೂನಿಯನ್ ಹೋರಾಟಗಳು ಆರಂಭವಾಗಿದೆ. ಈ ದೇಶಗಳ ಹಲವಾರು ಜಗತ್ಪ್ರಸಿದ್ಧ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಭಾರಿ ನಷ್ಟ ಅನುಭವಿಸಿ ಕಾರ್ಮಿಕರನ್ನು ಕೆಲಸದಿಂದ ಹೊರದಬ್ಬುತ್ತಿದೆ. ಸರ್ಕಾರದ ಸಬ್ಸಿಡಿ ಸಹಾಯ ಕೇಳಲಾರಂಭಿಸಿವೆ. ಮುಕ್ತ ವ್ಯಾಪಾರದ ಬದಲು ಅವರ ಮಾರುಕಟ್ಟೆ ಕಾಪಾಡಿಕೊಳ್ಳಲು ಹೆಚ್ಚೆಚ್ಚು ಸರ್ಕಾರದ ರಕ್ಷಣೆಗೆ ಮೊರೆ ಹೋಗುತ್ತಿವೆ. ಪೈಪೋಟಿಯ ಆಮದಿನ ಮೇಲೆ ಸರ್ಕಾರ ನಿರ್ಬಂಧ ಹೇರುವಂತೆ ಒತ್ತಾಯಿಸುತ್ತಿವೆ. 'ಜಾಗತೀಕರಣ' ಹಾಗೂ 'ಖಾಸಗೀಕರಣ'ದ ಮಂತ್ರ ಎಷ್ಟು ವಿಕಪಕ್ಷೀಯ ಎಂದು ಹಿಂದೆಂದಿಗಿಂತಲೂ ಸ್ಪಷ್ಟವಾಗುತ್ತಿದೆ.

ಪ್ರತಿಯೊಂದು ದೇಶದ ಸ್ಥೂಲ ಚಿತ್ರಣ ಇಂದಿನ ಪರಿಸ್ಥಿತಿ ಇಲ್ಲಿದೆ.

ಬ್ರಿಟನ್, ಇಟಲಿ

ಬ್ರಿಟನ್ ನಿರುದ್ಯೋಗಿಗಳ ಸಂಖ್ಯೆ ಮೊದಲಬಾರಿಗೆ 30 ಲಕ್ಷ ದಾಟಿತ್ತು. ಇತ್ತೀಚೆಗೆ ಎಪ್ರಿಲ್ 2 ರಂದು 63,000 ರೈಲ್ವೇ ಕಾರ್ಮಿಕರು ಮುಷ್ಕರ ಹೂಡಿದರು. ಲಂಡನ್ ಬಸ್ ಡ್ರೈವರುಗಳೂ ಮುಷ್ಕರ ಹೂಡಿ ಇಡೀ ಸಾರಿಗೆ ಕ್ಷೇತ್ರ ಮುಚ್ಚುವಂತಾಗಿತ್ತು. ಎಪ್ರಿಲ್ 16 ರಂದು ರೈಲ್ವೇ ಕಾರ್ಮಿಕರೂ ಮುಷ್ಕರ ಹೂಡಿದರು ಅಲ್ಲದೆ ಪ್ರಸಿದ್ಧ ರಾಷ್ಟ್ರೀಯ ಗಣಿ ಕಾರ್ಮಿಕರ ಯೂನಿಯನ್ ಕರೆ ಮೇರೆಗೆ ಅರ್ಧಕ್ಕಿಂತಲೂ ಹೆಚ್ಚು ಗಣಿಗಳು ಮುಚ್ಚಿದವು. ಇತರ ಸಾರ್ವಜನಿಕ ಕ್ಷೇತ್ರದ ನೌಕರರು ಅಧ್ಯಾಪಕರು, ಆಸ್ಪತ್ರೆ ಸಿಬ್ಬಂದಿ ಇತ್ಯಾದಿಗಳು ಸರ್ಕಾರದ ಖಾಸಗೀಕರಣ ಹಾಗೂ ಅದರಿಂದಾಗುವ ಉದ್ಯೋಗ ನಾಶದ ವಿರುದ್ಧ ಒಂದು ದಿನದ ಮುಷ್ಕರ ಹಾಕುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ.

ಇಟಲಿಯಲ್ಲೂ ಎಪ್ರಿಲ್ 2 ರಂದು ಲಕ್ಷಾಂತರ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಇದರಿಂದ ಅಂಚೆ ಹಾಗೂ ಸಾಗಾಣಿಕೆ ಕ್ಷೇತ್ರದಲ್ಲೂ ಪೂರ್ಣ ಸ್ತಬ್ಧವಾಗಿತ್ತು.

ಜರ್ಮನಿಯಲ್ಲಿ

ಅತ್ಯಂತ ದೊಡ್ಡ ಮುಷ್ಕರಗಳು ನಡೆದಿರುವುದು ಪೂರ್ವ ಜರ್ಮನಿಯಲ್ಲಿ, ಎಪ್ರಿಲ್ 1 ರಂದು ಪೂರ್ವ ಜರ್ಮನಿಯ ಒಂದು ಲಕ್ಷ ಕಾರ್ಮಿಕರು ಪಶ್ಚಿಮ ಜರ್ಮನಿಯ ಮಟ್ಟದ ಸಂಬಳಕ್ಕಾಗಿ ಮುಷ್ಕರ ಹೂಡಿದರು.

ಜರ್ಮನಿಯಲ್ಲಿ ತಾವು ಹಿಂಜರಿತ ಆರಂಭವಾಗುವ ಮೊದಲು (1991 ರಲ್ಲಿ) ಲೋಹ ಕಾರ್ಮಿಕರಿಗೆ ಶೇಕಡಾ 26 ಹಾಗೂ ಉಕ್ಕು ಕಾರ್ಮಿಕರಿಗೆ ಶೇಕಡಾ 21 ಸಂಬಳ ಏರಿಕೆ ಬಗ್ಗೆ ಒಪ್ಪಂದವಾಗುತ್ತಿದೆ. ಹಿಂಜರಿತದ ಹೆಸರು ಹೇಳಿಕೊಂಡು, ಈಗ ಈ ಕಂಪನಿಗಳ ಮಾಲಕರು ಈ ಒಪ್ಪಂದದಿಂದ ಹಿಂತೆಗೆಯುತ್ತಿದ್ದಾರೆ. ಶೇಕಡಾ 9 ಏರಿಕೆ ಮಾತ್ರ ಕೊಡಲು ಸಾಧ್ಯ ಎಂದು ಹೇಳುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಜರ್ಮನಿಯ ಪ್ರಸಿದ್ಧ ಯೂನಿಯನ್ ಐಜಿ ಮೆಟಾಲ್ ಮುಷ್ಕರ ಹೂಡಿತ್ತು. ಎಪ್ರಿಲ್ 15 ರಂದು 91,000 ಇಂಜನೀಯರಿಂಗ್ ಹಾಗೂ ಉಕ್ಕು ಕಾರ್ಮಿಕರು ಎಪ್ರಿಲ್ 15 ರಂದು ಪೂರ್ವ ಜರ್ಮನಿಯ ಐದು ರಾಜ್ಯಗಳಲ್ಲಿ ಮುಷ್ಕರ ಹೂಡಿದರು. ಜರ್ಮನ್ ಬ್ಯಾಂಕ್ ಸಂಘಟನೆ, ಪಶ್ಚಿಮ ಜರ್ಮನಿಯ ಆರ್ಥಿಕ ಹಿಂಜರಿತ ತೀವ್ರವಾಗುತ್ತಿದೆ. ಇದಕ್ಕೆ ಪೈಪೋಟಿ ಎದುರಿಸಲಾಗದ ಜರ್ಮನ್ ಮನೋಭಾವ ಹಾಗೂ ಜಾಗತಿಕ ಆರ್ಥಿಕವೇ ಕ್ಷೀಣಗೊಂಡಿರುವುದು ಕಾರಣ ಎಂದು ಹೇಳಿದೆ.

ಫ್ರಾನ್ಸ್ ಇತ್ಯಾದಿ

ಫ್ರಾನ್ಸ್‌ನಲ್ಲಿ ಮೊದಲಬಾರಿಗೆ ನಿರುದ್ಯೋಗ 30 ಲಕ್ಷ ಮೀರಿದೆ. ಇದು ಶೇಕಡಾ 10.4 ನಿರುದ್ಯೋಗಕ್ಕೆ ಸಮವಾಯಿತು. ಈ ಅಂಕಿ ಸಂಖ್ಯೆಗಳನ್ನು ಚುನಾವಣೆಯ ನಂತರ ಬಿಡುಗಡೆ ಮಾಡಲಾಯಿತು. ಆವರೆಗೆ ತಡೆಹಿಡಿಯುಲಾಗಿತ್ತು. 1993ರಲ್ಲಿ ನಿರುದ್ಯೋಗ ಇನ್ನೂ ಹೆಚ್ಚಾಗಬಹುದು ಎಂದು ಸರ್ಕಾರವೇ ಹೇಳಿದೆ. ಕೃಷಿ ಸಬ್ಸಿಡಿ ಕಡಿತದ ವಿಚಾರದಲ್ಲಿ ಫ್ರೆಂಚ್ ರೈತರು ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ಪ್ರತಿಭಟನೆಯ ಸ್ವರೂಪ ನೋಡಿದ ಸರ್ಕಾರ ಅಮೇರಿಕಾದೊಂದಿಗೆ ವಾಣಿಜ್ಯಯುದ್ಧಕ್ಕೆ ಇಳಿಯಬೇಕಾಗಿದೆ.

ಕಳೆದ ಕೆಲವು ವಾರಗಳಲ್ಲಿ ಸ್ಪೇನ್‌ನ ರಾಜಧಾನಿ ಮ್ಯಾಡ್ರಿಡ್‌ನ ಮುನಿಸಿಪಲ್ ಕಾರ್ಮಿಕರು, ಪ್ಯಾರೀಸ್ ವಿಮಾನ ನಿಲ್ದಾಣ ಕಾರ್ಮಿಕರು, ಪೋರ್ಚುಗಲ್‌ನ ವಿಮಾನ ನಿಗದಿತ ಕಾರ್ಮಿಕರು, ಬೆಲ್ಜಿಯಂನ ವಿಮಾನ ನಿಗಮ ಕಾರ್ಮಿಕರು - ಈ ರೀತಿ ಹತ್ತು ಹಲವಾರು ಕಾರ್ಮಿಕ ಸಂಘಟನೆಗಳ ಮುಷ್ಕರದ ಅಲೆ ಎದ್ದಿದೆ ಪಶ್ಚಿಮ ಯುರೋಪಿನಲ್ಲಿ.

ವಿಶ್ವ ಜನ ಸಮುದಾಯದ ಹೋರಾಟ ಹೊಸ ಘಟ್ಟ ತಲುಪಿದೆ

- ಜ್ಯೋತಿ ಬಸು

ಮೇ 5ರಿಂದ 7ರವರೆಗೆ ಕಲ್ಕತ್ತೆಯಲ್ಲಿ ನಡೆದ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣದ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಜ್ಯೋತಿಬಸು ಈ ವಿಚಾರ ಸಂಕಿರಣದ ಮಹತ್ವದ ಬಗ್ಗೆ ಬರೆಯುತ್ತಾರೆ. ಮುಂದಿನವಾರ ಈ ವಿಚಾರ ಸಂಕಿರಣದ ಯಶಸ್ಸಿನ ಬಗ್ಗೆ ಲೇಖನ-ವರದಿ ಪ್ರಕಟಿಸಲಿದ್ದೇವೆ.



ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಮುಖಂಡರು

ಕಾರ್ಲ್‌ಮಾರ್ಕ್ಸ್ ಹುಟ್ಟಿ ಮೇ 5 175 ವರ್ಷ ಕಳೆದಿವೆ. ಇವತ್ತು ಂದೆಂದಿಗಿಂತ ಕಾರ್ಲ್‌ಮಾರ್ಕ್ಸ್ ಮಹತ್ವ ಹೆಚ್ಚುತ್ತಿದೆ. ಕೆಲವು ಸಮಾಜವಾದಿ ರಾಷ್ಟ್ರಗಳಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯನ್ನು ಆಧಾರವಾಗಿಟ್ಟು ಮಾರ್ಕ್ಸ್‌ವಾದದ ಶಕ್ತಿ ಕುಂದಿದೆಯೆಂದು ತೋರಿಸುವುದಕ್ಕೆ ಪ್ರಚಾರ ನಡೆದಿದೆ. ಆರ್ಥಿಕ, ರಾಜಕೀಯ ರಂಗಗಳು ಬಂಡವಾಳಶಾಹಿಯಿಂದ ಮಾತ್ರ ಪರಿಹಾರ ಕಾಣಲು ಸಾಧ್ಯ ಎನ್ನುವ ಪ್ರಚಾರ ನಡೆದಿದೆ. ಮಾನವ ಚರಿತ್ರೆಯ ಉನ್ನತ ಮಟ್ಟದ ಬೆಳವಣಿಗೆ ಬಂಡವಾಳಶಾಹಿ ಧೋರಣೆಯಿಂದ ಮಾತ್ರ ಸಾಧ್ಯ ಎಂದು ಹೇಳಿಕೊಳ್ಳುತ್ತಿದ್ದಾರೆ.

ಈ ರೀತಿ ಪ್ರಚಾರ ಮಾಡುವವರು ಮನಃಪೂರ್ವಕವಾಗಿ ಹೇಳದೇ ಇರುವಂತ ಕೆಲವು ವಿಷಯಗಳಿವೆ. ಬಂಡವಾಳಶಾಹಿ ಸರ್ವನಾಶ ಸ್ವಭಾವತಃ ವಿನಾಶಕಾರಿ. ಅಸಮಾನತೆಯಿಂದ ಮನುಷ್ಯ ಮನುಷ್ಯನನ್ನು ಶೋಷಣೆ ಮಾಡುವಂತದ್ದು. ಬಹುಪಾಲು ಜನರಿಗೆ ವಿದ್ಯಾಭ್ಯಾಸ, ಆರೋಗ್ಯಕ್ಕೆ ಪ್ರಾಶಸ್ತ್ಯತೆ ಕೊಡದೇ ಇರುವುದು, ದಾರಿದ್ರ್ಯ ಬಂಡವಾಳಶಾಹಿ ಹುಟ್ಟಿನಲ್ಲೇ ಬೆಳೆದ ವ್ಯವಸ್ಥೆ. ಇವೆಲ್ಲ ಬಂಡವಾಳಶಾಹಿ ಸಮಾಜವನ್ನು ಕಾಡುತ್ತಿರುವ ದೊಡ್ಡ ರೋಗಗಳು. ಈ ಸತ್ಯವನ್ನು ಮುಚ್ಚಿ ಇಡಲು ಬಹಳ ದಿನ ಸಾಧ್ಯವಿಲ್ಲ. ಶೋಷಿತರಾದ ಮನುಷ್ಯರನ್ನು ಸಂಘಟಿಸಲು, ಶೋಷಣೆಯ ವಿರುದ್ಧ ಹೋರಾಟಕ್ಕೆ ಪ್ರೇರಣೆ ನೀಡಿ, ದಮನ ಮಾಡುವ ಬಂಡವಾಳಶಾಹಿಗಳ ಧೋರಣೆಯನ್ನು ಹಿಮ್ಮೆಟ್ಟಿಸಿ ಮೂಲೆಗಾಣಿಸಲು ನೆರವಾಗುವ ಅತಿ ಉನ್ನತವಾದ ಶಸ್ತ್ರವಾಗಿದೆ ಮಾರ್ಕ್ಸ್‌ವಾದ. ಇದೇ ಇವತ್ತು ಮಾರ್ಕ್ಸ್‌ವಾದ ಅಜೇಯವಾಗುಳಿಯಲು ಕಾರಣವಾಗಿದೆ.

ಪ್ರಾರಂಭದಿಂದಲೂ ಕಠಿಣ ಪರಿಸ್ಥಿತಿಗಳಲ್ಲಿ ಹೋರಾಟಗಳಿಂದ ಬೆಳೆದು ಬಂದ ಒಂದು ಸಿದ್ಧಾಂತವಾಗಿದೆ ಮಾರ್ಕ್ಸ್‌ವಾದ.

ಕಾಲ, ಸಮಯ, ಚರಿತ್ರೆ, ಸಮಾಜದರಿಂದ ಬೇರ್ಪಟ್ಟು ನಿಲ್ಲುವಂತ ಸಿದ್ಧಾಂತವಲ್ಲ ಇದು. ಭವಿಷ್ಯತ್ತಿನಲ್ಲಿ ಬೆಳೆಯುತ್ತಿರುವ ಬೀಜವಾಗಿದೆ ಮಾರ್ಕ್ಸ್‌ವಾದ. ಮಾರ್ಕ್ಸ್‌ವಾದಕ್ಕೆ ಪ್ರಾಯೋಗಿಕ ರೂಪ ಕೊಡುವಲ್ಲಿ ಲೆನಿನ್ ದೊಡ್ಡ ಕಾಣಿಕೆ ನೀಡಿದ್ದಾರೆ.

ಸೋವಿಯತ್ ರಷ್ಯದಲ್ಲಿ ಸಮಾಜವಾದೀ ಆಡಳಿತ ಸ್ಥಾಪನೆ ಮಾಡಿದವರು ಇವರು. ಸಾಮ್ರಾಜ್ಯವಾದದ ವಿರುದ್ಧ ಕಾರ್ಮಿಕವರ್ಗದ ಕ್ರಾಂತಿಯ ಕಾಲಘಟ್ಟ ಮಾರ್ಕ್ಸ್‌ವಾದವಾಗಿದೆ ಲೆನಿನ್‌ವಾದ.

ಸೋವಿಯತ್ ಯೂನಿಯನ್‌ನಲ್ಲಿಯೂ ಕೆಲ ಪೂರ್ವ ಯುರೋಪ್ ರಾಷ್ಟ್ರಗಳಲ್ಲಿಯು 70 ವರ್ಷಗಳ ನಂತರ ಸಮಾಜವಾದಕ್ಕೆ ಹಿನ್ನಡೆಯಾಗಿದೆ. ಇದಕ್ಕೆ ಕಾರಣಗಳನ್ನು ಆಳವಾಗಿ ಅಧ್ಯಯನ ಮಾಡುವುದಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶ್ರಮಿಸಿದೆ. 14 ನೇ ಪಕ್ಷದ ಕಾಂಗ್ರೆಸ್‌ನಲ್ಲಿ ನಿರ್ಣಯಿಸಲಾಗಿದೆ.

ಮಾಜಿ ಸಮಾಜವಾದಿ ರಾಷ್ಟ್ರಗಳು ಸಂದರ್ಭಕ್ಕೆ ಸರಿಹೊಂದುವ ಆರ್ಥಿಕ ಪರಿಷ್ಕರಣಗಳನ್ನು ಮಾಡುವರಲ್ಲಿ ಸೋತಿವೆ. ಬೂರ್ಜ್ವಾ ಪ್ರಜಾಪ್ರಭುತ್ವಕ್ಕಿಂತ ಹತ್ತು ಪಟ್ಟು ಒಳ್ಳೆಯದಾದಂತಹ ಸಮಾಜವಾದಿ ಪ್ರಜಾಪ್ರಭುತ್ವದ ಬಗ್ಗೆ ವ್ಯಾಪಕ ಪ್ರಚಾರ ಮಾಡುವಲ್ಲಿ ಸೋಲಾಗಿದೆ. ರಾಜಕೀಯ ರಂಗದಲ್ಲಿ ಅಧಿಕಾರಶಾಹಿ ಬೆಳವಣಿಗೆಯಾಯಿತು. ವಿಶ್ವ ಮಟ್ಟದಲ್ಲಿ ನಿಲ್ಲುವಂತ ವರ್ಗ ಸಂಘಟನೆಯ ಬಲಾಬಲದ ಅಂದಾಜು ಮಾಡುವಲ್ಲಿ ತಪ್ಪು ಆಗಿದೆ. ಸಮಾಜವಾದಿ ತಿಳುವಳಿಕೆ ಬೆಳಸಲಿಕ್ಕೆ ಆಗಲಿಲ್ಲ. ನಂತರ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳನ್ನು ನಿಷೇಧಿಸಲಾಯಿತು. ವ್ಯವಸ್ಥಿತವಾದ ರೀತಿಯಲ್ಲಿ ಪಕ್ಷವನ್ನು ನಂತರ ವಿಸರ್ಜಿಸಲಾಯಿತು. ಈ ಸುವರ್ಣಾವಕಾಶವನ್ನು ಸಾಮ್ರಾಜ್ಯಶಾಹಿಗಳು ಸರಿಯಾಗಿ ಉಪಯೋಗಿಸಿಕೊಂಡವು. ಸಮಾಜವಾದಿಗಳನ್ನು ಬಡಿಯಲಿಕ್ಕೆ ಕಾದು ನಿಂತವರಿಗೆ ಇದು ದೊಡ್ಡ ವಿಜಯವಾಯಿತು.

ಆದರೆ ಈ ಹಿನ್ನಡೆ ಸೋಲು ಕೂಡಾ ಸಮಾಜವಾದದ ಲಾಭಗಳನ್ನು ಮರೆಮಾಚಲು ಸಾಧ್ಯವಾಗಿಲ್ಲ. ಜನರಿಗೆ ಸಾಮಾನ್ಯ ಪರಿಮಿತವಾದ ಮಟ್ಟದಲ್ಲಿ ಜೀವನಾವಶ್ಯಕ ಬೇಡಿಕೆಗಳು ಈಡೇರಿಸುವುದಕ್ಕೆ ಸಮಾಜವಾದ ಬುನಾದಿ ಹಾಕಿಕೊಟ್ಟಿತು. ಜನರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ಅಗತ್ಯವನ್ನು ದೊಡ್ಡ ಪ್ರಮಾಣದಲ್ಲಿ ಗುರುತಿಸಿದ್ದು ಈಗಲೂ ಸಮಾಜವಾದಿ ಪ್ರಭುತ್ವಗಳು ಮಾತ್ರವೇ. ನಿರುದ್ಯೋಗ, ಬಡತನ, ಹಸಿವು ಆ ರಾಷ್ಟ್ರಗಳನ್ನು ಕಾಡುತ್ತಿದೆ. ಅಲ್ಲಿ ಈಗ ಅರಾಜಕತೆ ಉಂಟಾಗಿದೆ. ಇದಕ್ಕೆ ಎದುರಾಗಿ ಹೋರಾಟವು ಹಂತ ಹಂತವಾಗಿ ಬೆಳೆದು ಬರುತ್ತಿದೆ.

ಬಂಡವಾಳಶಾಹಿ ರಾಷ್ಟ್ರಗಳಲ್ಲೂ ಇರುವ ಕಾರ್ಮಿಕ ವರ್ಗಕ್ಕೆ ಹಲವು ಬೇಡಿಕೆಗಳನ್ನು ಪಡೆಯಲು ಸಾಧ್ಯವಾದದ್ದು ಸಮಾಜವಾದದಿಂದಾಗಿಯೇ. ಹೊಸ ಸ್ವತಂತ್ರ ರಾಷ್ಟ್ರಗಳಿಗೆ, ಮೂರನೇ ಜಗತ್ತಿನ ಬಡ ರಾಷ್ಟ್ರಗಳಿಗೆ ಸೋವಿಯತ್ ಯೂನಿಯನ್ ಒಂದು ದೊಡ್ಡ ಬೆಂಬಲವಾಗಿತ್ತು. ಸಮಾಜವಾದಿ ಪ್ರಪಂಚಕ್ಕೆ ತಾಕತ್ತು ಕಡಿಮೆಯಾದ ನಂತರ ಸಾಮ್ರಾಜ್ಯಶಾಹಿಗಳು ಹಲವು ರಾಷ್ಟ್ರಗಳಲ್ಲಿ ಹಸ್ತಕ್ಷೇಪ ಪ್ರಾರಂಭಿಸಿದ್ದಾರೆ. ಭಾರತದಂತ ರಾಷ್ಟ್ರಗಳ ಮೇಲೆ ಕಠಿಣವಾದ ನಿಯಂತ್ರಣ ವಿಟ್ಟು ಆರ್ಥಿಕ ರಂಗದ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳಲು ಶ್ರಮಿಸುತ್ತಿವೆ. ಸಾಮ್ರಾಜ್ಯಶಾಹಿ ಶಕ್ತಿಗಳು ಅವರ ಬೆಂಬಲಿಗರು ಸೇರಿ ಹಾಕಿರುವ ಒತ್ತಡದಿಂದ ತೃತೀಯ ಜಗತ್ತಿನ ರಾಷ್ಟ್ರಗಳ ಅಭಿವೃದ್ಧಿ ಕುಂಠಿತವಾಗುತ್ತಿದೆ. ವಿಶ್ವಸಂಸ್ಥೆಯನ್ನು ಸಾಮ್ರಾಜ್ಯವಾದಿ ಏಕಪಕ್ಷೀಯವಾಗಿ ನಿಯಂತ್ರಿಸುತ್ತಿದ್ದಾರೆ. ಅಲಿಪ್ತ ಚಳುವಳಿಗೆ ಹಿಂದೆಟಾಗಿದೆ. ಆದರೂ ಬಡತನದಿಂದ ಬಳಲುತ್ತಿರುವ ಜನಕೋಟಿಯ ಹೋರಾಟವನ್ನು ತಡೆಯಲಿಕ್ಕೆ ಅಸಾಧ್ಯ. ಅದು ಈಗ ಒಂದು ಹೊಸ ಘಟ್ಟವನ್ನು ತಲುಪಿದೆ.

ಈ ಹಿನ್ನೆಲೆಯಲ್ಲಿ ಕಾರ್ಲ್‌ಮಾರ್ಕ್ಸ್‌ರ 175 ನೇ ಜನ್ಮದಿನದಂದು ಸಿಪಿಐ(ಎಂ) ಇವತ್ತಿನ ಪ್ರಪಂಚದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆಯ ಬಗ್ಗೆ ವಿಚಾರ ಸಂಕಿರಣ ಸಂಘಟಿಸಿದೆ.

ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಹುಟ್ಟಿ 70 ವರ್ಷಗಳಾಗಿವೆ. ಸ್ವಾತಂತ್ರ್ಯ ಸಮರದ ಹೋರಾಟದಲ್ಲಿ ಉಜ್ವಲವಾದ ಪಾತ್ರವನ್ನು ಈ ಚಳುವಳಿ ವಹಿಸಿದೆ. ಜನರ ಬೇಡಿಕೆಯ ಹೋರಾಟಗಳಲ್ಲಿ ಮುಂದಿನ ಸಾಲಿನಲ್ಲಿ ನಿಲ್ಲುವ ಪಕ್ಷವು, ಕಾಂಗ್ರೆಸ್‌ನ ಜನದ್ರೋಹಿ ಧೋರಣೆಗಳಿಗೆ ಎದುರಾಗಿ, ಛಿದ್ರಕಾರಿ, ಜಾತೀವಾದಿ ಶಕ್ತಿಗಳಿಗೆ ಎದುರಾಗಿ ಹೋರಾಟಕ್ಕೆ ನೇತೃತ್ವ ನೀಡುತ್ತಿದೆ.

ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಎಡ ಪಕ್ಷಗಳ ಸರಕಾರಗಳು ಬದಲಿ ಧೋರಣೆಗಳಿಂದ ಜನೋಪಯೋಗಿ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ. ಸಂವಿಧಾನದ ಚೌಕಟ್ಟಿನಲ್ಲೇ ಬಂಡವಾಳಶಾಹಿ ರಾಜಕೀಯ ಆರ್ಥಿಕ ವ್ಯವಸ್ಥೆಯ ಪರಿಮಿತಿ ಒಳಗೇ ನಿಂತು ಕೆಲಸ ಮಾಡಿಕೊಂಡು ಜನೋಪಯೋಗಿ ಕೆಲಸ ಮಾಡಿ ದೇಶದಲ್ಲಿ ವಿದೇಶಗಳಲ್ಲಿ ಜನಾಕರ್ಷಣೆ ಗಳಿಸಲು ಸಾಧ್ಯವಾದ ವಿಷಯವನ್ನು ಎತ್ತಿ ಹೇಳಬೇಕಾಗಿದೆ. ಎಡ ಪಕ್ಷಗಳ ಸರಕಾರಗಳು ಭೂ ಸುಧಾರಣೆ ಜಾರಿ ಮಾಡುವುದರಲ್ಲಿ ಮುಂದಿದ್ದು, ಪ್ರಜಾಪ್ರಭುತ್ವವನ್ನು ಕೆಳಮಟ್ಟದವರೆಗೆ ಒಯ್ಯುವಲ್ಲಿ, ವ್ಯವಸಾಯ ಅಭಿವೃದ್ಧಿ ವಿಷಯದಲ್ಲಿ ದೊಡ್ಡ ರೀತಿಯಲ್ಲಿ ಅಭಿವೃದ್ಧಿ ಮಾಡುವುದರಲ್ಲಿ ದೇಶದ ಪ್ರಜಾಪ್ರಭುತ್ವದ ಕಾವಲು ಠಾಣೆಯಾಗಿ ಸರಕಾರ ಕೆಲಸ ಮಾಡುತ್ತಿದೆ.

ಎಲ್ಲವೂ ಸರಿಯಾಗಿದೆ ಎಂದು ಹೇಳುವ ರೀತಿಯಲ್ಲಿ ಎಡ ಪಕ್ಷಗಳ ಆಡಳಿತ ನಡೆದಿದೆ ಎನ್ನುವುದು ಅರ್ಥವಲ್ಲ - ಆದರೆ ಪುನಃ ಪುನಃ ಜನರು ಎಡರಂಗವನ್ನು ಅಧಿಕಾರಕ್ಕೆ ತರುತ್ತಿದ್ದಾರೆ. ಇಪ್ಪು ವರ್ಷ ನಿರಂತರವಾಗಿ ಆಡಳಿತ ಮಾಡುವುದಕ್ಕೆ ಒಂದೇ ಕಾರಣ ಪಶ್ಚಿಮ ಬಂಗಾಳದ ಎಡರಂಗ ಜನರ ಜೊತೆಗಿರುವ ಸಂಬಂಧ ಮತ್ತು ಸಂಪರ್ಕ.

ಮುಂದೆ ಬರುವಂತ ದಿನಗಳು ಹೂವಿನ ಹಾದಿಯಲ್ಲ. ಆದರೆ ಆ ರೀತಿಯಲ್ಲಿ ಕಾರ್ಮಿಕ ವರ್ಗದ ಹೋರಾಟ ಮಾಡಿ ಮುಂದುವರೆಯುತ್ತದೆ. ಚಾರಿತ್ರಿಕ ಕರ್ತವ್ಯವನ್ನು ನಾವು ಪೂರ್ತಿ ಮಾಡುತ್ತೇವೆ. ಮಾರ್ಕ್ಸ್‌ವಾದ ಒಂದು ಸಿದ್ಧಾಂತ ಮಾತ್ರ ಅಲ್ಲ, ಕಾರ್ಯಾಚರಣೆಗೂ ಅದು ಮಾರ್ಗದರ್ಶನ ನೀಡುತ್ತದೆ. ಈ ಸಿದ್ಧಾಂತದಲ್ಲಿ ಗಟ್ಟಿಯಾಗಿ ನಿಂತರೆ ಹೋರಾಟ ಮುಂದುವರಿಸಿದರೆ ಮಾತ್ರ ಸಾಮಾಜಿಕ ಬದಲಾವಣೆಯ ದಾರಿಯಲ್ಲಿ ದೃಢವಾದಿ ಮುಂದುವರಿಯಲು ಸಾಧ್ಯ.

- ಇ.ಕೆ.ಎಸ್.ರಾಜನ್

- ಶಾಂತಾರಾಮ್ ಎಸ್.ನಾಯಕ್

ಅಮೇರಿಕ, ಜಪಾನ್

ದಲ್ಲಿ ಐಬಿಎಮ್ (ಅತಿ ರ್ ಕಂಪನಿ) ಜನರಲ್ ್ಯಾದಿ ದೈತ್ಯ ಕಂಪನಿಗಳು ಗಳುಗಳಲ್ಲಿ ಭಾರೀ ನಷ್ಟ ಕಟ್ಟಿನಲ್ಲಿ ಈ ಕಂಪನಿಗಳು ಹೊರದಬ್ಬುವ ಮೂಲಕ ಂಭಿಸಿವೆ. ಜಪಾನಿ ಸರ ತಾಳದೆ ಅಮೇರಿಕನ್ ುತ್ತಿರುವುದರಿಂದ ಅಧ್ಯಕ್ಷ ನ ಕೈ ತಿರುಚಿ ರಷ್ಯ ಮೇಲೆ ಲು ಪ್ರಯತ್ನಿಸುತ್ತಿದ್ದಾರೆ. ನ್ನ ದೇಶದ ಕೈಗಾರಿಕೆಯ ಯ ಜವಾಬ್ದಾರಿಯಿಂದ ಲು ಪ್ರಯತ್ನಿಸಿದೆ. ಆದರೆ ್‌ಗಳಲ್ಲಿ ಸರ್ಕಾರಿ ಕೈಗಾ ರ ಹೇಗೆ ಧನಸಹಾಯ ತರುವ ಮೂಲಕ ಪುನ ುದು ಎಂದು ಯೋಚಿಸ

ರ್ಕಾರ ರಿಕಾರ್ ಕೈಗಾರಿಕೆ ಂಜರಿತದಿಂದಾಗಿ ಅಮೇ ಚ್ಚಿಸಲು, ಅಮೇ ಕಾರು ಕಂಪನಿಗಳ ಗ ಪ್ರಯತ್ನಿಸುತ್ತಿದ್ದಾರೆ.

ಪರಿಸರ ಮಾಲಿನ್ಯರಹಿತ, ತಾಂತ್ರಿಕವಾಗಿ ಆಧುನಿಕ ಕಾರುಗಳ ವಿನ್ಯಾಸಕ್ಕೆ ಜನರಲ್ ಮೋಟಾರ್ಸ್, ಫೋರ್ಡ್ ಹಾಗೂ ಕ್ರೈಸ್ಲರ್‌ಗಳಿಗೆ ಒಂದು ಶತಕೋಟಿ ಡಾಲರುಗಳನ್ನು ಸರ್ಕಾರದ ವತಿಯಿಂದ ಕೊಡಲಾಗುತ್ತಿದೆ. ರಾಷ್ಟ್ರೀಯ ಪ್ರಯೋಗಶಾಲೆಗಳು, ರಾಷ್ಟ್ರೀಯ ವಿಜ್ಞಾನ ಫೌಂಡೇಶನ್ ಮುಂತಾದ ವಿಜ್ಞಾನ ಶೋಧನಾ ಬಾಬ್ತುನಿಂದ ಈ ಹಣ ಕೊಡಲಾಗುತ್ತಿದೆ.

ಅಮೇರಿಕ ಸರ್ಕಾರದ ಈ ಕ್ರಮ ನಿರೀಕ್ಷಿಸಿದ ಜಪಾನ್ ಸುಮ್ಮನೆ ಕೂತಿಲ್ಲ. ಜಪಾನ್ ಕಾರು ಕೈಗಾರಿಕೆ ಸಹ ಆ ಕೈಗಾರಿಕೆಯನ್ನು ಸಂಕಷ್ಟದಲ್ಲಿರುವ ಕೈಗಾರಿಕೆ ಎಂದು ಘೋಷಿಸಿ ಸಬ್ಸಿಡಿ ಕೊಡಬೇಕು. ಕಾರು ಕೈಗಾರಿಕೆಯ ಉದ್ಯೋಗಗಳನ್ನು ರಕ್ಷಿಸಲು ಅಥವಾ ಕಾರ್ಮಿಕರನ್ನು ಪುನಃ ತರಬೇತಿ ನೀಡಲು ಸಬ್ಸಿಡಿ ಅಗತ್ಯ ಎಂದಿದೆ. 119 ಹಿಂಜರಿತ ಅನುಭವಿಸುತ್ತಿರುವ ಇಂತಹ ಕೈಗಾರಿಕೆಗಳನ್ನು ಸರಕಾರ ಸಂಕಷ್ಟದಲ್ಲಿರುವ ಕೈಗಾರಿಕೆ ಎಂದು ಈಗಾಗಲೇ ಘೋಷಿಸಿದೆ. 19 ಕೈಗಾರಿಕೆಗಳ ಪರಿಶೀಲನೆಯಲ್ಲಿವೆ. ಇಂತಹ ಕೈಗಾರಿಕೆಗಳಿಗೆ ಸರ್ಕಾರ ಸಬ್ಸಿಡಿ ಕೊಡಲಾರಂಭಿಸಿದೆ.

ಮುಕ್ತ ವ್ಯಾಪಾರದ ನಾಡಿನಲ್ಲಿ

ಅಧ್ಯಕ್ಷ ಪ್ರೇಮದಾಸರ ಹತ್ಯೆ ಶ್ರೀಲಂಕಾ ಆಳುವ ವರ್ಗ ರಾಜಕೀಯದ ದುರಂತ

ಸ್ವಾಯತತ್ತೆಯ ಆಧಾರದ ಪರಿಹಾರವಿಲ್ಲದೆ ಶ್ರೀಲಂಕಾದ ಈ ದುಗುಡು-ದುಮ್ಮಾನಗಳಿಗೆ ಪರಿಹಾರವಿಲ್ಲ ಎಂದು ಮತ್ತೆ ಎಚ್ಚರಿಸಿದೆ 'ಪೀಪಲ್ಸ್ ಡೆಮಾಕ್ರಸಿ' (ಪಿ.ಡಿ) ಸಂಪಾದಕೀಯ.

ಶ್ರೀಲಂಕಾದ ಅಧ್ಯಕ್ಷ ರಣಸಿಂಘೆ ಪ್ರೇಮದಾಸರ ಹತ್ಯೆ ಆ ದೇಶದಲ್ಲಿ ಒಂದು ರಾಜಕೀಯ ನಿರ್ವಾತವನ್ನು ಸೃಷ್ಟಿಸಿದೆ. ಜನಾಂಗ ಸಂಘರ್ಷದಿಂದ ತತ್ತರಿಸಿರುವ ಶ್ರೀಲಂಕಾದ ಆಳುವ ವರ್ಗ ಆಗಲೇ ಬಿಕ್ಕಟ್ಟಿಗೊಳಗಾಗಿತ್ತು. ಇತೀಚಿನ ಭಯೋತ್ಪಾದಕ ಹಿಂಸಾಚಾರ ವಿಷವೃತ್ತ ಅದನ್ನು ಇನ್ನಷ್ಟು ಆಳಗೊಳಿಸಿದೆ. ಪ್ರೇಮದಾಸ್‌ರವರ ಹತ್ಯೆಯ ಒಂದು ವಾರದ ಮೊದಲಷ್ಟೆ ಶ್ರೀಲಂಕಾದ ಆಳುವ ಪಕ್ಷ ಯು.ಎನ್.ಪಿ. ಯಿಂದ ಇಬ್ಬಾಗಗೊಂಡು ಡೆಮಾಕ್ರಾಟಿಕ್ ಯುನೈಟೆಡ್ ನ್ಯಾಶನಲ್ ಪಾರ್ಟಿ ಆರಂಭಿಸಿದ ಆಂತರಿಕ ವ್ಯವಹಾರಗಳ ಮಂತ್ರಿ ಲಲಿತ್ ಅತುಲತ್‌ಯವರ ಹತ್ಯೆಯಾಯಿತು. ಇವರು ಪ್ರೇಮದಾಸ್‌ರವರ ಖಡಾಖಂಡಿತ ವಿರೋಧಿ ಅಲ್ಪ ಅಂತರದಲ್ಲೇ ಈ ಇಬ್ಬರು ಮುಖಂಡರ ಹತ್ಯೆ ಶ್ರೀಲಂಕಾದ ಆಳುವ ವಲಯಗಳನ್ನು ಸುತ್ತುವರಿದಿರುವ ಬಿಕ್ಕಟ್ಟನ್ನು ಎತ್ತಿ ತೋರಿದೆ. ಈ ದೇಶವನ್ನು ಬಹಳವಾಗಿ ಬಾಧಿಸಿರುವ ಜನಗಳಿಗೆ ಹೇಳತೀರದ ಸಂಕಷ್ಟ ಹೇರಿದ. ಸಿಂಹಳೀ ತಮಿಳು ಸಂಘರ್ಷದ ದುರಂತಮಯ ಫಲವಿದು.

ಅಧ್ಯಕ್ಷ ಪ್ರೇಮದಾಸ್ ಅಪೂರ್ವ ಸಾಮಾರ್ಥ್ಯಗಳ ವ್ಯಕ್ತಿ. ತನ್ನ ರಾಜಕೀಯ ನಿಪುಣತೆ, ಕಸರತ್ತುಗಳಿಂದ ಅತ್ಯಂತ ಕೆಳಮಟ್ಟದಿಂದ ಶ್ರೀಲಂಕಾದ ಅತ್ಯುನ್ನತ ಪದವಿಗೇರಿದ ವ್ಯಕ್ತಿ. ಆದರೆ ಶ್ರೀಲಂಕಾದ ದುರದೃಷ್ಟವೆಂದರೆ, ಅವರ ಅಪೂರ್ವ ಸಾಮರ್ಥ್ಯವನ್ನು ತಮಿಳು ಪ್ರಶ್ನೆಯನ್ನು ಪರಿಹರಿಸುವ ಮುತ್ಸದ್ದಿತನ ತೋರಲು ಬಳಸಲಿಲ್ಲ. ದೇಶದ ಪೂರ್ವ ಮತ್ತು ಉತ್ತರದ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯುತ್ತತೆ ಹಾಗೂ ಅಧಿಕಾರಗಳ ವಿಕೇಂದ್ರೀಕರಣ ಮಾಡುವ ಬದಲು ಅವನ್ನು ತಪ್ಪಿಸುವ ಕಸರತ್ತು ನಡೆಯಿತು. ಶ್ರೀಲಂಕಾದ ಸಮಗ್ರತೆಗೆ ಬೆದರಿಕೆ ಹಾಕಿರುವ ಹಿಂಸಾಚಾರ ಪೂರ್ಣ ಸಂಘರ್ಷವನ್ನೂ ಪರಿಹರಿಸಲು ಜಂಟಿ ಸಂಸದೀಯ ಸಮಿತಿ ಒಂದು ನಂಬಲರ್ಹ ಸ್ವಾಯುತತ್ತೆಯ ಪ್ರಸ್ತಾಪ ಮಂಡಿಸುವಂತೆ ಮಾಡಲು ಅವರು ಮುತುವರ್ಜಿ ವಹಿಸಲಿಲ್ಲ. ಎಲ್.ಟಿ.ಟಿ.ಇ. ಮೇಲೆ ಅವರು ಆರಂಭಿಸಿದ ತೀವ್ರ ಮಿಲಿಟರಿ ಕಾರ್ಯಾಚರಣೆ ಮೊದಲಿಗೆ ಯಶಸ್ವಿಯಾದರೂ ನಂತರ ಗಕ್ಕನೆ ನಿಂತುಹೋಯಿತು.

ರಾಜಕೀಯ ರಂಗದಲ್ಲಿ ಪ್ರೇಮದಾಸ ಆಳುವ ಪಕ್ಷದ ಮೇಲೆ ಸಂಪೂರ್ಣ ಪ್ರಾಬಲ್ಯ ಹೊಂದಿದ್ದರು. ಅವರ ಸರ್ವಾಧಿಕಾರಿ ಪ್ರವೃತ್ತಿ, ಭಿನ್ನಾಭಿಪ್ರಾಯವನ್ನು ಸಹಿಸದ ಸ್ವಭಾವದಿಂದಾಗಿ ಅಧ್ಯಕ್ಷರಾಗಿ ಅವರ ಕಾಲವಧಿ ವಿವಾದಮಯವಾಗಿತ್ತು. ಆಳುವ ಪಕ್ಷದಲ್ಲಿ ಒಡಕುಂಟಾಗಿ ಲಲಿತ್ ಅತುಲತ್‌ಮುದಲಿ ಹಾಗೂ ಕಾಮಿನಿ ಡಿತ್ಸನಾಯ್ಕೆಯವರ ನೇತೃತ್ವದ ಗುಂಪು ಹುಟ್ಟಿಕೊಂಡದ್ದು ಅವರಿಗೆ ಇನ್ನಷ್ಟು ಹೊಡೆತ ನೀಡಿತ್ತು. ವಿರೋಧಿ ಪಕ್ಷಗಳನ್ನು ದಮನ ಮಾಡುವ ಅವರ ನಿರಂತರ ತಂತ್ರಗಳಿಂದಾಗಿ ಅವುಗಳಲ್ಲೂ ಕಹಿಭಾವನೆ ಉಂಟಾಗಿತ್ತು. ಇಂತಹ ವಾತಾವರಣ ಸಿಂಹಳೀ ಬಹುಸಂಖ್ಯಾತ ಸಂಕುಚಿತವಾದಿಗಳು ತಮಿಳರ ಆಕಾಂಕ್ಷೆಗಳಿಗೆ ಯಾವುದೇ ರಿಯಾಯ್ತಿ ತೋರಬಾರದು ಎಂಬ ಒತ್ತಡ ಹೇರಲು ಅತ್ಯಂತ ಅನುಕೂಲಕರವಾಯಿತು. ಪರಿಣಾಮವಾಗಿ ಈ ಗಂಭೀರ ಜನಾಂಗೀಯ ಸಮಸ್ಯೆ ಪರಿಹಾರ ಕಾಣದೆ ಹಾಗೆಯೇ ಉಳಿಯಿತು.

ದಕ್ಷಿಣಾ ಏಶ್ಯಾದ ಬೇರೆಲ್ಲಾ ದೇಶಗಳಂತೆ ಇಲ್ಲಿಯೂ ಜನಾಂಗೀಯ ಅಥವಾ ಧಾರ್ಮಿಕ ಅಲ್ಪಸಂಖ್ಯಾಕರಿಗೆ ಅವರ ಹಕ್ಕುಗಳ ಭರವಸೆ ನೀಡುವಂತಾಗ ಬೇಕಾದಂತೆ ಪ್ರಜಾಪ್ರಭುತ್ವ ಪ್ರಕ್ರಿಯೆ ಪ್ರಜಾಪ್ರಭುತ್ವ ವ್ಯವಸ್ತೆ ಬಲಗೊಳ್ಳಬೇಕಾದರೆ ಒಕ್ಕೂಟ ವ್ಯವಸ್ಥೆ ಹಾಗೂ ಅಧಿಕಾರಗಳ ವಿಕೇಂದ್ರೀಕರಣ ಅಗತ್ಯವಾಗಿತ್ತು. ಆದರೆ ಪ್ರೇಮದಾಸ್‌ರವರ ಆಳ್ವಿಕೆ ಶ್ರೀಲಂಕಾದ ಸಿಂಹಳೀ ಆಳುವ ವಲಯಗಳ ಪರಿಸ್ಥಿತಿಯಿಂದಾಗಿ ಒಂದೆಡೆ ಪ್ರಭಾವಶಾಲೀ ಅಗ್ಗದ ಜನಪ್ರಿಯತೆ ಪ್ರಯತ್ನ ಮತ್ತೊಂದೆಡೆ ವೈಯುಕ್ತಿಕ ಅಧಿಕಾರದ ಕೇಂದ್ರೀಕರಣ ಪ್ರಯತ್ನ ನಡೆಸಿತು.

ಹತ್ಯೆ ನಡೆದ ರೀತಿಯನ್ನು ನೋಡಿದರೆ ಎಲ್‌ಟಿಟಿಇ ಮತ್ತೊಮ್ಮೆ ಯಶಸ್ಸುಗಳಿಸಿತು ಎಂಬುದರಲ್ಲಿ ಬಹಳ ಸಂಶಯವೇನೂ ಉಳಿಯುವುದಿಲ್ಲ. ರಾಜೀವ್‌ಗಾಂಧಿಯವರ ಹತ್ಯೆಗೂ ಇದಕ್ಕೂ ಇರುವ ಸಾಮ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಶ್ರೀಲಂಕಾ ಒಂದು ಐಕ್ಯ ದೇಶವಾಗಿ ಉಳಿಯಬೇಕಾದರೆ ತಮಿಳು ಅಲ್ಪಸಂಖ್ಯಾಕರಿಗೂ ನ್ಯಾಯಬದ್ಧ ಹಕ್ಕುಗಳನ್ನು ಮಾನ್ಯ ಮಾಡಬೇಕು. ಇದು ಸ್ವಾಯತ್ತತೆಯಿಂದ ಮಾತ್ರ ಸಾಧ್ಯ. ಶ್ರೀಲಂಕಾ ಸಮಾಜದ ಈ ಕೇಂದ್ರ ಪ್ರಶ್ನೆಯನ್ನು ಆ ದೇಶದ ಎಲ್ಲಾ ರಾಜಕೀಯ ಪಕ್ಷಗಳು ಸರಿಯಾಗಿ ಅರ್ಥಮಾಡಿಕೊಂಡು ಆ ದೇಶದ ಎಲ್ಲಾ ಕೋಮುಗಳು, ವಿಭಾಗಗಳ ಜನರ ಒಳಿತು ಸಾಧಿಸುತ್ತಾರೆ ಎಂದು ನಾವು ಆಶಿಸಬಹುದಷ್ಟೆ. ಮುಂಬರಲಿರುವ ಚುನಾವಣೆಗಳು ತಮಿಳು ಪ್ರಾಬಲ್ಯದ ಪ್ರದೇಶಗಳಲ್ಲಿ ನಡೆಯುತ್ತಿಲ್ಲ. ಪ್ರಾದೇಶಿಕ ಸ್ವಾಯತ್ತತೆಯ ಚೌಕಟ್ಟಿನಲ್ಲಿ ತಮಿಳರ ಸ್ವಂತಿಕೆಯ ಆಕಾಂಕ್ಷೆಗಳನ್ನು ಈಡೇರಿಸಬಲ್ಲ ಪರಿಹಾರ ಮಾತ್ರವೇ ಎಲ್.ಟಿ.ಟಿ.ಇ.ಯ ದುಷ್ಟ ಚಟುವಟಿಕೆಗಳನ್ನು ತಡೆಯಲು ನೆರವಾಗಬಹುದು. ಅದುವರೆಗೆ ತಮಿಳರ ಉದ್ಧಾರಕ ಎನ್ನುವ ಎಲ್.ಟಿ.ಟಿ.ಇ ತಮಿಳು ಜನತೆಯ ಹಿತಾಸಕ್ತಿಗಳಿಗೆ ಮಾರಕವಾದ ಚಟುವಟಿಕೆಗಳನ್ನು ಮುಂದುವರಿಸುತ್ತಾ ಸಿಂಹಳೀ ಸಂಕುಚಿತವಾದದ ಬೆಂಕಿಗೆ ತುಪ್ಪ ಸುರಿಯುತ್ತಲೇ ಇರುತ್ತದೆ.



ಒರಿಸ್ಸಾ ಮುಖ್ಯಮಂತ್ರಿಯ ಮೇಲೆ ನೌಕರರ ಹಲ್ಲೆ

ತಮ್ಮ ಹಲವಾರು ಸೌಲಭ್ಯಗಳನ್ನು ಸರಕಾರ ರದ್ದುಪಡಿಸಿದ್ದನ್ನು ಪ್ರತಿಭಟಿಸಿ ಮುಷ್ಕರ ನಡೆಸುತ್ತಿದ್ದ ಸರಕಾರಿ ನೌಕರರು ಮುಖ್ಯಮಂತ್ರಿಯವರ ಮೇಲೆ ಹಲ್ಲೆ ನಡೆಸಿದ ಪ್ರಕರಣ ಒರಿಸ್ಸಾದಿಂದ ವರದಿಯಾಗಿದೆ.

ಎಲ್.ಟಿ.ಸಿ. ರಜೆ ನಗದೀಕರಣ ಮೊದಲಾದ ಸೌಲಭ್ಯಗಳನ್ನು ರಾಜ್ಯ ಸರಕಾರ ಆರ್ಥಿಕ ಮಿತವ್ಯಯ ನೀತಿಯ ಅಂಗವಾಗಿ ರದ್ದು ಪಡಿಸಿತ್ತು. ಇದನ್ನು ಪ್ರತಿಭಟಿಸಿ ಮೇ ಆರರಂದು ರಾಜಧಾನಿ ಭುವನೇಶ್ವರದಲ್ಲಿ ಸಚಿವಾಲಯದಲ್ಲಿ ಮುಖ್ಯಮಂತ್ರಿ ಬಿಜುಪಟ್ನಾಯಕ್, ಮುಖ್ಯ ಕಾರ್ಯದರ್ಶಿ ಮೊದಲಾದವರ ಮೇಲೆ ಕೆಲವು ಕೋಪೋದ್ರಿಕ್ತ ನೌಕರರು ಹಲ್ಲೆ ನಡೆಸಿದರು. ಕಚೇರಿಗಳ ಪೀಠೋಪಕರಣಗಳನ್ನು ಧ್ವಂಸಮಾಡಿದರು.

ಈ ಘಟನೆ ಬಗ್ಗೆ ತನಿಖೆ ನಡೆಸುವಂತೆ ಸ್ವತಃ ಪ್ರಧಾನಿಯವರೇ ಒರಿಸ್ಸಾ ಮುಖ್ಯಮಂತ್ರಿಗೆ ಸೂಚಿಸಿದ್ದಾರೆ. ಹಲಮಂದಿ ನೌಕರರನ್ನು ಬಂಧಿಸಲಾಗಿದೆ. ಸೇವೆಯಿಂದ ಅಮಾನತು ಮಾಡಲಾಗಿದೆ.

ಪಂಚಾಯತ್ ಚುನಾವಣೆ: ಪಕ್ಷದ ಅಭ್ಯರ್ಥಿಗಳ ಹತ್ಯೆ

ಪಶ್ಚಿಮ ಬಂಗಾಳದಲ್ಲಿ ಈ ತಿಂಗಳ ಕೊನೆಯಲ್ಲಿ ಮಹತ್ವದ ಪಂಚಾಯತ್ ಚುನಾವಣೆಗಳು ನಡೆಯಲಿವೆ. ಎಡಶಕ್ತಿಗಳು ಅತ್ಯಂತ ಬಲಿಷ್ಠವಾಗಿರುವ ರಾಜ್ಯವೊಂದರಲ್ಲಿ ನಡೆಯಲಿರುವ ಅತ್ಯಂತ ಕೆಳ ಹಂತದ ಈ ಚುನಾವಣೆಗೆ ರಾಷ್ಟ್ರಮಟ್ಟದಲ್ಲಿ ರಾಜಕೀಯ ಮಹತ್ವ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಸಿ.ಪಿ.ಐ(ಎಂ) ನೇತೃತ್ವದಲ್ಲಿ ಎಡರಂಗ ಜನಪ್ರಿಯತೆಯನ್ನು ಸಾಬೀತು ಪಡಿಸಲು ಇದು ಇನ್ನೊಂದು ಪ್ರಮುಖ ಅವಕಾಶವಾಗಲಿದೆ. ಈ ಅಂಶ ಹಲವು ವಿಭಾಗಗಳಲ್ಲಿ ಪ್ರಮುಖವಾಗಿ ಕಾಂಗ್ರೆಸ್(ಐ)ನಲ್ಲಿ ಆತಂಕ ಹುಟ್ಟಿಸಿದೆ. ಕಾಂಗ್ರೆ ಅಲ್ಲದೆ ಬಿಜೆಪಿ, ಜಾರ್ಖಂಡ್ ಪಕ್ಷ ಮೊದಲಾದವುಗಳೂ ರಂಗದ ಪ್ರಮುಖ ಪಕ್ಷವಾದ ಸಿಪಿಐ(ಎಂ) ವಿರುದ್ಧ ಕತ್ತಿ ಮಸೆಯುತ್ತಿವೆ.

ಪಂಚಾಯತ್ ಚುನಾವಣೆಗಳಲ್ಲಿ ಪಾಲ್ಗೊಳ್ಳುತ್ತಿರುವ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆಗಳೂ ಆರಂಭವಾಗಿವೆ. ಬಿಹಾರ ಗಡಿಯಲ್ಲಿರುವ ಸಿಲ್ಡಾ ಗ್ರಾಮದ ಐವರು ಕಾರ್ಯಕರ್ತರ ಹತ್ಯೆ ನಡೆದಿದೆ. ಪಂಚಾಯತ್ ಚುನಾವಣೆಗಳಲ್ಲಿ ಅಭ್ಯರ್ಥಿಗಳಾಗಿದ್ದ ಈ ಐವರನ್ನು ಮೇ ಎಂಟರಂದು ಗ್ರಾಮದಿಂದ ಅಪಹರಿಸಲಾಗಿತ್ತು. ಅನಂತರ ಭಾನುವಾರ ಬಂಕುರ ಜಿಲ್ಲೆಯಲ್ಲಿ ಅರಣ್ಯದಲ್ಲಿ ಅವರ ಶವಗಳು ಪತ್ತೆಯಾದವು.

ಬಿಹಾರದ ಪಂಚಾಯತ ರಾಜ್ ಖಾತೆ ಸಚಿವ ಸೂರ್ಯಕಾಂತ ಮಿಶ್ರಾ ಮಘಟನೆ ಸ್ಥಳಕ್ಕೆ ಭೇಟಿ ನೀಡಿದ್ದರು.

ಪ್ರತಿಭಟನೆ-ಬಂದ್

. ಈ ದುಷ್ಕೃತ್ಯವನ್ನು ಜಾರ್ಖಂಡ್ ಪಕ್ಷದವರು ಮಾಡಿದ್ದಾರೆ ಎಂದು ಹೇಳಲಾಗಿದೆ. ಹೇಯವಾದ ಈ ಘಟನೆಗೆ ಪ್ರತಿಭಟನೆಯನ್ನು ದಾಖಲಿಸಲು ಸಿಪಿಐ(ಎಂ) ಕರೆ ಮೇರೆ ಮೇ 10 ರಂದು ಝಾರ್‌ಗಾಂವ್ ಉಪ ವಿಭಾಗದಲ್ಲಿ ಬಂದ್ ನಡೆಯಿತು.

ಬಿಯಾಂತ್ ಸಿಂಗ್‌ರ ಸರ್ವಾಧಿಕಾರಿ ಆಡಳಿತ

ಬಿಯಾಂತ್‌ಸಿಂಗ್ ನೇತೃತ್ವದ ಸರಕಾರ ಸರ್ವಾಧಿಕಾರಿ ರೀತಿಯಲ್ಲಿ ಆಡಳಿತ ನಡೆಸುತ್ತಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಪಂಜಾಬ್ ರಾಜ್ಯ ಸಮಿತಿ ತೀವ್ರ ಕಳವಳ ವ್ಯಕ್ತಪಡಿಸಿದೆ. ಎಪ್ರಿಲ್ 28-29 ರಂದು ಗುರ್ಚರಣ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಮಿತಿ ಸಭೆ ಈ ಸಂಬಂಧದಲ್ಲಿ ಗೊತ್ತುವಳಿಯೊಂದನ್ನು ಅಂಗೀಕರಿಸಿದೆ.

ಬಿಯಾಂತ್‌ಸಿಂಗ್ ಸರಕಾರಕ್ಕೆ ಅಧಿಕಾರದ ಅಮಲೇರಿದೆ. ನ್ಯಾಯಬದ್ಧವಾದ ಪ್ರಜಾಸತ್ತಾತ್ಮಕ ಭಿನ್ನಾಭಿಪ್ರಾಯಗಳನ್ನು ಕೂಡ ಗಲಭೆಗಳಿಗೆ ಆಸ್ಪದಕೊಡುವ ಕೃತ್ಯಗಳೆಂದು ಪರಿಗಣಿಸುತ್ತಿದೆ. ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಗತ್ ರಾಮ್ ಪಸ್ಲಾ ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜನರ ಮೇಲೆ ಹೊರೆ

ಬಸ್ ಪ್ರಯಾಣದರ, ವಿದ್ಯುಚ್ಛಕ್ತಿ ದರ, ನೀರು ಮತ್ತು ಒಳಚರಂಡಿ ಸೇವೆ ದರ ಹೀಗೆ ಪ್ರತಿಯೊಂದನ್ನು ಏರಿಸುವ ಮೂಲಕ ಜನರ ಮೇಲೆ ಒಂದರ ಹಿಂದೆ ಇನ್ನೊಂದು ಹೊರೆಯನ್ನು ಪಂಜಾಬ್ ಸರಕಾರ ಹೊರಿಸುತ್ತಿದೆ. ಸರಕಾರ ಬಳಿ ಹಣ ಕೊರತೆಯಿರುವುದರಿಂದ ದರಗಳನ್ನು ಏರಿಸಲಾಗುತ್ತಿದೆ ಎಂದು ಅದು ಸಮಜಾಯಿಷಿ ನೀಡುತ್ತಿದೆ. ಆದರೆ ಅದೇ ಸರಕಾರ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುವ ರೀತಿಯಲ್ಲಿ ವಿಧಾನ ಪರಿಷತ್ತನ್ನು ಪುನರುಜ್ಜೀವನಗೊಳಿಸಲು ಕ್ರಮ ಕೈಗೊಂಡಿದೆ. ಆಳುವ ಪಕ್ಷದ ಚೇಲಾಗಳನ್ನು ಮಂಡಳಿಗಳು ಮತ್ತು ನಿಗಮಗಳ ಅಧ್ಯಕ್ಷರನ್ನಾಗಿ ನೇಮಿಸುವ ಕಾರ್ಯದಲ್ಲಿ ನಿರತವಾಗಿದೆ.

ಕೆಲವು ಸಚಿವರಂತೂ ಪಾಳೇಗಾರರಂತೆ ವರ್ತಿಸುತ್ತಿದ್ದಾರೆ. ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ಭ್ರಷ್ಟಚಾರದಲ್ಲಿ ತೊಡಗಿದ್ದಾರೆ. ಇಂಥ ಬೇಜವಾಬ್ದಾರಿ, ಸರ್ವಾಧಿಕಾರಿ ಧೋರಣೆಯಿಂದ ವ್ಯಾಪಕ ಅತೃಪ್ತಿ ಮೂಡಿದೆ.

ಬ್ಲಾಕ್ ಸಮಿತಿಗಳಲ್ಲಿ ಜಯಗಳಿಸಲು ಅನುಕೂಲವಾಗಿರುವಂತೆ ಬ್ಲಾಕ್ ಸಮಿತಿ ಚುನಾವಣೆಗಳಿಗಾಗಿ ವಲಯಗಳನ್ನು ರಚಿಸುವ ರಾಜ್ಯ ಸರಕಾರ ಕ್ರಮವನ್ನು ಸಮಿತಿ ತೀವ್ರವಾಗಿ ಖಂಡಿಸಿದೆ. ಬ್ಲಾಕ್ ಸಮಿತಿಗಳಲ್ಲಿ ಶಾಸಕರಿಗೆ ಮತದಾನ ಹಕ್ಕನ್ನು ಕೊಡುವ ಕ್ರಮವನ್ನು ವಿರೋಧಿಸಿದೆ. ಈಗಿನ ನಿಯಮಾವಳಿಗಳಂತೆಯೇ ಯಾವುದೇ ವಿಘಟನೆಯಿಲ್ಲದೆ ಬ್ಲಾಕ್ ಸಮಿತಿಗಳಿಗೆ ಚುನಾವಣೆಗಳನ್ನು ನಡೆಸಬೇಕೆಂದು ಪಕ್ಷ ಆಗ್ರಹಪಡಿಸಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಪಂಜಾಬ್ ಸಮಸ್ಯೆಯ ರಾಜಕೀಯ ಆಯಾಮವನ್ನು ಕಡೆಗಣಿಸಿರುವುದಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ. ಆಳುವ ಪಕ್ಷದ ಈ ಸಮಯ ಸಾಧಕ ನೀತಿಯಿಂದ ಭಾರೀ ಅನಾಹುತ ಸಂಭವಿಸಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಮೊಹಾಲಿಯಲ್ಲಿ ಮತ್ತು ಭಟಿಂಡಾ ಜಿಲ್ಲೆಯಲ್ಲಿ ಖಲಿಸ್ತಾನಿ ಭಯೋತ್ಪಾದಕರು ಇತ್ತೀಚೆಗಿನ ದುಷ್ಕೃತ್ಯಗಳು ರಾಜ್ಯದಲ್ಲಿ ಪರಿಸ್ಥಿತಿ ಪೂರ್ಣವಾಗಿ ಸುಸ್ಥಿತಿಗೆ ಬಂದಿಲ್ಲ ಎನ್ನುವುದನ್ನು ಸೂಚಿಸುತ್ತವೆ.

ಅಕಾಲಿ ನಿಲುವಿಗೆ ಖೇದ

ಅಕಾಲಿಗಳು ಹಿಂದಿನ ಅನುಭವಗಳಿಂದ ಪಾಠ ಕಲಿಯದಿರುವ ಬಗ್ಗೆ ಪಕ್ಷ ವಿಷಾದ ವ್ಯಕ್ತಪಡಿಸಿದೆ. ಕೋಮುವಾದದ ಆಧಾರದಲ್ಲೇ ಅಕಾಲಿಗಳು ನಿರ್ಧಾರ ತಳೆಯುತ್ತಿದ್ದಾರೆ. ಪಂಜಾಬಿ ಜನರ ಜ್ವಲಂತ ಸಮಸ್ಯೆಗಳ ಇತ್ಯರ್ಥಕ್ಕೆ ಇದು ನೆರವಾಗದು ಎಂದು ವಿಶ್ಲೇಷಿಸಿದೆ.

ಜಲಂಧರ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ (ಐ), ಬಿಜೆಪಿ ಮತ್ತು ಅಕಾಲಿ ಅಭ್ಯರ್ಥಿಗಳನ್ನು ಸೋಲಿಸಲಿಕ್ಕಾಗಿ ಕೆಲಸ ಮಾಡಲು ಸಭೆ ನಿರ್ಧರಿಸಿತು.

ದಕ್ಷಿಣ ಆಫ್ರಿಕದ ಕಮ್ಯುನಿಸ್ಟ್ ನಾಯಕ ಕ್ರಿಸ್ ಹನಿ ಮತ್ತು ಲೋಕಲಹರ್ ಸಂಪಾದಕ ಮಹೇಶ್ ಸಿಂಗ್‌ರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

ಕೋವೂರು ಕ್ಷೇತ್ರದಲ್ಲಿ ಸಿಪಿಐ(ಎಂ) ಬೆಂಬಲ

ಆಂಧ್ರಪ್ರದೇಶ ನೆಲ್ಲೂರು ಜಿಲ್ಲೆಯ ಕೋವೂರು ವಿಧಾನಸಭಾ ಕ್ಷೇತ್ರಕ್ಕೆ ನಡೆಯುವ ಉಪಚುನಾವಣೆಯಲ್ಲಿ ಸಿಪಿಐ(ಎಂ) ಅನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಬೆಂಬಲಿಸಲಿದೆ.

ಎಪ್ರಿಲ್ 28-29 ರಂದು ಸಿಪಿಐ ಕಾರ್ಯಕಾರಿ ಸಮಿತಿ ಹೈದರಾಬಾದ್‌ನಲ್ಲಿ ಸಭೆ ಸೇರಿದಾಗ ಈ ನಿರ್ಣಯ ಕೈಗೊಂಡಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೆ. ಸ... ನಾರಾಯಣ ಈ ತೀರ್ಮಾನವನ್ನು ಸ್ವಾಗತಿಸಿದ್ದಾರೆ.

ಆದರೆ ಸಿಪಿಐ(ಎಂ) ಮತ್ತು ತೆಲುಗುದೇಶಂ ಮಧ್ಯೆ ಸ್ಪರ್ಧೆ ಏರ್ಪಟ್ಟಿರುವುದು ... ದಕರ ಎಂದು ಸಿಪಿಐ ಅಭಿಪ್ರಾಯಪಟ್ಟಿದೆ. ಇದನ್ನು ಒಂದು ಸ್ನೇಹಯುತ ಸ್ಪರ್ಧೆಯಾಗಿ ತೆಲುಗುದೇಶಂ ಪರಿಗಣಿಸಬೇಕೆಂದು ಅದು ಮನವಿ ಮಾಡಿದೆ. ಸಿಪಿಐ(ಎಂ) ಅಭ್ಯರ್ಥಿ ಜಿ. ವೆಂಕಯ್ಯ ಅವರ ಗೆಲುವಿಗೆ ಶ್ರಮಿಸುವಂತೆ ತನ್ನ ಕಾರ್ಯಕರ್ತರು, ಹಿತೈಷಿಗಳು ಮತ್ತು ಜನರಿಗೆ ಅದು ಕರೆ ನೀಡಿದೆ.

ರಾಜ್ಯಾದ್ಯಂತ ಸಂಭ್ರಮದ ಮೇ ದಿನಾಚರಣೆ

ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಸೌಹಾರ್ದತೆ ದಿನವಾದ ಮೇ ದಿನವನ್ನು ರಾಜ್ಯದ ದುಡಿಯುವ ಜನರು ವಿವಿಧ ಕಾರ್ಯಕ್ರಮಗಳ ಮೂಲಕ ಆಚರಿಸಿದರು. ಹಿಂದಿನ ಸಮಾಜವಾದಿ ದೇಶಗಳಲ್ಲಿ ಹಿನ್ನಡೆ ಆಗಿದ್ದರೂ ಮೇ ದಿನದ ಸ್ಪೂರ್ತಿ ನಮ್ಮಲ್ಲಿ ಇನ್ನೂ ಕಡಿಮೆಯಾಗಿಲ್ಲ ಎನ್ನುವುದಕ್ಕೆ ಈ ರ್‍ಯಾಲಿ-ಸಭೆಗಳೇ **ಸಾಕ್ಷಿಯಾಗಿವೆ. ಕೆಂಬಾವುಟವನ್ನು ಎತ್ತರ ಕ್ಕೆತರಕ್ಕೆ ಎತ್ತಿ ಹಿಡಿಯಲು ಸಿ.ಐ.ಟಿ.ಯು. ಸಂಯೋಜಿತ ಕಾರ್ಮಿಕ ಸಂಘಟನೆಗಳು ಪ್ರತಿಜ್ಞೆಗೈದಿವೆ.**

ಕುಂದಾಪುರದಲ್ಲಿ ಬೃಹತ್ ರ್‍ಯಾಲಿ

ಮೇ ಒಂದರಂದು ಮೇ ದಿನಾಚರಣೆಯನ್ನು ಕುಂದಾಪುರದಲ್ಲಿ ಸಿ.ಐ.ಟಿ.ಯುವಿಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಬಹಳ ವಿಜೃಂಭಣೆಯಲ್ಲಿ ನಡೆಸಲಾಯಿತು. ಸಂಜೆ 5 ಗಂಟೆಗೆ ಸರಿಯಾಗಿ ಕುಂದಾಪುರ ಗಾಂಧಿ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಮುಂಚಿತವಾಗಿ ಹಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು ಹಾಗೂ ಆಟೋರಿಕ್ಷಾ-ಚಾಲಕರು ಮೆರವಣಿಗೆಯಲ್ಲಿ ಸಭಾ ಸ್ಥಳಕ್ಕೆ ಬಂದರು.

ಸಾರ್ವಜನಿಕ ಸಭೆಗೆ ಬಂದ ಕಾರ್ಮಿಕರನ್ನು ಹಾಗೂ ಇತರ ಜನ ವಿಭಾಗದವರನ್ನು ಸಿಐಟಿಯು ಮುಖಂಡರಾದ ಸಿ. ನಾರಾಯಣರವರು ಸ್ವಾಗತಿಸಿ ಮೇ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನಿನ ಅಧ್ಯಕ್ಷರಾದ ಶ್ರೀಯುತ ಅಬ್ರಹಾಂ ಕರ್ಕಡರವರು ವಹಿಸಿದರು.

ಸಭೆಯನ್ನುದ್ದೇಶಿಸಿ ಸಿಐಟಿ.ಯುವಿನ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಬಿ. ಮಾಧವ ಮಾತನಾಡಿ ಕಾರ್ಮಿಕವರ್ಗದ ಅಂತರಾಷ್ಟ್ರೀಯ ಸೌಹಾರ್ದತೆ ಮತ್ತು ಮೇ ದಿನದ ಮಹತ್ವದ ಕುರಿತು ವಿವರಿಸಿದರು. ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕುಗಳ ಆದೇಶಗಳನ್ನು ಕಾರ್ಯಗತ ಮಾಡುವ ಶ್ರೀ. ಪಿ.ವಿ. ನರಸಿಂಹರಾವ್ ನೇತೃತ್ವದ ಭಾರತ ಸರಕಾರ ಅನುಸರಿಸುತ್ತಿರುವ ಹೊಸ ಆರ್ಥಿಕ ಮತ್ತು ಹೊಸ ಕೈಗಾರಿಕಾ ನೀತಿಗಳು ಜನರು ಅನುಭವಿಸುತ್ತಿರುವ ಈ ಕಷ್ಟಸಾರ್ವಣ್ಯಗಳಿಗೆ ಪ್ರಮುಖ ಕಾರಣವಾಗಿದೆ ಅಂತ ಹೇಳಿ, ಜನವಿರೋಧಿ, ರಾಷ್ಟ್ರದ್ರೋಹಿ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಲು ಎಲ್ಲಾ ವಿಭಾಗದ ಜನರು ಐಕ್ಯ ಹೋರಾಟವನ್ನು ನಡೆಸುವುದರ ಮಹತ್ವವನ್ನು ವಿವರಿಸಿದರು.

ಸಿಐಟಿಯು ರಾಜ್ಯಸಮಿತಿಯ ಸದಸ್ಯರಾದ ಕೆ. ಶಂಕರ್‌ರವರು ಮಾತನಾಡುತ್ತಾ ಕೇಂದ್ರ ಸರಕಾರ ಅನುಸರಿಸುತ್ತಿರುವ ತಮ್ಮ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳಿಂದ ದಿನೇ ದಿನೇ ಏರುತ್ತಿರುವ ಬೆಲೆಗಳು, ಬೆಳೆಯುತ್ತಿರುವ ನಿರುದ್ಯೋಗ ಜನ ಸಾಮಾನ್ಯರ ಜೀವನವನ್ನು ತೀವ್ರವಾಗಿ ಬಾಧಿಸುತ್ತಿವೆ. ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ನೇತೃತ್ವದಲ್ಲಿ ದುಡಿಯುವ ಜನ ವಿಭಾಗಗಳ ತೀವ್ರ ಹೋರಾಟಗಳು ನಡೆಯಲಿದೆ- ಅಂತ ಹೇಳಿ, ಸೆಪ್ಟೆಂಬರ್ 9 ನೇ ತಾರೀಕು ನಡೆಯುವ "ಕೈಗಾರಿಕಾ ಮುಷ್ಕರ" ಹಾಗೂ "ಭಾರತ ಬಂದ್"ನ್ನು ಯಶಸ್ವಿ ಗೊಳಿಸಲು ಶ್ರಮಿಸಬೇಕೆಂದರು.

ಅಧ್ಯಕ್ಷತೆವಹಿಸಿದ ಅಬ್ರಹಾಂ ಕರ್ಕಡರವರು ಕಾರ್ಮಿಕರ ವರ್ಗದ ರಾಜಕೀಯ ಜವಾಬ್ದಾರಿಯ ಕುರಿತು ವಿವರಿಸಿದರು. ಕೊನೆಯಲ್ಲಿ ಮಹಾಬಲ ಒಡೇರಹೋಬಳಿಯವರು ಅಭಿನಂದನೆ ಸಲ್ಲಿಸಿದರು.

ದಾಂಡೇಲಿಯಲ್ಲಿ ಮೇ ದಿನಾಚರಣೆ

ದಾಂಡೇಲಿ : ಮೇದಿನಾಚರಣೆಯ ಅಂಗವಾಗಿ ದಾಂಡೇಲಿಯ ಪ್ರಮುಖ ಚೌಕಗಳನ್ನು ಹಾಗೂ ಎಲ್ಲಾಯೂನಿಯನ್ ಆಫೀಸುಗಳನ್ನ ಕೆಂಪು ಕಾಗದಗಳಿಂದ ಶೃಂಗರಿಸಲಾಗಿತ್ತು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿಯನ್ನು ಸಹ ಶೃಂಗರಿಸಲಾಗಿತ್ತು.

ಅಂದು ಬೆಳಿಗ್ಗೆ 9 ಗಂಟೆಗೆ ಪ್ರತಿಯೊಂದು ಯೂನಿಯನ್ ಕಚೇರಿ ಎದುರುಗಡೆ ಸಿ.ಐ.ಟಿ.ಯು ಧ್ವಜಾರೋಹಣ ಮಾಡಲಾಯಿತು. ಪೇಪರ್ ಮಿಲ್ಲಿನ ಯೂನಿಯನ್ನಿನ ಪರವಾಗಿ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಕೆ. ಸಾವಂತ, ಪ್ಲಾಯ್‌ವುಡ್ ಯೂನಿಯನ್ ಪರವಾಗಿ ಕಾಂ ಪುಲ್ಲಯ್ಯ ಹಾಗೂ ಡಿ.ವೈ.ಎಫ್.ಐ. ಯೂನಿಯನ್ ಪರವಾಗಿ ಕಾಂ. ಟಿ.ಎಸ್. ನಾಯ್ಕರವರು ಧ್ವಜಾರೋಹಣ ಮಾಡಿ ಮಾತನಾಡಿದರು.

ಅಂದೇ ಸಂಜೆ ಮೂರು ಮಿಲ್‌ನ ಕಾರ್ಮಿಕರು ದಾಂಡೇಲಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ಘೋಷಣೆಗಳನ್ನು ಕೂಗುತ್ತಾ ತೆಗೆದರು. ನಂತರ ಸಂಡೇ ಮೈದಾನದಲ್ಲಿ ಕಾಂ. ಟಿ.ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಕಾಂ. ಭೀಮರಾವ್, ಕಾಂ. ಸಾವಂತ, ಪುಲ್ಲಯ್ಯ, ಟಿ.ಎಸ್. ನಾಯ್ಕ ರವರು ಮಾತನಾಡಿದರು. ಎಮ್.ಬಿ. ನಾಯ್ಕರವರುಗಳು ಸಭೆಯಲ್ಲಿ ಭಾಗವಹಿಸಿದ ಕಾರ್ಮಿಕರಿಗೆ ಧನ್ಯವಾದಗಳನ್ನು ಅರ್ಪಿಸಿದರು. ನಂತರ ಕಾಂ. ಮಾಧವ ನೇರಗಾರವರು ಕೆಲವು ಮಹತ್ವದ ಘೋಷಣೆಗಳನ್ನು ಕೂಗಿದರು ಹಾಗೂ ಕಾರ್ಮಿಕರು ಪ್ರತಿಯಾಗಿ ಘೋಷಣೆಗಳನ್ನು ಕೂಗುವವರೊಂದಿಗೆ ಸಭೆ ಮುಕ್ತಯವಾಯಿತು.

ಎಂ.ಎಸ್.ಕೆ. ಕಾರ್ಮಿಕರಿಂದ

ಮೇ 1,1993 ರಂದು ಕಾರ್ಮಿಕರ ದಿನಾಚರಣೆಯನ್ನು ಎಂ.ಎಸ್.ಕೆ. ಮಿಲ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು)ನ ಕಛೇರಿಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಧ್ವಜಾರೋಹಣವನ್ನು ಯೂನಿಯನ್ ಅಧ್ಯಕ್ಷ ಕಾಂ. ಮರೆಪ್ಪಾ ಕಡೇಚೂರ ನೆರವೇರಿಸಿದರು.

ಹಿರಿಯ ಕಾರ್ಮಿಕ ಮುಖಂಡ ಕಾಂ. ಮೆಹಮೂದ್ ಜಲಾಲರವರು ಈ ಸಂದರ್ಭದಲ್ಲಿ ಮಾತನಾಡುತ್ತಾ, ನೂರು ವರ್ಷಗಳ ಹಿಂದೆ ಚಿಕಾಗೋ ನಗರದಲ್ಲಿ ಕಾರ್ಮಿಕರು ದಿವಸಕ್ಕೆ 8 ಗಂಟೆ ಕೆಲಸ ಮಾಡಲು ಮಾಲಕರ ವಿರುದ್ಧ ಹೋರಾಟ ಮಾಡಿ ಸಫಲರಾದರು. ಇಂದು ನಮ್ಮ ದೇಶದಲ್ಲಿ ಕೋಮುವಾದಿ ಶಕ್ತಿಗಳು ಧರ್ಮದ ಆಧಾರದಲ್ಲಿ ದುಡಿಯುವ ವರ್ಗದ ಐಕ್ಯತೆಯನ್ನು ಒಡೆಯಲು ಪ್ರಯತ್ನ ಮಾಡುತ್ತಿವೆ. ಇಂತಹ ಶಕ್ತಿಗಳ ವಿರುದ್ಧ ದುಡಿಯುವ ವರ್ಗ ಒಗ್ಗಟ್ಟಾಗಿ ಹೋರಾಟ ಮಾಡಬೇಕಾಗಿದೆ ಎಂದು ತಿಳಿಸಿದರು.

ಎಂ.ಎಸ್.ಕೆ. ಮಿಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿಯಾದ ತಿಮ್ಮಣ್ಣಾ ಮೊಡ್ಡಮನಿ ಇವರು ಮಾತನಾಡುತ್ತಾ ಕಳೆದ ಮೇ ತಿಂಗಳಿಂದ ಇಲ್ಲಿಯವರಿಗೆ ಸಿ.ಐ.ಟಿ.ಯು ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿ, ಹೊಸ ಕೈಗಾರಿಕಾ ನೀತಿಯನ್ನು ವಿರೋಧಿಸಿ ದೇಶದ ಏಕತೆಯನ್ನು ಕಟ್ಟಲು ರೈತರ, ಕಾರ್ಮಿಕರ ಐಕ್ಯತಾ ಹೋರಾಟವನ್ನು ರೂಪಿಸುವಲ್ಲಿ ಸಿ.ಐ.ಟಿ.ಯು ಮುಖ್ಯ ಪಾತ್ರವನ್ನು ವಹಿಸಿದೆ ಎಂದು ತಿಳಿಸಿದರು.

ಮೇ ದಿನಾಚರಣೆಯ ಸಭೆಯಲ್ಲಿ ಹಾಜರಿದ್ದ ಕಾರ್ಮಿಕರು ರಾಷ್ಟ್ರದ ಐಕ್ಯತೆಯನ್ನು ರಕ್ಷಿಸಲು ಕಂಕಣಬದ್ಧರಾಗಿ ಕೆಲಸ ಮಾಡುತ್ತೇವೆಂಬ ಪ್ರತಿಜ್ಞೆಯನ್ನು ಕೈಕೊಂಡರು.

ಸ್ಟೇಶನ್ ಬಜಾರದ ಪಂಚಶೀಲ ನಗರದಲ್ಲಿ ಸಹ ಎಂ.ಎಸ್.ಕೆ. ಮಿಲ್ ವರ್ಕರ್ಸ್ ಯುನಿಯನ್‌ನ ಕಾರ್ಯಕಾರಿಣಿ ಸದಸ್ಯರಾದ ಮೊಹಮ್ಮದ್ ಹುಸೇನ್ ಅವರ ನೇತೃತ್ವದಲ್ಲಿ ಮೇ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಹರೇಕಳದಲ್ಲಿ ಸಾರ್ವಜನಿಕ ಸಭೆ

ಮಂಗಳೂರು: ಸಿ.ಐ.ಟಿ.ಯು ಮತ್ತು ಡಿ.ವೈ.ಎಫ್.ಐ. ಹರೇಕಳ, ಇವರ ಜಂಟಿ ಆಶ್ರಯದಲ್ಲಿ ಹರೇಕಳ ಕಡವಿನ ಬಳಿ ಹೊಗೆಯಲ್ಲಿ ಮೇದಿನಾಚರಣೆಯ ಅಂಗವಾಗಿ ಏರ್ಪಡಿಸಿದ ಸಾರ್ವಜನಿಕ ಸಭೆಯ ಅಧ್ಯಕ್ಷಸ್ಥಾನವನ್ನು ಮಾಜಿ ಉಪಪ್ರಧಾನ ಬಿ. ಬಾಬು ವಹಿಸಿದ್ದರು. ಡಿ.ವೈ.ಎಫ್.ಐ. ಕಚೇರಿಯಿಂದ ಹೊರಟ ಮೆರವಣಿಗೆ ನೇತೃತ್ವವನ್ನು ಕೆ.ಹೆಚ್. ಹಾಮಿದ್, ಕೆ.ಪಿ. ಇಬ್ರಾಹಿಂ ಮತ್ತು ಕೆ. ಆನಂದ ವಹಿಸಿದ್ದರು.

ತಮ್ಮ ಹಿತಾಸಕ್ತಿಗೋಸ್ಕರ, ಕಾರ್ಮಿಕರ ಬಲವಾದ ಸಂಘಟನೆಯನ್ನು ಒಡೆಯುವುದಕ್ಕೋಸ್ಕರ ಮಾಲಕರೇ ಕೆಲವು ಸ್ಥಾಪಿತ ಹಿತಾಸಕ್ತಿಗಳೊಡಗೂಡಿ ಕಾರ್ಮಿಕರ ನಿಜವಾದ ಉದ್ಧಾರ ತಮ್ಮಿಂದ ಮಾತ್ರ ಸಾಧ್ಯ ಎಂದು ಡಂಗೂರ ಸಾರಿ ಕಾರ್ಮಿಕರನ್ನು ದಿಕ್ಕು ತಪ್ಪಿಸುವ ಕಾರ್ಯವನ್ನು ವಿಫಲಗೊಳಿಸಿ ಸಿ.ಐ.ಟಿ.ಯು ನೇತೃತ್ವದ ಸಂಘಟನೆಯನ್ನು ಬಲಪಡಿಸಬೇಕೆಂದು ಮುಖ್ಯ ಅತಿಥಿಯಾಗಿ ಸಭೆಯಲ್ಲಿ ಮಾತನಾಡಿದ ಸಿ.ಪಿ.ಐ.(ಎಂ)ನ ಉಳ್ಳಾಲ ವಲಯದ ಮುಂದಾಳು ಕಾಂ. ಜನಾರ್ಧನ ನಾಯ್ಕಾರ್ ಕರೆ ನೀಡಿದರು. ರೈತ ಮುಂದಾಳು ಕಾಂ. ಮೋರ್ಲವೆಂಕಪ್ಪ ಶೆಟ್ಟಿ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಸುಕುಮಾರ್ ಸಮಯೋಚಿತವಾಗಿ ಮಾತನಾಡಿದರು.

ವೇದಿಕೆಯಲ್ಲಿ ಕಾಂ. ಭ... ಕೋಟ್ಯಾನ್, ಉಳ್ಳಾಲ ವಲಯ ಡಿ.ವೈ. ಎಫ್.ಐ. ಕಾರ್ಯದರ್ಶಿ ಬಾಬು ಪಿಲಾರ್, ಕುತ್ತಾರ್. ಪದವು ಬೀಡಿ ಯೂನಿಯನ್ನಿನ ಕಾರ್ಯದರ್ಶಿ ಜಯಂತ್‌ನಾಯಕ್ ಉಪಸ್ಥಿತರಿದ್ದರು. ಡಿ.ವೈ.ಎಫ್.ಐ ಅಧ್ಯಕ್ಷ ಹುಸೈನ್ ಪಾವೂರು ಅತಿಥಿಗಳನ್ನು ಸ್ವಾಗತಿಸಿದರೆ ... ಮಂಜಯ್ಯ ಭಂಡಾರಿಯವರು ಧನ್ಯವಾದ ಸಮರ್ಪಿಸಿದರು.

ಉಡುಪಿಯಲ್ಲಿ ಜಂಟಿ ಮೆರವಣಿಗೆ-ಸಭೆ

ಎ.ಐ.ಟಿ.ಯು.ಸಿ. ಮತ್ತುಸಿ.ಐ.ಟಿ.ಯುಗಳ ವತಿಯಿಂದ ಜಂಟಿಯಾಗಿ ಮೇ ದಿನಾಚರಣೆಯನ್ನು ಉಡುಪಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ನಗರದ ಅನೇಕ ಭಾಗಗಳಲ್ಲಿ ತೋರಣಗಳು ಮತ್ತು ಕೆಂಬಾವುಟಗಳನ್ನು ಶೃಂಗರಿಸಲಾಗಿತ್ತು.

ಸಂಜೆ 4 ಗಂಟೆಗೆ ಉಡುಪಿಯ ಹೊರವಲಯಗಳಾದ ಮಣಿಪಾಲದ ಪ್ರೆಸ್ ಕಾರ್ಮಿಕರ ಅತಿ ದೊಡ್ಡ ಮೆರವಣಿಗೆಯು ಮಣಿಪಾಲದಿಂದಲೇ ಹೊರಟಿದ್ದರೆ, ಹಂಗಾರ ಕಟ್ಟೆ, ಕಲ್ಯಾಣಪುರ ಅಂಬಾಗಿಲು ಹಂಚಿನ ಕಾರ್ಮಿಕರು ಮತ್ತು ಪ್ಲೈವುಡ್ ಕಾರ್ಮಿಕರು ಕಲ್ಯಾಣಪುರ ಸಂತಕಟ್ಟೆಯಿಂದ ಮೆರವಣಿಗೆ ಹೊರಟು ಬಂದು ಉಡುಪಿ ನಗರದ ಸಿಟಿ ಬಸ್ ಸ್ಟ್ಯಾಂಡಿನಲ್ಲಿ ಸೇರಿದ್ದ ನೂರಾರು ಕಾರ್ಮಿಕರನ್ನು ಜತೆ ಸೇರಿಸಿಕೊಂಡು ನಗರದತ್ತ ಮುಂದೆಸಾಗಿದ ಮೆರವಣಿಗೆಯಲ್ಲಿ ಸಾವಿರಾರು ಕಾರ್ಮಿಕರು ಭಾಗವಹಿಸಿದ್ದು ನೂರಾರು ಕೆಂಬಾವುಟ ಬ್ಯಾನರುಗಳು ಮೆರವಣಿಗೆಗೆ ಹೆಚ್ಚಿನ ಮೆರಗು ನೀಡಿತ್ತು. ಉಡುಪಿಯ ಜನತೆ ಇತ್ತೀಚೆಗಿನ ದಿನಗಳಲ್ಲಿ ಕಂಡ ಅತ್ಯಂತ ದೊಡ್ಡ ಮೆರವಣಿಗೆಯಾಗಿದ್ದು ವರ್ಣರಂಜಿತವಾಗಿದ್ದು ಜನತೆಯನ್ನು ಬಹಳವಾಗಿ ಆಕರ್ಷಿಸಿತು. ದಾ...

ಪುಟ 7

ಬ್ರಿಟನ್‌ನಲ್ಲಿ ಆಳುವ ಪಕ್ಷಕ್ಕೆ ಭಾರಿ ಸೋಲು

ಸ್ಥಳೀಯ ಸಂಸ್ಥೆಗಳಲ್ಲಿ ನಡೆದ ಚುನಾವಣೆಗಳು ಟೋರಿ ಪಕ್ಷ ಭಾರಿ ಪರಾಜಯ ಹೊಂದಿದೆ ಎಂದು ವರದಿಯಾಗಿದೆ. 47 ಸ್ಥಳೀಯ ಸಂಸ್ಥೆಗಳಲ್ಲಿ ಅರ್ಧಕ್ಕಿಂತಲೂ ಕಟ್ಟಿನ ಫಲಿತಾಂಶ ಬಂದಿದ್ದು, ಹಿಂದೆ ಟೋರಿಗಳ ಕೈಯಲ್ಲಿದ್ದ 17 ಸ್ಥಳೀಯ ಸಂಸ್ಥೆಗಳಲ್ಲಿ 3 ಬಿಟ್ಟು ಉಳಿದ ಕಡೆ ಟೋರಿಗಳು ಭಾರಿ ಪರಾಭವ ಹೊಂದಿದ್ದಾರೆ.

ಉಪಚುನಾವಣೆಯೊಂದರಲ್ಲೂ ಟೋರಿ ಅಭ್ಯರ್ಥಿಯನ್ನು ಸೋಲಿಸಿ ಲಿಬರಲ್ ಪಕ್ಷದ ಅಭ್ಯರ್ಥಿ ಆಯ್ಕೆಯಾಗಿದ್ದಾರೆ. ಆರ್ಥಿಕವಾಗಿ ಏನೂ ಕ್ರಮ ಕೈಗೊಳ್ಳದಿರುವವರ ಬಗ್ಗೆ ಜನರ ಆಕ್ರೋಶ ವ್ಯಕ್ತಪಟ್ಟಿದೆ ಎನ್ನಬಹುದು.

'ರಶ್ಯವನ್ನು ಯೆಲ್ಟ್‌ಸಿನ್ನರ ' ಮಾಫಿಯಾದಿಂದ ರಕ್ಷಿಸಿರಿ'

ಸಾವಿರಾರು ಜನ ರಶ್ಯನರು ಮೇಲಿನ ಘೋಷಣೆ ಕೂಗುತ್ತಾ ಮಾಸ್ಕೋದ ಬೀದಿಗಳಲ್ಲಿ ವಿಜಯದಿನ ಆಚರಿಸಿದರು. ಮೇ ಮಾಜಿ ಸೋವಿಯೆಟ್ ಒಕ್ಕೂಟದಲ್ಲಿ ವಿಜಯದಿನವಾಗಿ ಆಚರಿಸಲಾಗಿದೆ. ಆದಿನ 1945 ರಲ್ಲಿ ನಾಜಿ ಜರ್ಮನಿ ಸೋತು, ಎರಡನೇ ಮಹಾಯುದ್ಧ ಕೊನೆಯಾದ ದಿನ. ಇದು ಸೋವಿಯೆತ್ ನಾಗರಿಕರಿಗೆ ಬಹಳ ಭಾವನಾತ್ಮಕ ದಿನ. ಸಾವಿರಾರು ರಶ್ಯನ್ನರ ಮೆರವಣಿಗೆ ಮುಂದಿನ ಸಾಲುಗಳಲ್ಲಿ ದೇಶಪ್ರೇಮಿ ಸೈನಿಕರು ಅಧಿಕಾರಿಗಳು ಇದ್ದರು.(ಕೆಲವರು ನಿವೃತ್ತರು ಕೆಲವರು ಹಾಲಿ)

ಮೆರವಣಿಗೆ ಮಾಸ್ಕೋದ ಬೈಲೋರಶ್ಯನ್ ಸ್ಟೇಶನ್‌ನಿಂದ ಆರಂಭವಾಗಿ ಮಾಸ್ಕೋ ಕೇಂದ್ರದ ಬೀದಿಗಳಲ್ಲಿ ಹಾದು ಹೋಯಿತು. 'ಬಂಡವಾಳಶಾಹಿ ದಾರಿದ್ರ್ಯದಿಂದ ಹಾಗೂ ಯೆಲ್ಟ್‌ಸಿನ್ನರ ಮಾಫಿಯಾದಿಂದ ರಶ್ಯವನ್ನು ರಕ್ಷಿಸಿ' ಎಂಬ ಹಲವಾರು ಬ್ಯಾನರುಗಳು ಕಂಡು ಬಂದವು. 'ಯೆಲ್ಟ್‌ಸಿನ್, ರಶ್ಯದ ಕಟುಕ' ಎಂಬ ಘೋಷಣೆಗಳು ಕಾಣಬಂದವು. ಕೆಂಬಾವುಟಗಳು, ರಶ್ಯನ್ ರಾಷ್ಟ್ರೀಯ (ಹಳದಿ, ಕೆಲವು ಬಿಳಿ) ಬಾವುಟಗಳ ಸಾಗರದಲ್ಲಿ ದೊಡ್ಡ ಬ್ಯಾನರೊಂದು 'ರಶ್ಯನರು ಬರುತ್ತಿದ್ದಾರೆ' ಎಂದು ಘೋಷಿಸುತ್ತಿತ್ತು.

ಈ ನಡುವೆ ಪಾರ್ಲಿಮೆಂಟಿನ ಕಮಿಶನ್ ಒಂದು ಯೆಲ್ಟ್‌ಸಿನ್ ಸೂಚಿಸಿರುವ ಸಂವಿಧಾನ ತಿದ್ದುಪಡಿಗಳನ್ನು ತಿರಸ್ಕರಿಸಿದೆ. ಅಲ್ಲದೆ ಉಪಾಧ್ಯಕ್ಷರಿಗೆ ಇರುವ ಎಲ್ಲಾ ಅಧಿಕಾರಗಳನ್ನು ವಾಪಸು ತೆಗೆದುಕೊಂಡಿದ್ದಾರೆ. ರಶ್ಯನ್ ಸಂವಿಧಾನದ ಪ್ರಕಾರ ಉಪಾಧ್ಯಕ್ಷರನ್ನು ವಜಾ ಮಾಡುವಂತಿಲ್ಲ. ಆದ್ದರಿಂದ ಯೆಲ್ಟ್‌ಸಿನ್ ಈ ರೀತಿಯ ಕಾರ್ಯಾಚರಣೆ ಮಾಡಿದ್ದಾರೆ ಎನ್ನಲಾಗಿದೆ.

ಇದಲ್ಲದೆ ಜಪಾನಿನ ಭೇಟಿಯನ್ನು ಎರಡನೇ ಬಾರಿಗೆ ಯೆಲ್ಟ್‌ಸಿನ್ ಮುಂದಕ್ಕೆ ಹಾಕಿದ್ದಾರೆ.

ಕಾಂಬೋಡಿಯಾದಲ್ಲಿ ಖೇಮರ್ ರೋಜ್ ಧಾಳಿ

ಕೆಂಬೋಡಿಯಾದಲ್ಲಿ ಮೇ 23 ರಿಂದ 27 ರವರೆಗೆ ನಡೆಯುದೇಕಾಗಿದ್ದ ಚುನಾವಣೆಗೆ ಪುನಃ ತೀವ್ರ ವಿಘ್ನ ಎದುರಾಗಿದೆ. ಚುನಾವಣೆ ಬಹಿಷ್ಕಾರ ಮಾಡಿರುವ ಖೇಮರ್ ರೋಜ್ ಗೆರಿಲ್ಲಾ ಗುಂಪು ತೀವ್ರ ಹಿಂಸಾಚಾರದಲ್ಲಿ ತೊಡಗಿದೆ. ಚುನಾವಣಾ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆ ಮೇಲೆ ಧಾಳಿಯನ್ನು ಹೆಚ್ಚಿಸಿದೆ. ಕಳೆದ ವಾರಗಳಲ್ಲಿ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಯ 11 ಜನ ಸತ್ತಿದ್ದಾರೆ. ಕೆಲವು ದಿನಗಳ ಹಿಂದೆ ಜಗತ್‌ಪ್ರಸಿದ್ಧ ಅಂಗ್‌ಕೋರ್ ವಾತ್ ಇರುವ ಸಿಮ್‌ರಿಪ್ ಪಟ್ಟಣವನ್ನು ವಶಪಡಿಸಿಕೊಳ್ಳಲು ಖೇಮರ್ ರೋಜ್ ನಡೆಸಿದ ಭಾರಿ ದಾಳಿಯಲ್ಲಿ 17 ಜನ ಸತ್ತರು. ಆದರೆ ಈ ದಾಳಿಯನ್ನು ಸರ್ಕಾರಿ ಪಡೆಗಳು ಪ್ರತಿದಾಳಿ ನಡೆಸಿ ಹಿಮ್ಮೆಟ್ಟಿಸಿದವು.

ಇದರಿಂದಾಗಿ ಚುನಾವಣೆಯ ಮೇಲೆ ಪ್ರಶ್ನೆ-ಚಿಹ್ನೆ ತಗಲಿದೆ. ಚುನಾವಣೆ ನಡೆಸಲು ಬಂದಿರುವ ವಿಶ್ವ ಸಂಸ್ಥೆ ಕಾರ್ಯಕರ್ತರು ಚುನಾವಣಾ ಪೂರ್ವ ಭಾರಿ ಹಿಂಸಾಚಾರದಿಂದ ಭೀತಿಯಿಂದ ಕೆಂಬೋಡಿಯಾ ಬಿಡಬಹುದು. 41 ಕಾರ್ಯಕರ್ತರು ಆಗಲೇ ಕೆಂಬೋಡಿಯಾ ಬಿಟ್ಟು ಹೋಗಿದ್ದಾರೆ. ಉಳಿದ ಕಾರ್ಯಕರ್ತರು ಸುರಕ್ಷತೆಯ ದೃಷ್ಟಿಯಿಂದ ಚುನಾವಣೆ ರದ್ದು ಮಾಡಬೇಕಾಗಬಹುದು.

ಆದರೆ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಘಾಲಿ ಕೆಂಬೋಡಿಯಾದಲ್ಲಿ ನಿಗದಿತ ದಿನಗಳಲ್ಲೇ ಚುನಾವಣೆ ನಡೆಸುವ ಬಗ್ಗೆ ಬಹಳ ಕಾಳಜಿ ವಹಿಸಿದ್ದಾರೆ.

ಖೇಮರ್ ರೋಜ್ ಚುನಾವಣೆ ಬಹಿಷ್ಕಾರ ಹಿಂದೆಸೇ ಹಾಕಿದೆ. ಆ ಮೂಲಕ 1991 ರಲ್ಲಿ ಇತರ ಗೆರಿಲ್ಲಾ ಗುಂಪುಗಳ ಜತೆ ಹಾಗೂ ನಾಲ್ಕು ದೇಶಗಳ ಮಧ್ಯಸ್ಥಿಕೆಯಿಂದ ಸಹಿ ಹಾಕಿದ ಪ್ಯಾರಿಸ್ ಒಪ್ಪಂದದಿಂದ ಹಿಂತೆಗೆದಂತಾಗಿದೆ. ವಿಶ್ವಸಂಸ್ಥೆ ಪ್ಯಾರಿಸ್ ಒಪ್ಪಂದದ ಪ್ರಕಾರ ಕೆಂಬೋಡಿಯಾದಿಂದ ವಿಯೆಟ್ನಾಂ ಪಡೆಗಳು ಹಿಂದಿರುಗಬೇಕೆಂಬ ಭಾಗದ ಜಾರಿ ಸರಿಯಾಗಿ ಮಾಡಿಲ್ಲ ಎಂಬ ನೆವ ಮುಂದಿಡುತ್ತಿದೆ. ಆದರೆ ತಾತ್ಕಾಲಿಕ



ಸರ್ಕಾರ ರಚಿಸುವ ಮಾತುಕತೆಗಳಲ್ಲಿ ಭಾಗವಹಿಸಲು ತಯಾರಿದೆ. ಈಗಿನ ಸರ್ಕಾರ ವಿಯೆಟ್ನಾಂನಕ್ಕೆ ಗೊಂಬೆ ಸರ್ಕಾರ ಆದ್ದರಿಂದ ಅದರ ಮೇಲ್ವಿಚಾರಣೆಯಲ್ಲಿ ನಡೆಯುವ ಚುನಾವಣೆ ನ್ಯಾಯಯುತವಾಗಿರಲು ಸಾಧ್ಯವಿಲ್ಲ, ಎಂಬುದು ಖೇಮರ್ ರೋಜ್ ವಾದ.

ಖೇಮರ್ ರೋಜ್‌ನ ಬಹಿಷ್ಕಾರ, ಹಿಂಸಾಚಾರದಿಂದ ಉತ್ಪನ್ನವಾಗಿರುವ ಹೊಸ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ತಾತ್ಕಾಲಿಕ ಅಧ್ಯಕ್ಷ ಸಿಹನುಕ್ ನಾಲ್ಕು ಗೆರಿಲ್ಲಾ ಗುಂಪುಗಳ ಸಭೆ ಕರೆದಿದ್ದಾರೆ. ಈ ಸಭೆಗೆ ಹೋಗುವುದಾಗಿ ಖೇಮರ್ ರೋಜ್ ಹೇಳಿದೆ.

13 ವರ್ಷಗಳ ಆಂತರಿಕ ಕಲಹ ಈ ರೀತಿ ಸದ್ಯಕ್ಕೆ ಕೊನೆಗಾಣುವ ಸಾಧ್ಯತೆ ಕಾಣುತ್ತಿಲ್ಲ.

ಕಾರ್ಮಿಕವರ್ಗ ಎದುರಿಸಬೇಕಾದ ಎರಡು ಅಪಾಯಗಳು

— ಕಾಂ. ಸಮರ್ ಮುಖರ್ಜಿ

ಆಲ್ ಇಂಡಿಯಾ ಕನಫೆಡರೇಷನ್ ಆಫ್ ಮರ್ಕೆಂಟೈಲ್ ಅಂಡ್ ಕಮರ್ಷಿಯಲ್ ಎಂಪ್ಲಾಯಿಸ್ ಸಂಘಟನೆಯ ಪ್ರತಿನಿಧಿಗಳ ಮೂರನೇ ಸಮ್ಮೇಳನ ಮೇ 10-11 ರಂದು ಬೆಂಗಳೂರಲ್ಲಿ ನಡೆಯಿತು. ಈ ಸಮ್ಮೇಳನವನ್ನು ರಾಜ್ಯ ಸಭೆಯ ಸದಸ್ಯರಾದ ಕಾಂ. ಸಮರ್ ಮುಖರ್ಜೀಯವರು ಉದ್ಘಾಟಿಸಿದರು. ಕಾಂ. ಸಮರ್‌ಮುಖರ್ಜೀಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಎಪ್ರಿಲ್ 15,1993 ರಂದು ನವದೆಹಲಿಯಲ್ಲಿ ಜರುಗಿದ ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ಸಮಾವೇಶದಲ್ಲಿ ಸ್ವೀಕರಿಸಿದ ಬೇಡಿಕೆಗಳನ್ನು ಪ್ರತಿನಿಧಿಗಳ ಗಮನಕ್ಕೆ ತಂದು, ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ಷರತ್ತುಗಳ ದುಷ್ಪರಿಣಾಮಗಳನ್ನು ವಿವರಿಸಿದರು. ಧಾರ್ಮಿಕ ಮೂಲಭೂತವಾದದಿಂದಾಗಿ ದೇಶದಲ್ಲಿ ಉದ್ಭವಿಸಿದ ವಿಷಮ ಪರಿಸ್ಥಿತಿಯನ್ನು ವಿವರಿಸುತ್ತಾ, ಕೋಮುವಾದಿ ಶಕ್ತಿಗಳು ತಂದೊಡ್ಡುತ್ತಿರುವ ಅಪಾಯವನ್ನು ಗುರುತಿಸಿದರು. ಈ ಅವಳಿ ಅಪಾಯವನ್ನು ದೇಶದ ಸಾರ್ವಭೌಮತ್ವನ್ನು ಸಾಮ್ರಾಜ್ಯಶಾಹಿಗಳಿಗೆ ಒಪ್ಪಿಸುವ ಕೇಂದ್ರ ಸರ್ಕಾರದ ಆರ್ಥಿಕ ಧೋರಣೆ: ಫ್ಯಾಸಿಸಮ್ ಬೆಳವಣಿಗೆಯನ್ನು ಪ್ರತಿನಿಧಿಗಳು ಸರಿಯಾಗಿ ಗುರುತಿಸಿ, ಇವುಗಳ ವಿರುದ್ಧ ದೇಶದಲ್ಲಿ ನಡೆಯುತ್ತಿರುವ ಪ್ರಬಲ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿ 9ನೇ ಸೆಪ್ಟೆಂಬರ್ ಭಾರತ್‌ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸ್ಫೂರ್ತಿದಾಯಕವಾಗಿ ಹೇಳಿದರು.

ಸಮ್ಮೇಳನವನ್ನುದ್ದೇಶಿಸಿ, ಸಿ.ಐ.ಟಿ.ಯು ವಿನ ಕಾಂ. ಎಸ್. ಸೂರ್ಯನಾರಾಯಣ ರಾವ್, ಎಚ್.ಎಂ.ಎಸ್.ನ ಕಾಂ. ರಾಮದೇವ್, ಎ.ಐ.ಬಿ.ಒ.ಸಿ.ಯ ಕಾಂ. ಆರ್. ಎನ್. ಗೋಡ್‌ಬೋಲೆ. ಎ.ಐ.ಐ.ಇ.ಎ ಉಪಾಧ್ಯಕ್ಷ ಕೆ.ವಿ. ಶ್ರೀನಿವಾಸ್ ಎಫ್.ಎಂ. ಆರ್.ಐ.ನ ಕಾಂ. ಸತೀಶ್ ಚಂದ್ರ, ಮತ್ತು ಇತರ ಕಾರ್ಮಿಕ ನೇತಾರರು ಮಾತನಾಡಿದರು.

ಸಮ್ಮೇಳನದಲ್ಲಿ 62 ಮಂದಿ ಪ್ರತಿನಿಧಿಗಳು ಮತ್ತು ವೀಕ್ಷಕರುಗಳಿದ್ದು, ಹೆಚ್ಚಿನವರು ಪ್ರಧಾನ ಕಾರ್ಯದರ್ಶಿಯವರ ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದರು. ನಂತರ, ವರದಿಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಸಮ್ಮೇಳನವು ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ವಿರುದ್ಧ ಮತ್ತು ಕೋಮುವಾದಿ ಹಾಗೂ ಮತೀಯ ಮೂಲಭೂತವಾದದ ವಿರುದ್ಧ ನಿರ್ಣಯಗಳನ್ನು ಸರ್ವಾನುಮತದಿಂದ ಕೈಗೊಂಡಿತು. ಸಮ್ಮೇಳನವು ಹೊಸ ಪೆನ್‌ಶನ್ ಸ್ಕೀಮನ್ನು ವಿರೋಧಿಸುತ್ತಾ ಕಾರ್ಮಿಕರು, ಮಾಲೀಕರು ಮತ್ತು ಸರ್ಕಾರ ಸರಿಸಮಾನವಾಗಿ ಚಂದಾ ಕೊಡುವ, ಮೂರನೇ ನಿವೃತ್ತಿ ಸೌಲಭ್ಯವಾಗಿ (ಈಗಿನ ಪ್ರಾವಿಡೆಂಟ್ ಫಂಡ್‌ನ್ನು ಮುಟ್ಟದೇ) ಪೆನ್‌ಶನ್ ಸ್ಕೀಮನ್ನು ತರಬೇಕೆಂದು, ಸರ್ಕಾರವನ್ನು ಒತ್ತಾಯಿಸಿತು. ಡಂಕೆಲ್ ಪ್ರಸ್ತಾಪವನ್ನು ತಿರಸ್ಕರಿಸಬೇಕೆಂದು ಸಮ್ಮೇಳನವು ಸರ್ಕಾರವನ್ನು ಕೇಳಿಕೊಂಡಿತು.

ಮೇ ದಿನಾಚರಣೆ ....

ಪುಟ 6ರಿಂದ

ಯುದ್ಧಕ್ಕೂ ಜನರು ಸಾವಿರಾರು ಸಂಖ್ಯೆಯಲ್ಲಿ ಸಾಲಾಗಿ ನಿಂತು ನೋಡಿ ಹರ್ಷ ವ್ಯಕ್ತಪಡಿಸುತ್ತಿದ್ದರು..

ಸಂಜೆ 5.30ರ ನಂತರ ಉಡುಪಿ ರಥಬೀದಿಯಲ್ಲಿ ಜರುಗಿಸಲಾದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಮ್ರೇಡ್ ಎಂ. ಆರ್. ಆಚಾರ್ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಬಿ. ಮೋನಪ್ಪ ಸಾಲಿಯಾನ್ ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಬಿ.ವಿ. ಕಕ್ಕಿಲ್ಲಾಯ (ಸಿ.ಪಿ.ಐ. ಮುಂದಾಳು ಮಾಜಿ ಶಾಸಕರು) ವಿಮಾ ನೌಕರರ ಮತ್ತು ಮುದ್ರಣ ಕಾರ್ಮಿಕರ ಮುಂದಾಳು ಪಿ. ವಿಶ್ವನಾಥ ರೈ, ಬ್ಯಾಂಕು ನೌಕರರ ಮುಂದಾಳು ವೇಣುಗೋಪಾಲ ರಾವ್, ಸಿ.ಐ.ಟಿ.ಯು.ವಿನ ಡೇವಿಡ್ ಕರ್ಕಡ ಮೊದಲಾದವರು ಮಾತನಾಡಿ ಸಾಮ್ರಾಜ್ಯಶಾಹಿ ಆಕ್ರಮಣಕಾರಿ ನೀತಿಯನ್ನು ಖಂಡಿಸಿದರು. ಕೋಮುವಾದದ ಅಪಾಯವನ್ನು ವಿವರಿಸಿದರು. ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಗಳನ್ನು ಬದಲಿಸುವಂತೆ ಬೆಲೆ ಏರಿಕೆಯನ್ನು ತಡೆಗಟ್ಟುವಂತೆ ಮತ್ತು ಸರಕಾರದ ಕಾರ್ಮಿಕ ವಿರೋಧಿಯಾದ ಕೈಗಾರಿಕಾ ನೀತಿಗಳನ್ನು ಬದಲಿಸಿ ಸರಕಾರಿ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸುವುದರ ವಿರೋಧವಾಗಿ ಸರಕಾರದ ನೀತಿ, ಧೋರಣೆಗಳು ಬದಲಾಗುವಂತೆ ಹೋರಾಟ ನಡೆಸಬೇಕಾದ ಅಗತ್ಯತೆಗಳನ್ನು ವಿವರಿಸಿದರು.

ಎಪ್ರಿಲ್ 14,15 ರ ದೆಹಲಿಯ ಸಮಾವೇಶದ ಕರೆಯನ್ನು ಜಾರಿಗೊಳಿಸಲು ಎಲ್ಲಾ ಸಂಘಟನೆಗಳು ಜತೆ ಸೇರಿ ವಿಶಾಲ ಪ್ರಮಾಣದ ತಯಾರಿ ನಡೆಸಿ ಹೋರಾಟದ ಯಶಸ್ವಿಗಾಗಿ ದುಡಿಯುವಂತೆ ಕಾರ್ಮಿಕರನ್ನು ವಿನಂತಿಸಲಾಯಿತು. ಸಭೆಯ ಯಶಸ್ವಿಗಾಗಿ ಸಹಕರಿಸಿದವರೆಲ್ಲರಿಗೆ ಧನ್ಯವಾದ ಸಲ್ಲಿಸಲಾಯಿತು.

ಕುಪ್ಪೆಪದವಿನಲ್ಲಿ ಸಭೆ

ಕಾಂಗ್ರೆಸ್ ಸರಕಾರದ ಜನ ವಿರೋಧಿ ನೀತಿಗಳಿಂದ ಬೆಲೆ ಏರಿಕೆ, ನಿರುದ್ಯೋಗ, ಅನಕ್ಷರತೆ, ಬಡತನ ಹೆಚ್ಚುತ್ತಿತ್ತು, ಸಾಮ್ರಾಜ್ಯಶಾಹಿ ಆರ್ಥಿಕ ಸಂಸ್ಥೆಗಳಾದ ಐ. ಎಂ.ಎಫ್. ಮತ್ತು ವಿಶ್ವಬ್ಯಾಂಕ್ ಷರತ್ತುಗಳನ್ನು ಜಾರಿ ಮಾಡಿ ದೇಶದ ಆರ್ಥಿಕ ಸಾರ್ವಭೌಮತ್ವ ನಾಶವಾಗಿದೆ. ಇನ್ನೊಂದು ಕಡೆಯಲ್ಲಿ ದೇಶದ ಜಾತ್ಯಾತೀತ ಪ್ರಜಾಪ್ರಭುತ್ವ ಮೌಲ್ಯಗಳನ್ನು ಕೋಮುವಾದಿ ಶಕ್ತಿಗಳು ರಾಷ್ಟ್ರೀಯತೆಯ ಹೆಸರನ್ನು ಹೇಳುತ್ತಾ ಧರ್ಮದೊಂದಿಗೆ ರಾಜಕೀಯವನ್ನು ಬೆಸಿ ಜನರನ್ನು ಮತ್ತು ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ನಾಶ ಮಾಡುತ್ತಿದೆ. ಇದರ ವಿರುದ್ಧ ಕಾರ್ಮಿಕರು ಹೋರಾಡಲು ಅನಿವಾರ್ಯವಾಗಿದೆ. ಸ್ವಾತಂತ್ರ ಹೋರಾಟದ ಪರಂಪರೆಯನ್ನು ಹೊಂದಿರುವ ಕಾರ್ಮಿಕ ಸಂಘಟನೆಗಳು ಕಾರ್ಮಿಕರ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವುದರೊಂದಿಗೆ ದೇಶದ ಸಮಗ್ರತೆ ಏಕತೆಗಾಗಿ ಪಣ ತೊಡಬೇಕೆಂದು ಮೇ ಒಂದರಂದು ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಕಾರ್ಮಿಕರಿಗೆ ಕರೆ ನೀಡಿದರು.

ಅವರು ಕುಪ್ಪೆಪದವಿನಲ್ಲಿ ಮೇ 1 ಕಾರ್ಮಿಕರ ದಿನಾಚರಣೆಯ ಮೆರವಣಿಗೆ ಮತ್ತು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ವಾಸುದೇವ ಆಚಾರಿಯವರು ಮಾತನಾಡಿದರು.

ಕುಪ್ಪೆಪದವು ಬೀಡಿ ಕೆಲಸಗಾರರ ಸಂಘದ ಖಜಾಂಚಿ ಸದಾಶಿವ ದಾಸ್‌ರವರು ಸ್ವಾಗತಿಸಿ, ಡಿ.ವೈ.ಎಫ್.ಐ. ಕುಪ್ಪೆಪದವು ಘಟಕದ ಕಾರ್ಯದರ್ಶಿ ಎಸ್.ಎ. ಹಸನಬ್ಬರವರು ಧನ್ಯವಾದವನ್ನರ್ಪಿಸಿದರು.

ವಿಜಾಪುರದಲ್ಲಿ ಮೇ ದಿನಾಚರಣೆ

ವಿಜಾಪುರ: ಮೇ 2,1993 ಡಿಸೆಂಬರ್ 6 ರ ನಂತರ ದೇಶದ ಪರಿಸ್ಥಿತಿ ಅತ್ಯಂತ ಸೂಕ್ಷ್ಮವಾಗಿದ್ದು ಕೋಮುವಾದಿ ಶಕ್ತಿಗಳು ದೇಶದ ಸರ್ವಸ್ವವನ್ನೇ ಲೂಟಿ ಮಾಡುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ದೇಶದ ಸಮಸ್ತ ಕಾರ್ಮಿಕರು ಕೋಮುವಾದಿ ವಿಷ ಶಕ್ತಿಗಳಿಗೆ ಬಲಿಯಾಗದೇ ದೇಶದ ಸಮಗ್ರತೆ ಶಾಂತಿ ಸೌಹಾರ್ದತೆಗಳನ್ನು ಕಾಯ್ದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಶ್ರೀ ಎಂ. ಮದನಗೋಪಾಲ್ ಅವರು ಕರೆ ನೀಡಿದರು.

ಮೇ 1 ರ ವಿಶ್ವ ಕಾರ್ಮಿಕರ ದಿನಾಚರಣೆಯ ನಿಮಿತ್ತ ಏರ್ಪಡಿಸಲಾಗಿದ್ದ ಸಾರ್ವಜನಿಕ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದ ಜಿಲ್ಲಾಧಿಕಾರಿಗಳು ಇಲ್ಲಿಯವರೆಗೆ ಸಂಘಟಿತರಾದ ಕಾರ್ಮಿಕರ ಸಂಘಟನೆಯಲ್ಲಿಯೇ ಎಲ್ಲರೂ ಆಸಕ್ತಿ ವಹಿಸಿದ್ದು, ಅಸಂಘಟಿತ ಕಾರ್ಮಿಕರ ಸಂಘಟನೆಗಾಗಿ ಯಾರೂ ಆಸಕ್ತಿ ವಹಿಸುತ್ತಿಲ್ಲ. ಆದ್ದರಿಂದ ಅಸಂಘಟಿತ ಕಾರ್ಮಿಕರ ಸಂಘಟನೆಗಾಗಿ ಎಲ್ಲರೂ ಪ್ರಯತ್ನಿಸಬೇಕು ಎಂದು ಅವರು ಮನವಿಮಾಡಿಕೊಂಡರು.

ಇಲ್ಲಿಯ ಗುರುಭವನದಲ್ಲಿ ಏರ್ಪಡಿಸಲಾಗಿದ್ದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯದ ಕಾರ್ಮಿಕ ಮುಖಂಡ ಶ್ರೀ ಎನ್. ಕೆ. ಉಪಾಧ್ಯಾಯ ಅವರು ವಹಿಸಿದ್ದರು.

ಸಭೆಯಲ್ಲಿ ಶ್ರೀ ನೀಲಗುಂದ ಶ್ರೀಗಳು ನಗರ ಸಭೆಯ ಅಧ್ಯಕ್ಷರಾದ ಶ್ರೀ ಶಿವಾನಂದ ಪಾಟೀಲ ಶ್ರೀ ಕೆ.ಎಫ್. ಅಂಕಲಗಿ, ಶ್ರೀ ದೇಶನಾಳಕರ ಮಾಜಿ ಶಾಸಕರು, ಶ್ರೀಮತಿ ಜಯಲಕ್ಷ್ಮಿ ಯರನಾಳ, ಶ್ರೀಮತಿ ಲಕ್ಷ್ಮಿ ದೇಸಾಯಿ, ಶ್ರೀ ವಿ. ಎನ್. ತೊರಗಲ್, ಶ್ರೀ ವಿಜಯ ಜೋಶಿ, ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಶ್ರೀ ಭೀಮಸೀ ಕಲಾದಗಿ, ಶ್ರೀ ಪ್ರಕಾಶ್ ಹಿಟ್ನಳ್ಳಿ ಅವರು ಮಾತನಾಡಿದರು.

ಇದಕ್ಕೆ ಮುನ್ನ ಪ್ರಾಂತ ರೈತ ಸಂಘದ ಕಾರ್ಯಾಲಯದ ಎದುರಿನಲ್ಲಿ ಲಾರಿ ಹಮಾಲರ ಸಂಘದ ಅಧ್ಯಕ್ಷರಾದ ಶ್ರೀ ಹುಸೇನ್‌ಬಾಷಾ ದೊಡ್ಡಮನಿ ಅವರು ಕಾರ್ಮಿಕ ಧ್ವಜಾ ರೋಹಣ ಮಾಡಿದರು.

ಬಳಿಕ ಇಲ್ಲಿಂದಲೇ ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ.ಗಳ ನೇತೃತ್ವದಲ್ಲಿ ವಿವಿಧ ಸಂಘಗಳ ನೌಕರದಾರರು ಕಾರ್ಮಿಕರು ನಗರದ ಪ್ರಮುಖ ಬೀದಿಗಳಲ್ಲಿ ವಿಶ್ವದ ಕಾರ್ಮಿಕರೇ ಒಂದಾಗಿರಿ, ಕೋಮುವಾದಿಗಳಿಗೆ ಧಿಕ್ಕಾರ ಮುಂತಾದ ಘೋಷಣೆಗಳನ್ನು ಹಾಗೂ ಕ್ರಾಂತಿ ಗೀತೆಗಳನ್ನು ಹಾಡುತ್ತಾ ಬೃಹತ್ ಮೆರವಣಿಗೆ ನಡೆಸಿದರು.

ಪ್ರಾರಂಭದಲ್ಲಿ ಶ್ರೀ ಎಲ್.ಕೆ. ಚಂಬಳಕರ ಅವರು ಸ್ವಾಗತ ಕೋರಿದರು. ಶ್ರೀ ಸದಾನಂದ ಮೋದಿ ಇವರು ವಂದನಾರ್ಪಣೆ ಮಾಡಿದರು. ಶ್ರೀ ಮುನ್ನಸಾಬ ಕಲಾದಗಿ ಇವರು ಸಭೆಯ ಸಂಚಾಲನೆ ಮಾಡಿದರು.

ಗುಲ್ಬರ್ಗಾದಲ್ಲಿ ಕಾರ್ಮಿಕರಿಂದ ಮತ ಪ್ರದರ್ಶನ

ಕೇಂದ್ರ ಸರ್ಕಾರ ಇತ್ತೀಚಿಗೆ ಸಂಘಟಿತ ಕಾರ್ಮಿಕರಿಗೆ ಹೊಸ ಪೆನ್‌ಶನ್ ವೇತನ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದ ಪೆನಶನ್ ಕಾರ್ಮಿಕರಿಗೆ ಮೂರನೆಯ ಲಾಭ ಸಿಗುವ ಹಾಗೆ ಮಸೂದೆಯಲ್ಲಿ ಬದಲಾವಣೆಗಳನ್ನು ಮಾಡಬೇಕೆಂದು ಒತ್ತಾಯಿಸಿ ಅಸಿಸ್ಟಂಟ್ ಪ್ರಾವಿಡೆಂಟ್ ಫಂಡ್ ಕಮಿಷನರ್‌ರವರ ಕಾರ್ಯಾಲಯದ ಎದುರುಗಡೆ ದಿನಾಂಕ ಎಪ್ರಿಲ್ 30,1993 ರಂದು ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್ಸ್ (ಎಸ್.ಟಿ.ಸಿ.) ವರ್ಕರ್ಸ್ ಯೂನಿಯನ್ (ಸಿಟು) ಧರಣಿ ಸತ್ಯಾಗ್ರಹ ಮಾಡಿ ಮನವಿ ಪತ್ರವನ್ನು ಸಲ್ಲಿಸಿತು. ಕೇಂದ್ರ ಕಾರ್ಮಿಕ ಮಂತ್ರಿಗಳಿಗೆ ಹಾಗೂ ಪ್ರಧಾನಮಂತ್ರಿಯವರಿಗೂ ಮನವಿ ಪತ್ರಗಳನ್ನು ರವಾನಿಸಲಾಯಿತು.

ಕಾರ್ಮಿಕರಿಗೆ ನಿವೃತ್ತಿಯಾಗುವಾಗ ಮೂರನೆಯ ಲಾಭ ಸಿಗಬೇಕು. ಪೆನ್‌ಶನ್ ಕಾರ್ಮಿಕರಿಗೆ ನಿವೃತ್ತಿಯಾಗುವಾಗ ಹೆಚ್ಚಿನ ಪೆನ್‌ಶನ್ ಲಾಭ ಸಿಗಬೇಕು. ಪೆನ್‌ಶನ್ ಕಾರ್ಮಿಕರಿಗೆ ನಿವೃತ್ತಿಯಾದ ಮೇಲೆ ಪೆನ್‌ಶನ್ ವೇತನಕ್ಕೆ ಬೆಲೆ ಏರಿಕೆಗನುಗುಣವಾಗಿ ತುಟ್ಟಿ ಭತ್ಯೆ ಸಿಗಬೇಕು. ಪೆನ್‌ಶನ್ ಕಾರ್ಮಿಕರಿಗೆ ನಿವೃತ್ತಿಯಾಗುವ 60 ತಿಂಗಳ ಅಥವಾ 5 ವರ್ಷದ ಸಂಬಳ ಆವರೇಜ್ ಮೇಲೆ ನಿವೃತ್ತಿ ವೇತನ ಪೆನಶನ್ ಸಂಬಳ ಕೊಡುತ್ತೆವೆಂದು ತಿಳಿಸಿದ್ದೀರಿ. ಅದನ್ನು ಬದಲಾವಣೆ ಮಾಡಿ ಪೆನಶನ್ ಕಾರ್ಮಿಕನಿಗೆ ನಿವೃತ್ತಿಯಾದ ತಿಂಗಳ ಸಂಬಳ ಮೇಲೆ ಪೆನಶನ್ ಸಂಬಳ ಕೊಡಬೇಕು. ಕಾರ್ಮಿಕರ ಕುಟುಂಬ ಕಲ್ಯಾಣ ನಿಧಿ ಪನಶನ್ ಮುಂದುವರಿಯಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಹಿಂದಿ ಕಡ್ಡಾಯಕ್ಕೆ ಎಸ್.ಎಫ್.ಐ. ವಿರೋಧ

ಪ್ರೌಢ ಶಿಕ್ಷಣದಲ್ಲಿ ಹಿಂದಿ ಕಡ್ಡಾಯವನ್ನು ತೀವ್ರವಾಗಿ ಖಂಡಿಸುವುದಲ್ಲದೆ, ಈ ಆಜ್ಞೆಯನ್ನು ಸರ್ಕಾರ ತಕ್ಷಣ ವಾಪಸ್ಸು ಪಡೆದು, ಹಿಂದಿಯನ್ನು ಕೇವಲ ಐಚ್ಛಿಕ ಭಾಷಾ ವಿಷಯವಾಗಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯಸಮಿತಿ ಸರ್ಕಾರವನ್ನು ಬಲವಾಗಿ ಒತ್ತಾಯಿಸಿದೆ.

ಈ ಕುರಿತು ಮೇ 3 ರಂದು ಬೆಂಗಳೂರಿನಲ್ಲಿ ಸೇರಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು. ರಾಜ್ಯ ಸಮಿತಿ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಮಾತೃ ಭಾಷೆ ಬಿಟ್ಟು ಬೇರಾವುದೇ ಭಾಷೆ ಕಡ್ಡಾಯಗೊಳಿಸುವುದು ವೈಜ್ಞಾನಿಕ ಭಾಷಾ ಸೂತ್ರವಾಗಿರಲು ಸಾಧ್ಯವೇ ಇಲ್ಲ. ಈಗಾಗಲೇ ಕಡ್ಡಾಯವಾಗಿರುವ ಇಂಗ್ಲೀಷ್‌ನೊಟ್ಟಿಗೆ ಹಿಂದಿ ಕಡ್ಡಾಯವಾಗಿ ವಿದ್ಯಾರ್ಥಿಗಳ ಮೇಲೆ ಹೇರುವುದು ಶಿಕ್ಷಣವನ್ನು ಜನಸಾಮಾನ್ಯರಿಂದ ವಂಚಿಸುವ ಪ್ರಯತ್ನವಲ್ಲದೆ ಮತ್ತೇನಲ್ಲ. ಈ ರೀತಿ ಭಾಷೆಗಳನ್ನು ಜನರ ಮೇಲೆ ಹೇರುತ್ತಿರುವುದರಿಂದ ರಾಷ್ಟ್ರದ ಕೆಲವು ಭಾಗಗಳಲ್ಲಿ ಈಗಾಗಲೇ ಹಿಂಚಾರಗಳು, ಪ್ರತ್ಯೇಕತಾವಾದದ ಬೆಳವಣಿಗೆಗಳಿಗೆ ಕಾರಣವಾಗುತ್ತಿದೆ. ಮಾತೃ ಭಾಷೆ ಮಾತ್ರ ಕಡ್ಡಾಯವಾಗಿದ್ದು ಉಳಿದ ಭಾಷೆಗಳು ಕೇವಲ ಐಚ್ಛಿಕವಾಗಿರಬೇಕು.

ಪ್ರೌಢ ಶಿಕ್ಷಣದ ಪರೀಕ್ಷೆಗಳನ್ನು 600 ಅಂಕಗಳಿಗೆ ಸೀಮಿತಗೊಳಿಸಿ ಮಾತೃಭಾಷೆ ಕನ್ನಡಕ್ಕೆ 150 ಅಂಕಗಳನ್ನು ಮುಂದುವರಿಸಿ, ತೃತೀಯ ಭಾಷೆಯನ್ನು 50 ಅಂಕಗಳಿಗೆ ಮಿತಿಗೊಳಿಸಬೇಕು.

1993-94 ರ ಶೈಕ್ಷಣಿಕ ವರ್ಷದಿಂದಲೇ ಈ ರೀತಿಯಾದ ಭಾಷಾ ನೀತಿಯನ್ನು ಸರ್ಕಾರ ಜಾರಿಗೊಳಿಸಬೇಕು. ಜಾರಿಗೊಳಿಸಲು ಸರ್ಕಾರ ವಿಫಲವಾದರೆ ಜೂನ್ ತಿಂಗಳಲ್ಲಿ ರಾಜ್ಯಾದ್ಯಂತ ವಿದ್ಯಾರ್ಥಿಗಳ ಬೃಹತ್ ಆಂದೋಳನ ಸಂಘಟಿಸಲು ಎಸ್.ಎಫ್.ಐ. ತೀರ್ಮಾನಿಸಿದೆ.

ಭಾಷಾ ನೀತಿ ಮತ್ತು ಮತ್ತಿತರ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಎಸ್.ಎಫ್.ಐ. ರಾಜ್ಯ ಸಮಿತಿ ನಿಯೋಗವೊಂದು ಪ್ರೌಢ ಶಿಕ್ಷಣ ಸಚಿವರನ್ನು ಭೇಟಿಯಾಗಲು ಸಭೆಯಲ್ಲಿ ನಿರ್ಧರಿಸಲಾಯಿತು.

KRNM/BGS-405 MAG(2) PRB DECR 319-78/79

ಮೇ 31 : ವಿದ್ಯುಚ್ಛಕ್ತಿ ಮಂಡಳಿ ಮುಂದ ರೈತರ ಧರಣಿ

ತೋಟಗಳಿಗೆ ಬಳಸುವ ವಿದ್ಯುತ್ ಮೋಟಾರುಗಳಿಗೆ ಮೀಟರ್ ಹಾಕುವುದು ವಿದ್ಯುತ್ ಖರ್ಚು ಹೆಚ್ಚಿಸುವುದನ್ನು ವಿರೋಧಿಸಿ ಮೇ 31,1993 ರಂದು ಬೆಂಗಳೂರಿನ ವಿದ್ಯುತ್ ಬೋರ್ಡಿನ ಮುಂದೆ ಧರಣಿ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ರೈತರಿಗೆ ಕರ ನೀಡಿದೆ.

ಇದಕ್ಕೆ ತಯಾರಿಯಾಗಿ ತಾಲೂಕು ಅಥವಾ ಜಿಲ್ಲಾವಾರು ಪಂಪಸೆಟ್ ಹೊಂದಿರುವ ರೈತರ ಸಮಾವೇಶಗಳನ್ನು ನಡೆಸಲಾಗುವುದು.

ಬೇಡಿಕೆಗಳು

1. ಕಾಂಗ್ರೆ ಕೇಂದ್ರ ಸರಕಾರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿ 50 ಪೈಸೆಯಂತೆ ಯುನಿಟಿಗೆ ಹಾಕಲು ರಾಜ್ಯಕ್ಕೆ ನಿರ್ದೇಶನ ಕೊಟ್ಟಿದ್ದು ಅದನ್ನು ಜಾರಿಗೆ ತರದಂತೆ ವಿರೋಧಿಸುವುದು.

2. ಸರಿಯಾದ ನಿಗದಿತ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲು ಒತ್ತಾಯಿಸುವುದು.

3. ಟ್ರಾನ್ಸ್‌ಫಾರ್ಮರ್‌ಗಳನ್ನು ಅವಶ್ಯಕತೆಯಾಧಾರದಲ್ಲಿ ಕೂಡಿಸಲು ಒತ್ತಾಯಿಸುವುದು

4. ನೂರಾರು ಕೋಟಿ ಕೈಗಾರಿಕೆಗಳ ಮಾಲೀಕರಿಂದ ಬಾಕಿಯಿರುವುದನ್ನು ವಸೂಲಿ ಮಾಡಬೇಕು ಇಲ್ಲವೆ ಅವರ ಆಸ್ತಿ ಪಾಸ್ತಿ ಮುಟ್ಟುಗೋಲು ಹಾಕಬೇಕು.

5. ನಗರದಲ್ಲೇ ಕೆ.ಇ.ಬಿ. ಅಧಿಕಾರಿಗಳ ಭ್ರಷ್ಟಾಚಾರದಿಂದ ಕಳ್ಳ ಸಂತೆಯಲ್ಲಿ ಸರಬರಾಜಾಗುವ ವಿದ್ಯುತ್ ಪೋಲಾಗುವುದನ್ನು ತಡೆಯಬೇಕು.

ಭಾರತ್ ಬಂದ್ ಕಾರ್ಯಕ್ರಮ : ಕಾರ್ಮಿಕ ಸಂಘಟನೆಯ ಪ್ರಾಯೋಜಕ ಸಮಿತಿ ಇತರ ವಿಭಾಗದ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ಒಳಗೊಳಿಸಿ ಕಾಂಗ್ರೆ ಕೇಂದ್ರ ಸರಕಾರದ ಆರ್ಥಿಕ ನೀತಿಯನ್ನು ಸೋಲಿಸಲು ಸೆಪ್ಟೆಂಬರ್ ಒಂಬತ್ತರಂದು ಭಾರತ ಬಂದ್‌ಗೆ ಆಗಸ್ಟ್ 19 ಕ್ಕೆ ಜೇಲಭರೋ ಚಳುವಳಿಗೆ ಕರೆಕೊಟ್ಟಿರುವ ಹಿನ್ನೆಲೆಯಲ್ಲಿ ಪ್ರಾಂತ ರೈತ ಸಂಘ ಡಂಕೆಲ್ ಕರಡನ್ನು ವಿರೋಧಿಸಿ ಭಾರತ ಬಂದ್‌ಗೆ ಕರೆ ಪ್ರಚಾರ ಕಾರ್ಯಕ್ರಮವನ್ನು ನಡೆಸಲು ತೀರ್ಮಾನಿಸಲಾಯಿತು. ಅದಕ್ಕಾಗಿ ಜಿಲ್ಲಾವಾರಾಗಿ ಪ್ರದೇಶವಾರಾಗಿ ವ್ಯಾಪಕ ಜೀಪಜಾಥಾ ಕಾರ್ಯಕ್ರಮ ಹಾಕಿಕೊಳ್ಳಲು ಅದು ನಿರ್ಧರಿಸಿದೆ.

ಮೇ ಅಂತ್ಯದ ವೇಳೆ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯಕಾರಿ ಸಮಿತಿಯ ಸಭೆ ನಡೆಯಲಿದ್ದು ಅಖಿಲ ಭಾರತ ಕಿಸಾನ್ ಸಭಾ ಹಣಕಾಸು ಕಾರ್ಯದರ್ಶಿಗಳಾದ ಕಾಂ ಎಸ್. ರಾಮಚಂದ್ರ ಪಿಳ್ಳೈಯವರು ಈ ಸಭೆಗೆ ಬರಲಿದ್ದಾರೆ. ರಾಷ್ಟ್ರದ ಕೃಷಿಕ ಪರಿಸ್ಥಿತಿಯ ಕುರಿತು ವಿಶೇಷ ಚರ್ಚೆ ನಡೆಯಲಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ತಿಳಿಸಿದೆ.

ಜೀವನ ವೆಚ್ಚ ಸೂಚ್ಯಂಕ

ಕರ್ನಾಟಕ ರಾಜ್ಯ ಸರಕಾರ ಪ್ರಕಟಿಸಿರುವ ಕೈಗಾರಿಕಾ ಕಾರ್ಮಿಕ ವರ್ಗ ಗ್ರಾಹಕ ಬೆಲೆ ಸೂಚ್ಯಂಕ ರಾಜ್ಯ ವಿವಿಧ ನಗರಗಳಲ್ಲಿ 1993ರ ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಹೀಗಿದ್ದವು

ಕ್ರ. ಸಂ.ಕೇಂದ್ರಗಳು	ಜನವರಿ 1993		ಫೆಬ್ರವರಿ 1993	
ರಾಜ್ಯ ಸರಣಿ	1987-88ರ ಬೆಲೆಗಳಲ್ಲಿ	1060ರ ಬೆಲೆಗಳಲ್ಲಿ	1987-88ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ
1. ಬಳ್ಳಾರಿ	166	1227	164	1212
2. ಬದ್ರಾವತಿ	157	1443	155	1424
3. ದಾವಣಗೆರೆ	161	1331	161	1331
4. ಗುಲ್ಬರ್ಗಾ	169	1396	165	1363
5. ಹಾಸನ	152	1406	153	1415
6. ಮಂಡ್ಯ	160	1267	157	1243
7. ಮಂಗಳೂರು	157	1462	159	1480
8. ಮೈಸೂರು	152	1376	151	1367
9. ತುಮಕೂರು	145	-	145	-
10. ದಾಂಡೇಲಿ	161	-	163	-
11. ರಾಯಚೂರು	166	-	163	-
ಕೇಂದ್ರ ಸರಣಿ	1982ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ	1982ರ ಬೆಲೆಗಳಲ್ಲಿ	1960 ರ ಬೆಲೆಗಳಲ್ಲಿ
1. ಬೆಂಗಳೂರು	241	1364	241	1364
2. ಬೆಳಗಾಂ	252	-	249	-
3. ಹುಬ್ಬಳ್ಳಿ-ಧಾರವಾಡ	255	-	253	-
4. ಮಡಿಕೇರಿ	235	-	234	-
ಅಖಿಲ ಭಾರತ	241	1188	242	1193

ಪೆನ್ಷನ್ ಬಗ್ಗೆ ಸಿಐಟಿಯು ರಾಜ್ಯ ಸಮಾವೇಶ:

ಪುಟ 1ರಿಂದ

ಎಂದು ಗೇಲಿ ಮಾಡಿದರು. ಅಖಿಲಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹಾಗೂ ಹಣಕಾಸು ಸಂಸ್ಥೆಗಳ ನೌಕರರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪ್ರಮುಖ ಮುಖಂಡರಾದ ಆರ್.ಎಸ್. ಗೋಡ್‌ಬೋಳೆ) ನಮ್ಮ ದೇಶದಲ್ಲಿ ಈಗ ಸಿಗುವುದು ಅಗತ್ಯ ಆಧಾರಿತ ಸಂಬಳ ಮಾತ್ರ. ನ್ಯಾಯ ವೇತನ ಸಿಗುವಂತಿದ್ದರೆ ಈ ಸೌಲಭ್ಯ ಕೇಳುವ ಅಗತ್ಯವೇ ಇರುತ್ತಿರಲಿಲ್ಲ. ನಿವೃತ್ತಿ ಸೌಲಭ್ಯ ಸಾಕಷ್ಟು ಇಟ್ಟಿದ್ದರೆ ಮೂರನೇ ಸೌಲಭ್ಯವಾಗಿ ಕೇಳುವ ಅಗತ್ಯನೂ ಇರುತ್ತಿರಲಿಲ್ಲ, ಸರಿಯಾದ ನಿವೃತ್ತಿ ವೇತನ ಕೊಡುವಂತಿದ್ದರೆ ಒಂದು ಸೌಲಭ್ಯ ಸಾಕಿತ್ತು ಎಂದು ಅವರು ಹೇಳಿದರು. ಬ್ಯಾಂಕ್ ಉದ್ದಿಮೆ ನಷ್ಟದಲ್ಲಿ ಎಂದು ಚಿತ್ರಿಸುತ್ತಿರುವವರ ಬಗ್ಗೆ ಟೀಕಿಸಿದ ಅವರು ಕೈಗಾರಿಕೆಗಳಿಗೆ ನೀಡಿದ ಸಾಲಗಳಲ್ಲಿ ಸಣ್ಣ ಕೈಗಾರಿಕೆಗಳು ಮಾಡಿರುವ ಬಾಕಿ ಬಹಳ ಕಮ್ಮಿ. 74 ಶೇ ಬಾಕಿ ಇತರ ಮಧ್ಯಮ ಹಾಗೂ ದೊಡ್ಡ ಉದ್ದಿಮೆದಾರರದಷ್ಟೇ. ಸರಕಾರ ಈ ರೀತಿ ಬಾಕಿಯಿರಿಸಿಕೊಂಡವರ ಪಟ್ಟಿ ಏಕೆ ಪ್ರಕಟಿಸಬಾರದು ಎಂದು ಪ್ರಶ್ನಿಸಿದರು ಗೋಡ್‌ಬೋಳೆ ಕುಟುಂಬ ಪೆನ್ಶನ್ ಯೋಜನೆಯನ್ನು ಭವಿಷ್ಯ ನಿಧಿಯೊಂದಿಗೆ ಸೇರಿಸುವ ಪ್ರಯತ್ನ ಒಂದು ಹೊಸ ಸೌಲಭ್ಯ ಅಲ್ಲಷ್ಟೇ ಅಲ್ಲ, ಸೌಲಭ್ಯ ಕಡಿತ ಮಾಡುವ ಪ್ರತಿಗಾಮಿ ಪ್ರಯತ್ನ ಎಂದು ವರ್ಣಿಸಿದ ಅವರು ಐಕ್ಯ ಹೋರಾಟ ಮಾಡಿದರೆ ಮೂರನೇ ಸೌಲಭ್ಯವಾಗಿ ಪೆನ್ಶನ್ ಬೇಡಿಕೆ ಈಡೇರಿಸಿಕೊಳ್ಳಲು ಸಾಧ್ಯ ಎಂದರು.

"ಒಂದೂವರೆ ಸೌಲಭ್ಯ!"

ಕೇಂದ್ರ ಸರಕಾರದ ಹೊಸ ಪೆನ್ಶನ್ ಯೋಜನೆಯಲ್ಲಿನ ಮೋಸವನ್ನು ವಿವರವಾಗಿ ಬಯಲಿಗೆಳೆದ ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಸಂಸತ್ತಿನ ಮಂಡಿಸಿದ ಮಸೂದೆಗೂ ಭವಿಷ್ಯನಿಧಿ ಇಲಾಖೆ ನೀಡಿರುವ ವಿವರಗಳಲ್ಲಿ ವ್ಯತ್ಯಾಸಗಳಾವು ಎಂದು ಗುರುತಿಸಿದರು. ಸರಕಾರ ಹೇಗಾದರೂ ಈ ಯೋಜನೆಯನ್ನು ಕಾರ್ಮಿಕರಿಗೆ ಮಾರಲು ಹವಣಿಸುತ್ತಿದೆ. ಕೆಲವು ಕಾರ್ಮಿಕ ಸಂಘಗಳು ಅವರ ಸೇಲ್ಸ್ ಬಾಯ್‌ಗಳಂತೆ ವರ್ತಿಸುತ್ತಿದ್ದಾರೆ. ಎಂದರು. ಇದು ಮೂರು ಸೌಲಭ್ಯಕ್ಕಿಂತ ಸ್ವಲ್ಪ ಕಮ್ಮಿಯಷ್ಟೆ ಎಂದು ಎ.ಐ.ಟಿ.ಯು.ಸಿ. ಹೇಳುವುದರ ಹಿಂದಿರುವ ಸುಳ್ಳನ್ನು ಬಯಲಿಗೆಳೆಯುತ್ತಾ ಅವರು ಎರಡನೇ ಸೌಲಭ್ಯವೂ ಅಲ್ಲ. ಒಂದೂವರೆ ಸೌಲಭ್ಯದ ಮಟ್ಟಿಗಿಳಿಸಲಾಗಿದೆ ಎಂದರು. ನಿವೃತ್ತಿಯ ಅಂಚಿನಲ್ಲಿರುವವರಿಗಾಗಿ ಸರಕಾರದ ಯೋಜನೆಯನ್ನು ಸ್ವೀಕರಿಸಬೇಕು ಎನ್ನುವ ಎ.ಐ.ಟಿ.ಯು.ಸಿ. ಮುಖಂಡರಿಗೆ ಈ ಯೋಜನೆಯಿಂದ ಇವರಿಗೂ ಏನೂ ಪ್ರಯೋಜನವಿಲ್ಲ ಎಂಬುದು ತಿಳಿದಿಲ್ಲವೇ ಎಂದು ಪ್ರಶ್ನಿಸಿದರು. ಏಕೆಂದರೆ ಈ ಯೋಜನೆಯಲ್ಲಿ ಕಾರ್ಮಿಕರಿಗೆ ಏನಾದರೂ ಪ್ರಯೋಜನ ಸಿಗಬೇಕಾದರೆ ಅವರು ಕನಿಷ್ಟ ಹತ್ತು ವರ್ಷ ಭವಿಷ್ಯ ನಿಧಿ ಸದಸ್ಯರಾಗಿರಬೇಕು. ಆಗ ಅವರಿಗೆ ಸಿಗುವ ಪೆನ್ಶನ್ 200 ರೂ ಆದರೆ ಬಹುಪಾಲು ಬೀಡಿ ಕಾರ್ಮಿಕರು ಮತ್ತು ಇತರ ಕಾರ್ಮಿಕರಿಗೆ ಇದು ಕೂಡಾ ಸಿಗುವುದಿಲ್ಲ ಏಕೆಂದರೆ ಉದಾಹರಣೆ 45 ಲಕ್ಷ ಬೀಡಿ ಕಾರ್ಮಿಕರಲ್ಲಿ ಭವಿಷ್ಯ ನಿಧಿ ಸದಸ್ಯರಾಗಿರುವವರು ಕೇವಲ 11 ಲಕ್ಷ, ಹಿಂದಿನ ಕುಟುಂಬ ಪೆನ್ಶನ್ ಯೋಜನೆಗೆ ಸುಮಾರು 30 ಲಕ್ಷ ಕಾರ್ಮಿಕರು ಸದಸ್ಯರೇ ಆಗಿರಲಿಲ್ಲ. ಹೀಗಿರುವಾಗ ಎ.ಐ.ಟಿ.ಯು.ಸಿ. ಮುಖಂಡರು ಹೇಳುವ "ಬಡಪಾಯಿ" ಕಾರ್ಮಿಕರಿಗೆ ಈ ಯೋಜನೆಯಿಂದ ಏನೂ ಪ್ರಯೋಜನವಿಲ್ಲ ಎಂದು ಕಾಂ. ವಿ.ಜೆ.ಕೆ. ವಾದಿಸಿದರು. ಕಾರ್ಮಿಕ ಆಂದೋಲನ ಈ ಪೆನ್ಶನ್ ಮೊದಲಿನದಲ್ಲಿ ಯಾವ ಬದಲಾವಣೆ ಬಯಸುತ್ತದೆ ಎಂದು ವಿ.ಜೆ.ಕೆ. ನಾಯರ್‌ರವರು ಮಂಡಿಸಿದ ಪ್ರಬಂಧ ಮುಂದಿಟ್ಟಿತು.

ಸರಕಾರಕ್ಕೆ ಹೊಣೆಯಿಲ್ಲವೇ!

1971 ರಲ್ಲಿ ಬ್ಯಾಂಕ್ ರಾಷ್ಟ್ರೀಕರಣ ಮಾಡಿದ ಸಂದರ್ಭದಲ್ಲೇ ಬಂದ ಕುಟುಂಬ ಪೆನ್ಶನ್ ಯೋಜನೆಯ ಮೂಲಕ ಸಾಮಾಜಿಕ ಭದ್ರತೆ ಸರಕಾರದ ಹೊಣೆ ಎಂಬ ಅಂಶವನ್ನು ಸರಕಾರ ಒಪ್ಪಿಕೊಂಡಂತಾಗಿತ್ತು. ಈಗ ಅದರಿಂದ ನುಣುಚಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಎಂದು ಕರ್ನಾಟಕ ಬಿ.ಇ.ಎಫ್.ಐ. ಪ್ರಧಾನ ಕಾರ್ಯದರ್ಶಿ ಎಸ್. ರೇವಣ್ಣ ಹೇಳಿದರು. ಉದ್ದಿಮೆಗಳು ಬೆಳೆದು ಬಂದಂತೆ ಸಾಮಾಜಿಕ ಭದ್ರತೆಯ ಸೌಲಭ್ಯಗಳ ಪರಿಕಲ್ಪನೆಯಲ್ಲಿ ಬೆಳೆದು ಬಂದುದನ್ನು ಸ್ಥೂಲವಾಗಿ ಪರಿಶೀಲಿಸಿದ ಕಾಂ. ರೇವಣ್ಣ ಹಲವು ವಿದೇಶಗಳಲ್ಲಿ ಮುಂದುವರಿದ ಬಂಡವಾಳಶಾಹೀ ದೇಶಗಳಷ್ಟೇ, ನಮ್ಮ ಪಕ್ಕದ ಪಾಕಿಸ್ತಾನದಲ್ಲೂ ನಿವೃತ್ತಿ ಸೌಲಭ್ಯ ನೀಡುವಲ್ಲಿ ಸರಕಾರ ತನ್ನ ಹೊಣೆಗಾರಿಕೆಯನ್ನು ಒಪ್ಪಿಕೊಂಡಿದೆ. 'ಜಾಗತೀಕರಣ'ದ ಮಾತನಾಡುವ ಸರಕಾರ ಇತರ ಸರಕಾರಗಳು ಒಪ್ಪಿಕೊಂಡ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ ಎಂದರು.

"ನಿವೃತ್ತಿ ಶಾಪವಾಗದಿರಲಿ"

ನಿವೃತ್ತಿ ಎಂಬುದು ಶಾಪವಾಗದಿರಬೇಕಾದರೆ ಪೆನ್ಶನ್ ಮೂರನೇ ಸೌಲಭ್ಯವಾಗಿ ದೊರಯಲೇ ಬೇಕು. ಇದನ್ನು ಪಡೆಯಲು ಸಾಧ್ಯವೇ? ಖಂಡಿತಾ ಸಾಧ್ಯ ಎಂದರು ಅಖಿಲ ಭಾರತ ವಿಮಾ ನೌಕರರ ಸಂಘದ ಉಪಾಧ್ಯಕ್ಷ ಕೆ.ವಿ. ಶ್ರೀನಿವಾಸ್. ಕಾರ್ಮಿಕ ವರ್ಗ ಇದುವರೆಗೆ ಪಡೆದ ಯಾವುದೇ ಸವಲತ್ತು ಬಿಟ್ಟಿಯಾಗಿ ಬಂದಿಲ್ಲ. ಹೋರಾಟದ ಮೂಲಕ ಬಂದಿದೆ. ಅವುಗಳಲ್ಲಿ ಯಾವುದನ್ನು ಬಿಟ್ಟುಕೊಡಬಾರದು ಹೀಗಿರುವಾಗ ಭವಿಷ್ಯನಿಧಿ ಸೌಲಭ್ಯದ ಬದಲಾಗಿ ಪೆನ್ಶನ್ ಒಪ್ಪಿಕೊಳ್ಳೋಣ ಎನ್ನುವ ಕೆಲವು ಸಂಘಗಳ ಪ್ರತಿಪಾದನೆ ವಂಚಕ ದ್ರೋಹ ಎಂದರು. ಮೂರನೇ ಸೌಲಭ್ಯಕ್ಕಾಗಿ ಇದುವರೆಗಿನ ಐಕ್ಯತೆ ಹೋರಾಟ ಫಲ ತಂದಿದೆ. ಈ ಹೋರಾಟದಲ್ಲಿ ಆತ್ಮವಿಶ್ವಾಸ ಬೇಕು ಎಂದರು.

ಸಮಾವೇಶದಲ್ಲಿ ರಾಜ್ಯದ ಹಲವೆಡೆಗಳಿಂದ ಬಂದಿದ್ದ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್ ಕಾರ್ಮಿಕ ವರ್ಗ ಹೋರಾಟದ ಮೂಲಕವೇ ಸೌಲಭ್ಯಗಳನ್ನು ಗೆದ್ದು ಕೊಂಡದ್ದು- ಮೊದಲು ಭವಿಷ್ಯ ನಿಧಿಯಿರಲಿಲ್ಲ. ನಂತರ ಸಂಬಳ 6 ಶೇ. ವಾಯಿತು. ಇದು 8.33. ಶೇ ಆಯಿತು. ಈಗ 10 ಶೇ. ಆಗಿದೆ. 1971 ರವರೆಗೆ ಗ್ರಾಚ್ಯುಟಿ ಕಾಯಿದೆಯೇ ಇರಲಿಲ್ಲ ಎಂದು ಉದಾಹರಣೆ ನೀಡಿದರು. ಕಾರ್ಮಿಕ ಸಂಘಗಳಲ್ಲಿ ಕೆಲವು ತೋರುತ್ತಿರುವ ಸಮಯಸಾಧಕತೆಯ ಲಾಭ ಕಾಂಗ್ರೆ ಕಾರ್ಮಿಕ ಮಂತ್ರಿ ಸಂಗ್ಮಾಗೆ ದೊರೆಯುತ್ತಿದೆ ಎಂದರು. ಈಗಿರುವುದು ಅನ್ಯಾಯದ ವ್ಯವಸ್ಥೆ ಆದ್ದರಿಂದ ಹೋರಾಟದಲ್ಲಿ ನಂಬಿಕೆಯಿಡಿ ಎಂದು ಕರೆನೀಡಿದರು.

ಭವಿಷ್ಯನಿಧಿ ಬದಲಾಗಿ ಪೆನ್ಶನ್ ಅನ್ನು ಕಾರ್ಮಿಕ ಆಂದೋಲನ ಒಪ್ಪ... ದಿಲ್ಲ. ಅದು ಮೂರನೇ ಸೌಲಭ್ಯವಾಗಿ ದೊರೆಯಬೇಕು ಎಂದು ಸಮಾವೇಶದಲ್ಲಿ ನಿರ್ಣಯವನ್ನು ಅಂಗೀಕರಿಸಿತು. ಆರಂಭದಲ್ಲಿ ಸಿ.ಐ.ಟಿ.ಯು ರಾಜ್ಯ ಉಪಾಧ್ಯಕ್ಷ ಸಿ. ನಂಜುಂಡಪ್ಪ ಸ್ವಾಗತಿಸಿದರು.

ಈ ನ್ಯಾಯಮೂರ್ತಿಗೆ ಅರ್ಧಕೋಟಿ ರೂ.ನ..........

ಪುಟ 1ರಿಂದ

ಧೆಯ ಅಧ್ಯಕ್ಷರಾಗಿದ್ದ ರಬಿರಾಯ್ ಈ ಠರಾವನ್ನು ಮಂಡಿಸಲು ಅವಕಾಶ ನೀಡಿದರು. ಈ ಆಪಾದನೆಗಳ ಬಗ್ಗೆ ತನಿಖೆ ನಡೆಸಲು ಮೂವರು ನ್ಯಾಯಾಧೀಶರುಗಲ ಸಮಿತಿಯನ್ನು ನೇಮಿಸಿದರು. ಸುಪ್ರೀಂಕೋರ್ಟಿನ ನ್ಯಾಯಮೂರ್ತಿ ಪಿ.ಬಿ. ಸಾವಂತ್, ಮುಂಬೈ ಹೈಕೋರ್ಟಿನ ನ್ಯಾಯಮೂರ್ತಿ ದೇಸಾಯಿ ಹಾಗೂ ಪ್ರಖ್ಯಾತ ನ್ಯಾಯಾಧೀಶ ಒ. ಚಿನ್ನಪ್ಪರೆಡ್ಡಿಯವರಿದ್ದ ಈ ತನಿಖೆ ಸಮಿತಿಯ ಮುಂದೆ ಹಾಜರಾಗಿ ತನ್ನ ಸಮಜಾಯಿಷಿ ನೀಡಲು ರಾಮಸ್ವಾಮಿ ನಿರಾಕರಿಸಿದರಷ್ಟೇ ಅಲ್ಲ ಈ ನ್ಯಾಯಾಧೀಶರುಗಳ ಬಗ್ಗೆ ಕುತ್ಸಿತ ಟೀಕೆ ನಡೆಸಿದರು. ಆದರೂ ರಾಮಸ್ವಾಮಿಯವರಿಗೆ ತಮ್ಮ ಮೇಲಿನ ಆಪಾದನೆಗಳಿಗೆ ಉತ್ತರ ಕೊಡಲಿಲ್ಲ ಅವಕಾಶ ನೀಡಲಿಲ್ಲ ಎಂಬ ಅವರ ವಕೀಲರ ಸುಳ್ಳುವಾದವನ್ನು

ಕಾಂಗ್ರೆಸ್(ಐ) ಸದಸ್ಯರು ಪೂರ್ಣವಾಗಿ ಒಪ್ಪಿಕೊಂಡರು! ಒಬ್ಬರು ವ... ಕಾಂಗ್ರೆ ಮಂತ್ರಿಯಂತೂ "ಇದೇನು ಮಹಾ ಭ್ರಷ್ಟಾಚಾರ" ಎಂದರಂತೆ. ಮತ್ತೊಬ್ಬ ಕಾಂಗ್ರೆ ಸದಸ್ಯ ಇದು ಪಂಜಾಬ್-ಹರಿಯಾಣ ಹೈಕೋರ್ಟಿನ ದುಡ್ಡು, ಸಂಸತ್ತಿಗೇಕೆ ಅದರ ಚಿಂತೆ ಎಂದರಂತೆ!

ಕಾಂಗ್ರೈನ ಅಧೋಗತಿ....

ಪುಟ 1ರಿಂದ

ದಿನವೂ ಹೊಸ ಹೆಸರುಗಳು ಮಸಿ ಬಳಿದುಕೊಳ್ಳುತ್ತಿರುವಾಗ, ಎ.ಬಿ.ಬಿ. ರೈಲು ಬೋಗಿ, ಸಬ್ ಮರೀನ್, ಬಾಂಬೆ ಭೂಮಿ ಹಗರಣ ಇಂತಹ ಹತ್ತು ಹಲವು ಬಯಲಿಗೆ ಬಂದ ಹಗರಣಗಳಲ್ಲಿ, ಬಯಲಿಗೆ ಬಂದ ಹಗರಣಗಳಲ್ಲಿ ದಿನನಿತ್ಯವೂ ಮುಳುಗೇಳುವ ಈ ಪಕ್ಷಕ್ಕೆ ರಾಮಸ್ವಾಮಿಯುವರನ್ನು ದೋಷಿ ಎಂದು ಕೈ ತೋರಿಸಲು ಕೈಯೇ ಮೇಲೇಳಲಿಲ್ಲ.

ನ್ಯಾಯಾಂಗವನ್ನು ತಮ್ಮ ಸರ್ವಾಧಿಕಾರಿ ಮುಷ್ಠಿಯೊಳಕ್ಕೆ ತಂದುಕೊಳ್ಳಲು ನ್ಯಾಯಧೀಶರ ನೇಮಕಾತಿ, ವರ್ಗಾವಣೆ ಮುಂತಾದ ಅನೇಕ ಅಸ್ತ್ರಗಳನ್ನು ರೂಪಿಸಿ ನ್ಯಾಯಾಂಗದ ಘನತೆಯನ್ನು ಕುಸಿಯಲು ಕಾರಣವಾದ ಆ ಪಕ್ಷಕ್ಕೆ ನ್ಯಾಯಾಂಗ ಘನತೆಯನ್ನು ಎತ್ತಿಹಿಡಿಯುವ ಮನಸ್ಸೂ ಇರಲಿಲ್ಲ.

ದೇಶದ ಸ್ವಾತಂತ್ರ್ಯವನ್ನೇ ಮಾರಹೊರಟಿರುವ ಈ ಪಕ್ಷಕ್ಕೆ ದೇಶದ ನ್ಯಾಯಾಂಗದ ಘನತೆ, ಗೌರವಗಳ ಚಿಂತೆ, ಜನಾಭಿಪ್ರಾಯದ ಚಿಂತೆಯೂ ಬರಲಿಲ್ಲ.

ಒಂದು ಉನ್ನತ ಧ್ಯೇಯಕ್ಕಾಗಿ ಪಣತೊಡುವ ಪರಂಪರೆಯನ್ನು ಪೂರ್ಣವಾಗಿ ಕಳೆದುಕೊಂಡಿರುವ ಈ ಪಕ್ಷಕ್ಕೆ ಅಂತಹ ಪಣಕ್ಕೆ ಬದಲು ಕೊಳಚೆ ಮನಸ್ಸಿನ ನ್ಯಾಯಮೂರ್ತಿ ರಾಮಸ್ವಾಮಿಯ ಜೊತೆ ತನ್ನ ಮೇಲಿನ ಆರೋಪಗಳನ್ನು ನಿರಾಕರಿಸುವ ಹಕ್ಕನ್ನೇ ನಿರಾಕರಿಸಿಕೊಂಡು ತನ್ನ ತಪ್ಪನ್ನು ಒಪ್ಪಿಕೊಂಡಿರುವ, ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಮಂಡಲ, ಹಾಗೂ ತನ್ನನ್ನು ತನಿಖೆ ಮಾಡಿದ ನ್ಯಾಯಾಧೀಶ ಸಮಿತಿಯ ಮುಂದೆ ತನ್ನ ಉದ್ಧಟತನವನ್ನು ಮೆರೆದಿರುವ ಈ ಉದ್ಧಟನ ಕೊಳಕು ಸಂಧಾನ ನಡೆಸುವುದು ಕಾಂಗ್ರೆ ಪಕ್ಷ ಇಳಿದಿರುವ ಅಧೋಗತಿಯ ಅಳತೆಗೋಲು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಿಸಿ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಪ್ಪಯ್ಯ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. **ಸಂಪಾದಕರು : ಪಿ.ರಾಮಚಂದ್ರರಾವ್**